ISSN: 2249-2429 Volume : 8, Issue : 2, Pages 52, 7th Sept. 2018 Annual Subscription ₹.500/-

# ಶಿಕ್ಷಣ ಸೌಧ

ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನಾ ಪತ್ರಿಕೆ

**SHIKSHAN SOUDHA** *A Quarterly Education and Research Journal*



## ಮಾಧ್ಯಮಿಕ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸುವಲ್ಲಿ RMSA ಪಾತ್ರ

पढ़े चलो, बढ़े चलो
राष्ट्रीय माध्यमिक शिक्षा अभियान

## ಮಾನವ ಅಭಿವೃದ್ಧಿ ಮತ್ತು ಶಿಕ್ಷಣ

## ಭಾರತದ ಉನ್ನತ ಶಿಕ್ಷಣ ವ್ಯವಸ್ಥೆ : ಸವಾಲುಗಳು ಮತ್ತು ಪರಿಹಾರಗಳು



# ಶಿಕ್ಷಣ ಸೌಧ

ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನ ಪತ್ರಿಕೆ

7ನೇ ಸಪ್ಟಂಬರ 2018 ಸಂಪುಟ : 8 ಸಂಚಿಕೆ : 2

ಪ್ರಕಾಶಕರು :

ಜಯದೇವ ಮೈ. ಮೆಣಸಗಿ

ವಿದ್ಯಾನಿಧಿ ಪ್ರಕಾಶನ, ಗದಗ

ಮಾಜಿ ಸಿಂಡಿಕೇಟ್ ಸದಸ್ಯರು, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ

ಸಂಪಾದಕರು :

ಡಾ. ಎನ್. ಬಿ. ಕೊಂಗವಾಡ

ಸಹಸಂಪಾದಕರು :

ಡಾ. ಎಸ್. ಬಿ. ಯಾದವಾಡ



ಸಂಪಾದಕ ಮಂಡಳಿ :

- ಡಾ. ಶ್ರೀಮತಿ ಎನ್. ಲಕ್ಷ್ಮಿ
  ಡೀನ್ ಶಿಕ್ಷಣ ನಿಖಾಯ ಕರಾಮುವಿ, ಮೈಸೂರು.
- ಡಾ. ಎಸ್. ಎಸ್. ಪಾಟೀಲ
  ಡೀನ್ ಶಿಕ್ಷಣ ನಿಖಾಯ ಕುವೆಂಪು ವಿ.ವಿ. ಶಿವಮೊಗ್ಗ
- ಡಾ. ಎ. ವ್ವಿ. ಬಮಗೊಂಡ
  ಬಿ.ಎಲ್.ಡಿ.ಇ. ಶಿಕ್ಷಣ ಮಹಾವಿದ್ಯಾಲಯ, ವಿಜಯಪುರ
- ಡಾ. ಶ್ರೀಮತಿ ಶೋಭಾ ನಾಯ್ಕರ
  ಸರಕಾರಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ, ಬೆಳಗಾವಿ.
- ಡಾ. ಬಿ. ಎಲ್. ಲಕ್ಕಣ್ಣವರ
  ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ
- ಜಗನ್ನಾಥ್ ಢಾಂಗೆ
  ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ, ಶಿವಮೊಗ್ಗ.



## Shikshan Soudha

*A Quarterly Education and Research Journal*

**Vidyanidhi Prakashana ®**
**Sri Sivakumar Agency ®**
Station Road, Near Mahendrakar Circle,
GADAG-582 101 Dist. : Gadag
Karnataka State (India)
Phone : 08372-237527, 277527
email : shikshansoudha@gmail.com



The views expressed in the articles side are the individual opinions of the authors and they in no way represent or reflect the opinion of SHIKSHAN SOUDHA nor does SHIKSHAN SOUDHA subscribe to these views in no way. All disputes are subject to the jurisdiction of Gadag court only.


ಶಿಕ್ಷಣ ಸೌಧ

## ಅಂತರಂಗ
## Inside

### ಸೈದ್ಧಾಂತಿಕ (Articles)


**05** ಮಾಧ್ಯಮಿಕ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸುವಲ್ಲಿ RMSA ಪಾತ್ರ
– ಪ್ರಶಾಂತ ಅ. ರುದ್ರಗೌಡರ

**08** ಸಂಗೀತದಲ್ಲಿ ಶ್ರವಣಜ್ಞಾನದ ಪ್ರಾಮುಖ್ಯತೆ ಮತ್ತು ಸುಮಧುರ ಹಾಗೂ ಕರ್ಕಶ ಧ್ವನಿಗಳ ಮಧ್ಯೆ ವೈಜ್ಞಾನಿಕ ಅಂತರ
– ಮಂಜುನಾಥ ಬ. ಭಜಂತ್ರಿ

**10** ಗದಗ ರಂಗಭೂಮಿ ಕಲಾವಿದರು – ಶಿವಬಸಯ್ಯ ಎಸ್. ಗಡ್ಡದಮಠ

**14** ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದಲ್ಲಿ ಘರಾಣೆಗಳ ಪ್ರಾಮುಖ್ಯತೆ ಹಾಗೂ ಅವುಗಳ ಅಚ್ಚುಕಟ್ಟಾದ ಪ್ರಸ್ತುತತೆ
– ಡಾ. ವಿಜಯಕುಮಾರ ಪಾಟೀಲ, ಡಾ. ನಂದಾ ಎಂ. ಪಾಟೀಲ

**16** ಸ್ಥಳೀಯ ನೀತಿ ರೂಪಿಸುವಲ್ಲಿ ಸಾರ್ವಜನಿಕರ ಪಾತ್ರ
– ಪ್ರಕಾಶ ಹ. ಜೋಗಿನ, ಡಾ. ಎನ್. ಎಂ. ಸಾಲಿ

**18** ವಾಯಲಿನ್ ನಿರ್ಮಾಣ (ರಚನೆ) ಹಾಗೂ ತಯಾರಿಕೆ
– ನಾರಾಯಣ ವಿ. ಅಕ್ಕಸಾಲಿ, ಡಾ. ಶಾಂತಾರಾಂ ಹೆಗಡೆ

**21** ವಚನಗಳಲ್ಲಿ ಪಶು–ಪಕ್ಷಿ ಪರಿಕಲ್ಪನೆ
– ಶ್ರೀನಿವಾಸ ಎನ್. ಎಚ್., ಡಾ. ದ್ರಾಕ್ಷಾಯಣಮ್ಮ ಎಂ.

**25** ಕಸ್ತೂರಿ ಬಾಯರಿಯವರ 'ಪ್ರತಿಬಿಂಬ' ಒಂದು ಅವಲೋಕನ
– ಅನುಪಮ ವೆಂ. ಆದಾಪೂರ

**27** ಜಾನಪದ ಕಲೆಗಳಲ್ಲಿ ಅಲೆಮಾರಿ ಬುಡಕಟ್ಟು ಸಮುದಾಯಗಳ ಪ್ರದರ್ಶನ ಕಲೆಗಳು – ಪ್ರತಾಪ ರಾ. ಬಹುರೂಪಿ, ಡಾ. ಎಂ.ಎಚ್. ಅಗಡಿ

**30** ಶಾಸನಗಳಲ್ಲಿ ಹಿಂದುಳಿದವರು – ಎಸ್. ಎಂ. ಸುಬ್ಬಯ್ಯ

**31** ಧಾರವಾಡ ಜಿಲ್ಲೆಯ ವ್ಯಕ್ತಿವಾಚಿ ಸ್ಥಳನಾಮಗಳು
– ರಾಜೇಂದ್ರ ಹ. ಹೊನ್ನಾಪೂರ


### ಸಂಶೋಧನೆಗಳು (Research Articles)


**33** ಮಾನವ ಅಭಿವೃದ್ಧಿ ಮತ್ತು ಶಿಕ್ಷಣ – ಡಾ. ಮಂಜಯ್ಯ

**38** ಭಾರತದ ಉನ್ನತ ಶಿಕ್ಷಣ ವ್ಯವಸ್ಥೆ : ಸವಾಲುಗಳು ಮತ್ತು ಪರಿಹಾರಗಳು
– ಮಂಜುನಾಥ ಮ. ತಿಗಡಿ, ಪ್ರೊ. ವಾಯ್.ಆಯ್. ಚವ್ಹಾಣ

**42** ಗ್ರಾಮೀಣ ಪ್ರೌಢಶಾಲಾ ಮುಖ್ಯೋಪಾಧ್ಯಾಯರುಗಳ ತೀರ್ಮಾನ ಶೈಲಿಗಳ ಮೇಲೆ ಪ್ರಭಾವ ಬೀರುವ ಅಂಶಗಳ ಒಂದು ಅಧ್ಯಯನ
– ಡಾ. ಆರ್. ರುದ್ರಾರಾಧ್ಯರು


### ಶಿಕ್ಷಣ ತಜ್ಞರು (Educationists)


**46** ವಿನೋಬಾ ಭಾವೆ – ಆರ್. ಎಸ್.ಪಾಟೀಲ

ಸಂಪಾದಕೀಯ

ಶಿಕ್ಷಣ ಸೌಧ 7ನೇ ಸೆಪ್ಟೆಂಬರ 2018 ಸಂಪುಟ : 8 ಸಂಚಿಕೆ : 2

## ಸಂಪಾದಕೀಯ

# ಶಿಕ್ಷಕರ ದಿನಾಚರಣೆ

ಶಿಕ್ಷಕರ ದಿನವು ಎಲ್ಲಾ ಶಿಕ್ಷಕರಿಗೆ ಸಮರ್ಪಿತವಾದ ವಿಶೇಷ ದಿನವಾಗಿದ್ದು ಪ್ರತಿವರ್ಷವು ಸಪ್ಟೆಂಬರ್ 5 ರಂದು ಶಿಕ್ಷಕರು ಗೌರವಿಸಲು ಮತ್ತುಶಿಕ್ಷಣಕ್ಕೆ ತಮ್ಮ ವಿಶೇಷ ಕೊಡುಗೆಗಳನ್ನು ಪ್ರಶಂಸಿಸಲು ಆಚರಿಸಲಾಗುತ್ತದೆ. 1962 ರಿಂದೀಚೆಗೆ ಸಪ್ಟೆಂಬರ್ 5 ರಂದು ಶಿಕ್ಷಕರ ದಿನಾಚರಣೆ ಆಚರಿಸಲಾಗುತ್ತದೆ. ಶ್ರೇಷ್ಠವ್ಯಕ್ತಿಯಾದ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮದಿನೋತ್ಸವದಂದು ಶಿಕ್ಷಕರ ದಿನವನ್ನು ಪ್ರತಿ ವರ್ಷ ಆಚರಿಸಲಾಗುತ್ತದೆ. ಅವರ ಅಭಿಮಾನಿ ದೇವರುಗಳಾದ ವಿದ್ಯಾರ್ಥಿಗಳ ಕೋರಿಕೆಯ ಮೇರೆಗೆ ತಮ್ಮ ಜನ್ಮದಿನದಂದು ಶಿಕ್ಷಕರ ದಿನವೆಂದು ಆಚರಿಸಲು ಒಪ್ಪಿಗೆ ನೀಡಿದರು. ಶಿಕ್ಷಕರು ದೇಶದ ಭವಿಷ್ಯದ ಕಟ್ಟಡಗಳ ನಿಜವಾದ ಚೂರುಗಳಾಗಿರುವರು. ಅವರು ಅಂತಿಮವಾಗಿ ದೇಶದ ಭವಿಷ್ಯದ ವಿದ್ಯಾರ್ಥಿಗಳ ಜೀವನವನ್ನು ರೂಪಿಸುತ್ತಾರೆ. ದೇಶದಲ್ಲಿ ವಾಸಿಸುವ ನಾಗರಿಕರ ಭವಿಷ್ಯವನ್ನು ನಿರ್ಮಿಸುವ ಮೂಲಕ ರಾಷ್ಟ್ರಗಳ ನಿರ್ಮಾಪಕರು ಶಿಕ್ಷಕರಾಗಿದ್ದಾರೆ.

ಶಿಕ್ಷಕರು ಜ್ಞಾನ, ಜ್ಞಾನೋದಯ ಮತ್ತುಸಮೃದ್ಧಿಯ ನೈಜ ಹಿಡುವಳಿದಾರರು ಅವರು ನಮ್ಮ ಜೀವನಕ್ಕಾಗಿ ಪೋಷಿಸಿ ತಯಾರಿಸುತ್ತಾರೆ. ಅವರು ವಿದ್ಯಾರ್ಥಿಗಳ ಜೀವನದಲ್ಲಿ ಬೆಳಕು ಚೆಲ್ಲುತ್ತಾರೆ. ಶಿಕ್ಷಕ ರಾಷ್ಟ್ರದ ಬೆನ್ನೆಲುಬು ರಾಷ್ಟ್ರ ರಕ್ಷಕ.

ಎಲ್ಲಾ ಶಿಕ್ಷಕ ಬಂಧುಗಳಿಗೆ
ಶಿಕ್ಷಕರ ದಿನಾಚರಣೆಯ
ಶುಭ ಶುಭಾಶಯಗಳು

- ಡಾ. ಎನ್.ಬಿ. ಕೊಂಗವಾಡ
ಸಂಪಾದಕರು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಮಾಧ್ಯಮಿಕ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸುವಲ್ಲಿ RMSA ಪಾತ್ರ

## Role of RMSA in Universalization of Secondary Education

✍ **ಪ್ರಶಾಂಶ ಅ. ರುದ್ರಗೌಡರ,** ಉಪನ್ಯಾಸಕರು ಮತ್ತು ಸಂಶೋಧನಾರ್ಥಿ, ಹರಿಹರ

### ಪೀಠಿಕೆ

ಮಾನವನ ಜೀವನ ಪವಿತ್ರ ಎಲ್ಲಾ ಜೀವರಾಶಿಗಳಿಗಿಂತ ಶ್ರೇಷ್ಠ. ಮಾನವನಾಗಿ ಹುಟ್ಟಿ ಬರುವುದೇ ಪುಣ್ಯ ಎಂದು ಪುರಾಣ–ಪುಣ್ಯ ಕಥೆಗಳಲ್ಲಿ ಹಾಡಿ ಹೊಗಳುವರು. ಆರಂಭದಲ್ಲಿ ಮಾನವನು ಗುಡ್ಡಗಾಡು ಪ್ರದೇಶಗಳಲ್ಲಿ ವಾಸಿಸುತ್ತಿದ್ದು, ಅಲ್ಲಿ ಸಿಕ್ಕ ಗೆಡ್ಡೆ ಗೆಣಸಗಳನ್ನು ತಿಂದು ಜೀವಿಸುತ್ತಿದ್ದನು. ಮೊದಲು ಪ್ರಾಣಿಗಳನ್ನು ಬೇಟೆಯಾಡಿ ಹಸಿ ಮಾಂಸವನ್ನು ತಿನ್ನುತ್ತಿದ್ದನು. ನಂತರದಲ್ಲಿ ಬೆಣಚುಕಲ್ಲುಗಳನ್ನು ಬಳಸಿ ಬೆಂಕಿಯನ್ನು ಕಂಡುಹಿಡಿದು, ಅದರ ಮೂಲಕ ಮಾಂಸವನ್ನು ಬೇಯಿಸಿ ತಿನ್ನಲಾರಂಭಿಸಿದನು. ಪ್ರಾರಂಭದಲ್ಲಿ ಅಸಹಾಯಕತೆ, ಪರಾವಲಂಬನೆ ಕಂಡುಬಂದರೂ ಹಂತಹಂತವಾಗಿ ತನ್ನ ಸುತ್ತಲಿನ ಪರಿಸರದ ಬಗ್ಗೆ ಅರ್ಥಮಾಡಿಕೊಂಡು ಜೀವಿಸುವ ಕಲೆ ಬೆಳೆಸಿಕೊಳ್ಳುವನು. ತನ್ನ ಬುದ್ಧಿಶಕ್ತಿ ಹಾಗೂ ಭಾಷಾ ಸಾಮರ್ಥ್ಯದಿಂದ ಜೀವನ ರೂಪಿಸಿಕೊಳ್ಳುವನು. ಇತರರು ಹೇಳುವ ವಿಷಯವನ್ನು ಗ್ರಹಿಸಿಕೊಂಡು ಕಾರ್ಯಮಾಡುವನು, ಸ್ವಯಂ ರಕ್ಷಣೆಯನ್ನು ಬುದ್ಧಿ ಬಲದಿಂದ ಮಾಡಿಕೊಳ್ಳುವನು. ನಿಸರ್ಗದ ಇತರ ಜೀವಿಗಳಿಗಿಂತ ಉತ್ತಮ ಆರೋಗ್ಯ ಕಲ್ಪನೆ, ಸಂಸ್ಕೃತಿ, ನೈತಿಕತೆ, ಚಿಂತನೆ ಬೆಳೆಸಿಕೊಳ್ಳುವನು. ಇದೆಲ್ಲಾ ದೈವದತ್ತವಾಗಿ ದೊರೆತರೂ ಅದಕ್ಕೆ ರೂಪ ಕೊಟ್ಟು ಚೈತನ್ಯ ಶೀಲವಾಗಿ ಕಾರ್ಯನಿರ್ವಹಿಸುವಂತೆ ಮಾಡುವಲ್ಲಿ ಶಿಕ್ಷಣ ಅಗತ್ಯ. ಒಬ್ಬ ವ್ಯಕ್ತಿ ಶಿಕ್ಷಣ ಪಡೆಯುವುದರಿಂದ ಆತನ ವ್ಯಕ್ತಿತ್ವ ವಿಕಸನಗೊಳ್ಳುವುದಲ್ಲದೇ ಸಭ್ಯ ನಾಗರಿಕನಾಗಿ, ಪೌರನಾಗಿ, ಸತ್ಪ್ರಜೆಯಾಗಿ ಬಾಳಲು ಸಾಧ್ಯವಾಗುವುದು. ಮಗುವಿಗೆ ಶಿಕ್ಷಣ ತಾಯಿಯು ಗರ್ಭದಲ್ಲಿರುವಾಗಲೇ ಪ್ರಾರಂಭವಾಗುತ್ತದೆ. ಆ ಸಮಯದಲ್ಲಿ ತಾಯಿಯ ಉತ್ತಮ ನೀತಿ ಕಥೆಗಳನ್ನು ಓದಿದಲ್ಲಿ ಮಗುವೂ ಸಹ ತನ್ನ ಜೀವನದಲ್ಲಿ ಅದನ್ನೇ ಮುಂದುವರಿಸಿಕೊಂಡು ಹೋಗುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ. ಮೇಲಿನ ಹಲವಾರು ಅಂಶಗಳನ್ನು ಗಮನಿಸಿದಾಗ ಮಾನವನ ಉಗಮ, ಅವನ ಬೆಳೆದು ಬಂದ ಇತಿಹಾಸ, ಅನಾಗರಿಕ ಮಾನವ ನಾಗರಿಕ ಮಾನವನಾದ ಬಗೆ ಹೇಗೆಂಬುದು ತಿಳಿದುಬರುತ್ತದೆ. ಈ ಎಲ್ಲಾ ವಿಕಾಸದ ಹಿಂದೆ ಬಂದು ಬೆಳಕಿದೆ, ಸ್ಫೂರ್ತಿ ಇದೆ, ಚೇತನವಿದೆ ಅದೆಂದರೆ ಶಿಕ್ಷಣ. ವ್ಯಕ್ತಿಗೆ ಹೊಸತನ ನೀಡುವ, ವೈಜ್ಞಾನಿಕ ಮನೋಭಾವನೆ ಬೆಳೆಸುವ, ನೆಮ್ಮದಿಯಿಂದ ಬದುಕು ರೂಪಿಸುವ, ಸಾಮಾಜಿಕ ಮೌಲ್ಯಗಳನ್ನು ರಕ್ಷಿಸುವ ಕಾರ್ಯದಲ್ಲಿ ನೆರವಾಗುತ್ತದೆ. ಕಾಲ, ಪರಿಸರ, ಪರಸ್ಥಿತಿಗೆ ತಕ್ಕಂತೆ ಗೊತ್ತು ಗುರಿಗಳನ್ನು ರೂಪಿಸಿಕೊಂಡು ಮಾನವನಲ್ಲಿ ಸುಪ್ತವಾಗಿ ಅಡಗಿರುವ ಸಾಮರ್ಥ್ಯ ಪ್ರಜ್ವಲಿಸುವಂತೆ ಮಾಡುತ್ತದೆ. ಮೂಢನಂಬಿಕೆಗಳನ್ನು ಹಾಗೂ ಅವೈಜ್ಞಾನಿಕ ಭಾವನೆಗಳನ್ನು ಹೋಗಲಾಡಿಸಿ ವ್ಯಕ್ತಿ ಹಾಗೂ ಸಮಾಜವನ್ನು ಸುಸ್ಥಿತಿಗೆ ಕೊಂಡುಯ್ಯುತ್ತದೆ. ಹೊಸ ವಿಷಯದೆಡೆಗೆ ವ್ಯಕ್ತಿ ಅನ್ವೇಷಣೆಗೊಳ್ಳುವಂತೆ ಮಾಡಿ, ನಿರಂತರವೂ ಕಾರ್ಯ ಚಟುವಟಿಕೆಯಲ್ಲಿ ತೊಡಗಿಸುವ ಪ್ರಕ್ರಿಯೆಯಾಗಿದೆ. ಈ ದೃಷ್ಟಿಯಿಂದ ಶಿಕ್ಷಣಕ್ಕೆ ಸಾವಿಲ್ಲ. ಸದಾ ಚೈತನ್ಯವನ್ನು ವ್ಯಕ್ತಿಗೆ ನೀಡಿ ಅವನ ಬದುಕನ್ನು ಸುಖ ಶಾಂತಿ ನೆಮ್ಮದಿಯಿಂದ ರೂಪಿಸಿಕೊಳ್ಳಲು ನೆರವಾಗುತ್ತದೆ. ಭಾವನೆಗಳ ರಚನೆ, ಸೌಂದರ್ಯ ಮತ್ತು ಅವುಗಳ ಸರ್ವ ಶಕ್ತಿಯ ಬಗ್ಗೆ ಪರಿಚಯ ಮಾಡಿಕೊಳ್ಳಲು ಶಿಕ್ಷಣವು ಸಹಕರಿಸುವುದು.

### ಶಿಕ್ಷಣದ ಅರ್ಥ

ನಾಗರಿಕತೆಯ ಆದಿಯಿಂದಲೂ ಮಾನವ ಸಮಾಜಗಳಲ್ಲಿ ಶಿಕ್ಷಣವು ಮಾನವನ ಜೊತೆಯಲ್ಲಿಯೇ ವೃದ್ಧಿ ಹೊಂದುತ್ತಿರುವುದು ಕಂಡುಬರುತ್ತದೆ. ಅನಾದಿ ಕಾಲದಿಂದಲೂ ಶಿಕ್ಷಣದ ಮಹತ್ವವನ್ನು ಎಲ್ಲರೂ ಅರಿತಿರುವರು. ಆದರೂ ನಾವು "ಶಿಕ್ಷಣ" ಎಂಬ ಪದಕ್ಕೆ ಹಲವಾರು ದಾರ್ಶನಿಕರು, ಮನೋವಿಜ್ಞಾನಿಗಳು, ರಾಜನೀತಿ ನಿಪುಣರು, ಶಿಕ್ಷಣ ತಜ್ಞರು ಹಾಗೂ ಇನ್ನೂ ಮುಂತಾದವರು ಏನೆಂದು ಅರ್ಥ ಕಲ್ಪಿಸಿದ್ದಾರೆಂಬುದನ್ನು ಜ್ಞಾನದ ದೃಷ್ಟಿಯಿಂದ ತಿಳಿಯುವುದು ಅವಶ್ಯಕವಾಗಿದೆ.

- "ಸರಿಯಾದ ಜ್ಞಾನವನ್ನು ಅನುಭವಿಕೆ ಮತ್ತು ಯೋಗ್ಯ ಶಿಕ್ಷಕರಿಂದ ಪಡೆಯುವುದೇ ಶಿಕ್ಷಣ" – **ಗೌತಮ ಬುದ್ಧ**
- "ಆತ್ಮಪ್ರಕಾಶ, ಪ್ರೇಮಗಳೆಂಬ ಸ್ಥಿರ ಸಂಪತನ್ನು ತಂದುಕೊಟ್ಟು ಮಗುವನ್ನು ಸುಂದರ ಯೋಗ್ಯವಂತನ್ನಾಗಿ, ಸತ್ಯವಂತನನ್ನಾಗಿ ಮಾಡುವುದೇ ಶಿಕ್ಷಣ". – **ರವೀಂದ್ರನಾಥ ಟ್ಯಾಗೋರ**
- "ವ್ಯಕ್ತಿಯಲ್ಲಿ ಸುಪ್ತವಾಗಿರುವ ದೈವತ್ವವನ್ನು ಹೊರ ತರುವುದೇ ಶಿಕ್ಷಣ" – **ಸ್ವಾಮಿ ವಿವೇಕಾನಂದ**
- "ಮಗುವಿಗೆ ದೈಹಿಕ, ಮಾನಸಿಕ, ಸಾಮಾಜಿಕ ಹಾಗೂ ಆಧ್ಯತ್ಮಿಕ ಶಕ್ತಿಗಳ ಪರಿಪೂರ್ಣ ವಿಕಾಸವೇ ಶಿಕ್ಷಣ" – **ಗಾಂಧೀಜಿ**
- "ವ್ಯಕ್ತಿಯೊಬ್ಬನಲ್ಲಿ ತನ್ನ ಪರಿಸರವನ್ನು ಬದಲಾಯಿಸುವ ಸಾಮರ್ಥ್ಯವನ್ನು ಬೆಳೆಸುವುದು ಮತ್ತು ಪರಿಸರವನ್ನು ನಿಯಂತ್ರಿಸುವುದು ಹಾಗೂ ಸಾಧ್ಯತೆಯನ್ನು ನೆರವೇರಿಸುವುದೇ ಶಿಕ್ಷಣ". – **ಜಾನ ಡ್ಯೂಯಿ**
- "ಮನುಷ್ಯನು ಜನನದಿಂದ ಮರಣದವರೆಗೆ ಅನುಭವಗಳನ್ನು ಪಡೆಯುತ್ತಾ ಮುಂದೆ ಸಾಗುವುದೇ ಶಿಕ್ಷಣ" – **ರೂಸೋ**
- "ಸ್ವತಂತ್ರವಾದ ಮತ್ತು ನಿರಂತಂಕವಾದ ವಾತಾವರಣದಲ್ಲಿ ಮಕ್ಕಳ ಕಲಿವು ಸಾಗುವಂತೆ ಮಾಡುವುದೇ ಶಿಕ್ಷಣ" – **ಮಾಂಟೆಸ್ಸೋರಿ**
- "ಸತ್ಯತ ಪರಿಶೋಧನೆಯಲ್ಲಿ ತೊಡುಗುವಂತೆ ಮಾಡುವುದೇ ಶಿಕ್ಷಣ" – **ಸಾಕ್ರೆಟೀಸ್**

ಈ ಮೇಲಿನ ಎಲ್ಲ ಅರ್ಥಗಳು ಶಿಕ್ಷಣದಿಂದ ವ್ಯಕ್ತಿಯಲ್ಲಿ ಬೆಳೆಯುತ್ತವೆ. ಆದರೆ ಇಂತಹ ಜ್ಞಾನವನ್ನು ಪಡೆಯಲೂ ವ್ಯಕ್ತಿಯು ಮೂರು ಹಂತದಲ್ಲಿ ಶಿಕ್ಷಣವನ್ನು ಪಡೆದುಕೊಳ್ಳುತ್ತಾನೆ.

ಅ. ಪ್ರಾಥಮಿಕ ಶಿಕ್ಷಣ

ಬ. ಮಾಧ್ಯಮಿಕ ಶಿಕ್ಷಣ

ಕ. ಉನ್ನತ ಶಿಕ್ಷಣ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಈ ಮೂರು ಹಂತದ ಶಿಕ್ಷಣ ವ್ಯವಸ್ಥೆಯಲ್ಲಿ ವ್ಯಕ್ತಿಗೆ ಬೇಕಾದ ಶಿಕ್ಷಣವನ್ನು ವಿವಿಧ ಯೋಜನೆ ಮತ್ತು ಕಾರ್ಯಕ್ರಮಗಳ ಮೂಲಕ ಸರ್ವರಿಗೂ ಜ್ಞಾನವನ್ನು ಹೆಚ್ಚಿಸುವ, ಸಾಮರ್ಥ್ಯವನ್ನು ಅಭಿವೃದ್ಧಿಗೊಳಿಸುವ ಕಾರ್ಯ ಮಾಡುತ್ತದೆ ಎಂದೂ ಹೇಳಬಹುದು.

## ಮಾಧ್ಯಮಿಕ ಶಿಕ್ಷಣ

ಶಾಲಾ ಹಂತದ ಶಿಕ್ಷಣದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪಡೆದ ನಂತರದ ಶಿಕ್ಷನವೇ ಮಾಧ್ಯಮಿಕ ಶಿಕ್ಷಣ. ಇದು ವಿಶೇಷ ರೀತಿಯ ಶಿಕ್ಷನವಂತೂ ಅಲ್ಲ, ಆದರೆ ಇದು ಶಾಲಾ ಶಿಕ್ಷಣದ ಉನ್ನತ ಹಂತ ಮಾತ್ರವಾಗಿದೆ. ರಾಷ್ಟ್ರದ ವಿವಿಧ ರಾಜ್ಯಗಳಲ್ಲಿ ಏಕತೆರನಾದ ವಿನ್ಯಾಸ ಮಾಧ್ಯಮಿಕ ಶಿಕ್ಷಣಕ್ಕಿಲ್ಲ. ಕೆಲ ರಾಜ್ಯಗಳಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಹಂತಗಳ ನಡುವೆ ಮಾಧ್ಯಮಿಕ ಹಂತವಿದೆ. ಆದರೆ ಪ್ರಸ್ತುತ ಭಾರತದಲ್ಲಿ 10+2ವರ ವಿನ್ಯಾಸವನ್ನು ಎಲ್ಲಾ ಶಾಲೆಗಳಲ್ಲಿ ಅಳವಡಿಸಿಕೊಂಡಿರುವುದನ್ನು ಗಮನಸಿಬಹುದು.

## ಮಾಧ್ಯಮಿಕ ಶಿಕ್ಷಣದ ಅರ್ಥ

ಮಾಧ್ಯಮಿಕ ಶಿಕ್ಷಣವು ಸಂಪೂರ್ಣವಾಗಿ ಸಾಮಾನ್ಯ ಶಿಕ್ಷಣ ಇಲ್ಲವೇ ವೃತ್ತಿಮುಖಿ ಶಿಕ್ಷಣ ಅಥವಾ ಇವೆರಡನ್ನು ಒಳಗೊಂಡ ಶಿಕ್ಷಣವನ್ನು ನೀಡುವ ಪ್ರಕ್ರಿಯೆಯಾಗಿದೆ.ಯಾರು ಪ್ರಾಥಮಿಕ ಶಿಕ್ಷಣವನ್ನು ಪೂರೈಸಿರುವರೋ ಅವರಿಗೆ ಮಾಧ್ಯಮಿಕ ಶಿಕ್ಷಣವನ್ನು ನೀಡುವುದು ಮತ್ತು ಇದು ಸಾಮಾನ್ಯ, ತಾಂತ್ರಿಕ, ಔದ್ಯೋಗಿಕ, ಕೃಷಿ ಮತ್ತು ವೃತ್ತಿಪರ ಶಿಕ್ಷಣವನ್ನು ಒಳಗೊಂಡಿರುವುದು ಮಾಧ್ಯಮಿಕ ಶಿಕ್ಷಣವು 8 ವರ್ಷ ದಾಟಿದ ನಂತರ ನೀಡುವ ಪ್ರಕ್ರಿಯೆಯಾಗಿದೆ–ಕೋಠಾರಿ ಶಿಕ್ಷಣ ಅಯೋಗ.

## ಮಾಧ್ಯಮಿಕ ಶಿಕ್ಷಣದ ಮಹತ್ವ

ಭಾರತದಲ್ಲಿ ಇತರ ಶಿಕ್ಷಣಕ್ಕಿಂತ ಮಾಧ್ಯಮಿಕ ಶಿಕ್ಷಣವು ಮಹತ್ವ ಪೂರ್ಣವಾದ ಸ್ಥಾನವನ್ನು ಪಡೆದುಕೊಂಡಿದೆ. ಇದು ನಮ್ಮ ಸಾಂಸ್ಕೃತಿಕ ಜೀವನವಾದ ಶಿಕ್ಷಣವನ್ನು ನೀಡುವುದರ ಜೊತೆಗೆ ಪ್ರತಿಯೋರ್ವನೂ ಸ್ವಾವಲಂಬಿಯಾಗಲು ಅಗತ್ಯವಾದ ಶಿಕ್ಷಣವನ್ನು ನೀಡುವುದು. ಮಾಧ್ಯಮಿಕ ಶಿಕ್ಷಣವು ಪ್ರಾಥಮಿಕ ಮತ್ತು ಉನ್ನತ ಶಿಕ್ಷಣದ ನಡುವೆ ಬೆಸೆಯುವ ಕೊಂಡಿಯಾಗಿದೆ. ಶಿಕ್ಷಣದಲ್ಲಿ ಗುಣಾತ್ಮಕತೆಯನ್ನು ತರುವುದಾದರೆ ಈ ರೀತಿಯ ಬಂಧವನ್ನು ಅತ್ಯಂತ ಬಲಯುತಗೊಳಿಸುವ ಅವಶ್ಯಕತೆಯಿದೆ. ಮಾಧ್ಯಮಿಕ ಶಿಕ್ಷಣವು ಯಾವುದೇ ಶಿಕ್ಷಣ ವ್ಯವಸ್ಥೆಗೆ ಬೆನ್ನೆಲುಬು ಇದ್ದಂತೆ ಎಂದು ಹೇಳಿದರೆ ತಪ್ಪಾಗಲಾರದು ಬಹುತೇಕ ವಿದ್ಯಾರ್ಥಿಗಳಿಗೆ ಮಾಧ್ಯಮಿಕ ಶಿಕ್ಷಣವು ಅವರ ಜೀವನದ ಕಡೆಯ ಹಂತದ ಶಿಕ್ಷಣವಾಗಿರುವುದರಿಂದ ಮಾಧ್ಯಮಿಕ ಶಿಕ್ಷಣದ ಬೆಳವಣಿಗೆ ಮತ್ತು ಅಭಿವೃದ್ಧಿಯ ಕಡೆ ಗಮನ ಹರಿಸುವುದು ಸೂಕ್ತ.

## R.M.S.A. ಪರಿಚಯ

ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನವು ಮಾಧ್ಯಮಿಕ ಶಾಲಾ ಶಿಕ್ಷಣವನ್ನು ವಿಸ್ತರಿಸುವ ಮತ್ತು ಗುಣಮಟ್ಟವನ್ನು ಸುಧಾರಿಸುವ ಗುರಿ ಹೊಂದಿದೆ. ಇದು 9 ಮತ್ತು 10ನೇ ತರಗತಿಯ ಮಾಧ್ಯಮಿಕ ಶಿಕ್ಷಣವನ್ನು ದೇಶ ಮೂಲೆ ಮೂಲೆಗೂ ಹರಡುವ ಗುರಿ ಹೊಂದಿದೆ. R.M.S.A. ಯು ರಾಷ್ಟ್ರದ ಪ್ರತಿಯೊಂದು ಪ್ರದೇಶದಲ್ಲಿ 7 ಕಿ.ಮೀ ಒಳಗೆ ಮಾಧ್ಯಮಿಕ ಶಾಲೆಯನ್ನು ಒದಗಿಸಲು ಯೋಜಿಸಿದೆ.ಭಾರತ ಸರ್ಕಾರದ ಇತ್ತೀಚಿನ ನಡೆಯದ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನವು ಮಾಧ್ಯಮಿಕ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸುವ ಗುರಿಯನ್ನು ಮುಟ್ಟುವ ಸಾಧನವಾಗಿದೆ. ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು R.M.S.A. ಯೋಜನೆಯನ್ನು 11ನೇ ಪಂಚವಾರ್ಷಿಕ ಯೋಜನಾಭಿವೃದ್ಧಿಯಲ್ಲಿ 20,120 ಕೋಟಿ ರೂಪಾಯಿ ವೆಚ್ಚದಲ್ಲಿ ಅನುಷ್ಠಾನಗೊಳಿಸಲು ಯೋಜಿಸಿದ್ದರೆ ಪರಿಣಾಮವಾಗಿ ಈ ಯೋಜನೆ ಜಾರಿಗೆ ಗೊಂಡಿತು.ಮಾಧ್ಯಮಿಕ ಶಿಕ್ಷಣ ಗುರಿಯು ಉತ್ತಮ ಗುಣಮಟ್ಟದ ಮಾಧ್ಯಮಿಕ ಶಿಕ್ಷಣವನ್ನು 14–18 ವಯೋಮಾನದ ಹದಿಹರೆಯದವರಿಗೆ ದೊರೆಯುವಂತೆ ಅವರಿಗೆ ಎಲ್ಲಾ ರೀತಿಯಿಂದಲೂ ಅವಕಾಶ ಮಾಡಿಕೊಡುವ ಪರಿಕಲ್ಪನೆಯನ್ನು ಇಟ್ಟುಕೊಂಡಿದೆ. ವಿಶೇಷವಾಗಿ ಸಮಾಜದಲ್ಲಿ ಆರ್ಥಿಕವಾಗಿ ದುರ್ಬಲದವರಿಗೆ, ಶೈಕ್ಷಣಿಕವಾಗಿ ಹಿಂದುಳಿದವರಿಗೆ ಹುಡುಗಿಯರಿಗೆ, ಗ್ರಾಮಾಂತರ ಪ್ರದೇಶದಲ್ಲಿ ವಾಸಿಸುವ ವಿಕಲಚೇತನರಿಗೆ, ನಿರ್ಲಕ್ಷಿತ ವರ್ಗಗಳಿಂದ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಇತರೆ ಹಿಂದುಳಿದ ಗುಂಪು ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಅಲ್ಪಸಂಖ್ಯಾತರಿಗೆ ಮಾಧ್ಯಮಿಕ ಶಿಕ್ಷಣವನ್ನು ಒದಗಿಸುವ ಗುರಿ ಹೊಂದಿದೆ.

## R.M.S.A. ಅರ್ಥ

R.M.S.A. ಯೋಜನೆಯು ಮಾಧ್ಯಮಿಕ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸುವಲ್ಲಿ ಆರಂಭವಾದ ಯೋಜನೆಯಾಗಿ"

"14 ರಿಂದ 18 ವಯೋಮಾನ ಎಲ್ಲಾ ಮಕ್ಕಳಿಗೆ ಮಾಧ್ಯಮಿಕ ಶಿಕ್ಷಣವನ್ನು ನೀಡುವ ಸಲುವಾಗಿ ಆರಂಭವಾದ ಯೋಜನೆಯಾಗಿದೆ". "ಮಾಧ್ಯಮಿಕ ಶಿಕ್ಷಣವನ್ನು ಯಾವುದೇ ಜಾತಿ, ಲಿಂಗ, ಭಾಷೆ, ಲಿಪಿ, ಸಂಸ್ಕೃತಿಯನ್ನು ಪರಿಗಣಿಸದೇ ಎಲ್ಲರಿಗೂ ಸಾರ್ವತ್ರೀಕ ಶಿಕ್ಷಣವನ್ನು ನೀಡುವ ಯೋಜನೆಯಾಗಿದೆ" ಮಾಧ್ಯಮಿಕ ಶಿಕ್ಷಣ ಗುಣಮಟ್ಟವನ್ನು ಸುಧಾರಿಸುವಲ್ಲಿ ಈ ಯೋಜನೆಯು ಪ್ರಮುಖವಾಗಿದೆ.

## R.M.S.A. ಯೋಜನೆಯ ವ್ಯಾಪ್ತಿ

ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ವ್ಯಾಪ್ತಿ ವಿಶಾಲವಾಗಿದೆ. ಇದು ಮಾಧ್ಯಮಿಕ ಶಿಕ್ಷಣಕ್ಕೆ ಅಡಿಪಾಯ. ಹೀಗಾಗಿ ದೇಶಾದ್ಯಂತ ಮಹತ್ವ ಕೊಡಲಾಗಿದೆ. ಈ ಯೋಜನೆಯು ಸಂಪೂರ್ಣವಾಗಿ ಸರ್ಕಾರದ ನಿಯಮಗಳು ಅಡಿಯಲ್ಲಿ ನಡೆಯುತ್ತಿದೆ. ಶಾಲಾ ಕಟ್ಟಡ, ಶಿಕ್ಷಕರ ನೇಮಕಾತಿ, ವಸತಿ ಗೃಹಗಳು, ಪ್ರಯೋಗದ ಮುಂತಾದವುಗಳನ್ನು ಒದಗಿಸಲಾಗುತ್ತದೆ. ಈ ಯೋಜನೆಯು ಮಾಧ್ಯಮಿಕ ಶಾಲೆಗಳಲ್ಲಿ ಮಾಹಿತಿ ಸಂವಹನ ತಂತ್ರಜ್ಞಾನ ಮೂಲಕವಾಗಿ ತನ್ನ ವ್ಯಾಪ್ತಿಯನ್ನು ಹೆಚ್ಚಿಸಿಕೊಂಡಿದೆ. ಇದರ ಮೂಲಕ ವಿದ್ಯಾರ್ಥಿಗಳು ತಮ್ಮ ಮಾಧ್ಯಮಿಕ ಶಾಲಾ ಹಂತವನ್ನು ಮುಗಿಸುವುದರ ಜೊತೆಗೆ ಮಾಹಿತಿ ತಂತ್ರಜ್ಞಾನದ ಬಗ್ಗೆ ಸಂಪೂರ್ಣವಾದ ಅರಿವನ್ನು ಮೂಡಿಸುವ ಪ್ರಯತ್ನ ಮಾಡುತ್ತದೆ. ಅಲ್ಲದೇ ವೃತ್ತಿ ಶಿಕ್ಷಣವನ್ನು ನೀಡುವುದರ ಮೂಲಕ ಪ್ರತಿಯೊಬ್ಬ ಮಾಧ್ಯಮಿಕ ಶಾಲಾ ವಿದ್ಯಾರ್ಥಿಗೆ ವೃತ್ತಿಯ ಬಗ್ಗೆ ಜ್ಞಾನವನ್ನು ಮೂಡಿಸುವ, ವೃತ್ತಿ ಕೌಶಲವನ್ನು ಬೆಳೆಸುವ ಕಾರ್ಯವನ್ನು ಈ ಯೋಜನೆ ಮಾಡುವುದರಿಂದ ವಿಶಾಲ ವ್ಯಾಪ್ತಿಯನ್ನು ಹೊಂದಿಕೊಂಡಿದೆ ಎಂದು ಹೇಳಬಹುದು. ಅದೇ ರೀತಿಯಾಗಿ ಶೈಕ್ಷಣಿಕ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸಲು ಮೇಲ್ವಿಚಾರಣೆ ಮಡುವ ಪ್ರಕಿಯೆಯನ್ನು ಒಳಗೊಂಡಿದ್ದು, ಪ್ರತಿಯೊಂದು ಮಾಧ್ಯಮಿಕ ಶಾಲೆಯ ಗುಣಮಟ್ಟವನ್ನು ನಿರ್ಧರಿಸುತ್ತದೆ. ಹಾಗೂ ಬೋಧನಾ ಕಲಿಕಾ ಪ್ರಕ್ರಿಯೆಯು ಸಮರ್ಪಕವಾಗಿ ಸಾಗಲು ಬೋಧಕ ವರ್ಗದವರಿಗೆ ವಿವಿಧ ಕಾರ್ಯಕ್ರಮಗಳನ್ನು ತರಬೇತಿಗಳನ್ನು ನೀಡುವುದರ ಮೂಲಕ ಭೌತಿಕ ಮತ್ತು ಮಾನವ ಸಂಪನ್ಮೂಲಗಳ ಸಮರ್ಪಕ ಬಳಕೆಯನ್ನು ಮಾಡುವುದರಿಂದ "ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣದ ಅಭಿಯಾನ"ವು ವಿಶಾಲ ವ್ಯಾಪ್ತಿಯನ್ನು ಹೊಂದಿದೆ ಎಂದು ಹೇಳಬಹುದು.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

## R.M.S.A. ಯ ಉದ್ದೇಶಗಳು

ಮಾಧ್ಯಮಿಕ ಶಿಕ್ಷಣ ಸಾರ್ವತ್ರೀಕರಣವನ್ನು ಮಾಡಲು ಯೋಜನೆಯು ಕೆಲವು ಉದ್ದೇಶಗಳನ್ನು ಹೊಂದಿಕೊಂಡಿದೆ. ಅವುಗಳೆಂದರೆ –

- ಎಲ್ಲ ಮಾಧ್ಯಮಿಕ ಶಾಲೆಗಳಿಗೆ ಭೌತಿಕ ಸಂಪನ್ಮೂಲಗಳನ್ನು ಸಿಬ್ಬಂದಿಗಳನ್ನು ಹಾಗೂ ಇತರೆ ಅಗತ್ಯತೆಗಳನ್ನು ಪೂರೈಸುತ್ತದೆ.
- ಶಾಲೆಗಳ ವಿಷಯದಲ್ಲಿ ಸೂಕ್ತವಾದ ನಿಯಂತ್ರಣವನ್ನು ಹಾಗೂ ಮೇಲ್ವಿಚಾರಣೆಯನ್ನು ಮೂಡುತ್ತದೆ.
- ಎಲ್ಲಾ ಹದಿಹರೆಯದವರಿಗೆ ಮಾಧ್ಯಮಿಕ ಶಾಲಾ ಶಿಕ್ಷಣದಲ್ಲಿ ಲಭ್ಯತೆಯನ್ನು ಒದಗಿಸುವುದು.
- ಶಾಲೆಗಳನ್ನು ವಿದ್ಯಾರ್ಥಿಗಳ ಅನುಕೂಲತೆಗೆ ತಕ್ಕಂತೆ ಹತ್ತಿರದ ಸ್ಥಳದಲ್ಲಿ ಸುವ್ಯವಸ್ಥೆ ಮತ್ತು ಸುರಕ್ಷತೆ ರೀತಿಯಲ್ಲಿ ನಿರ್ಮಿಸುವುದು, ಹಾಗೂ ಸ್ಥಳೀಯ ಅನುಕೂಲತೆಯನ್ನು ಗಮನಿಸಿ ವಸತಿಯನ್ನು ನೀಡುವುದು.
- ಬೆಟ್ಟ ಮತ್ತು ಕಠಿಣ ಪ್ರದೇಶಗಳಲ್ಲಿ ವಸತಿ ಶಾಲೆಯ ಸ್ಥಾಪನೆಗೆ ಆದ್ಯತೆ ನೀಡುವುದು.
- ಯಾವುದೇ ಮಗುವು ಲಿಂಗ, ಜಾತಿ, ಆರ್ಥಿಕ, ಸಾಮಾಜಿಕ ಮತ್ತು ಇತರ ಅಡತಡೆಗಳಿಂದಾಗಿ ಗುಣಾತ್ಮಕ ಪ್ರೌಢ ಶಿಕ್ಷಣದಿಂದ ವಂಚಿತರಾಗದಂತೆ ನೋಡಿಕೊಳ್ಳುವುದು.
- ಬೌದ್ಧಿಕ ಸಾಮಾಜಿಕ ಮತ್ತು ಸಾಂಸ್ಕೃತಿಕ ಕಲಿಕೆಯಿಂದಾಗಿ ಮಾಧ್ಯಮಿಕ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವುದು.
- ಮಾಧ್ಯಮಿಕ ಶಿಕ್ಷಣ ಪಡೆಯುವ ಎಲ್ಲ ಮಕ್ಕಳು ಉತ್ತಮ ಗುಣಮಟ್ಟದ ಶಿಕ್ಷಣ ಪಡೆಯುವ ಖಾತ್ರಿಯನ್ನು ಹೊಂದಬೇಕು.
- ಈ ಯೋಜನೆಗೆ ಅಗತ್ಯವಾದ ಆರ್ಥಿಕ ನೆರವನ್ನು ಸರ್ಕಾರಿ/ ಸ್ಥಳೀಯ ಸಂಸ್ಥೆಗಳು ಮತ್ತು ಸರಕಾರಿ, ಅನುದಾನಿತ ಶಾಲೆಗಳಿಗೆ ನೀಡುವುದು.

ಇವುಗಳ ಆಧಾರದ ಮೇಲೆ ಪ್ರೌಢ ಶಿಕ್ಷಣದಲ್ಲಿ R.M.S.A. ಕಾರ್ಯಕ್ರಮಗಳ ನಿರ್ವಹಣೆ ಮಾಡಲು ಹಾಗೂ ಕಾರ್ಯರೂಪಕ್ಕೆ ತರಲು ಸಹಾಯಕಾರಿಯಾಗಿದೆ ಎಂದೂ ಹೇಳಬಹುದು.

## R.M.S.A. ಯ ಮಹತ್ವ

R.M.S.A. ಕಾರ್ಯಕ್ರಮವು ಮಾಧ್ಯಮಿಕ ಶಿಕ್ಷಣದ ಎಲ್ಲಾ ಅಭಿವೃದ್ಧಿ ಪೂರಕ. ಅಂದರೆ ಒಂದು ಶಿಲೆಗೆ ಕಲೆ ಎಷ್ಟು ಮುಖ್ಯವೋ ಅಷ್ಟೇ ತೆರನಾಗಿ ಮಾಧ್ಯಮಿಕ ಶಿಕ್ಷಣಕ್ಕೆ ಇದರ ಅವಶ್ಯಕತೆ ಇದೆ. ಏಕೆಂದರೆ ಸಾಕ್ಷರತೆಯೊಂದೇ ನಮ್ಮನ್ನು ಪ್ರಗತಿಯುತ್ತ ಒಯ್ಯಲು ಸಾಧ್ಯ. ಅದಕ್ಕೆಂದೆ ಮಾಧ್ಯಮಿಕ ಶಿಕ್ಷಣದಲ್ಲಿ R.M.S.A. ಯ ಕಾರ್ಯಕ್ರಮ ಮಹತ್ವದ ಘಟವಾಗಿದ್ದು, ಇದರ ಅಗತ್ಯತೆ ಮಹತ್ವವಿದೆ. ಪ್ರಾಥಮಿಕ ಶಿಕ್ಷಣವನ್ನು ವಿದ್ಯಾರ್ಥಿಗಳು 6 ರಿಂದ 14 ರ ವಯೋಮಾನದ ಒಳಗೆ ಮುಗಿಸಿದ ಮೇಲೆ ಕೆಲವು ವಿದ್ಯಾರ್ಥಿಗಳು ಅರ್ಧದಲ್ಲೇ ತಮ್ಮ ಶಿಕ್ಷಣವನ್ನು ಮೊಟಕುಗೊಳಿಸುತ್ತಾರೆ. ಅದಕ್ಕಾಗಿ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿದ ನಂತರ ಮಾಧ್ಯಮಿಕ ಶಿಕ್ಷಣವನ್ನಾದರು ಮುಗಿಸಿದರೆ ಅವರಲ್ಲಿ ಹೆಚ್ಚಿನ ಜ್ಞಾನವನ್ನು ಮೂಡಿಸಲು ಇದರ ಮಹತ್ವ ಇದೆ ಎಂದು ಹೇಳಬಹುದು. ಮಾಧ್ಯಮಿಕ ಶಾಲಾ ಹಂತದಲ್ಲಿ ವಿದ್ಯಾರ್ಥಿಗಳಲ್ಲಿ ವೃತ್ತಿ ಕೌಶಲವನ್ನು ಬೆಳೆಸಲು, ಜ್ಞಾನ ಮೂಡಿಸಲು ಅಲ್ಲದೇ ಈ ಬದಲಾಗುತ್ತಿರುವ ಆಧುನಿಕ ಪ್ರಪಂಚಕ್ಕೆ ಅನುಗುಣವಾಗಿ ಮಾಹಿತಿ ಸಂವಹನ ತಂತ್ರಜ್ಞಾನದ ಅರಿವನ್ನು ಬೆಳೆಸುವಲ್ಲಿ ಮಹತ್ವವನ್ನು ಪಡೆದುಕೊಂಡಿದೆ ಹಾಗೂ ಸಾಮಾಜಿಕ ಮೌಲ್ಯಗಳ ಹಾಗೂ ನೈತಿಕ ಮೌಲ್ಯಗಳ ಮೂಲಕ ಶಿಕ್ಷಕ ತನ್ನ ಸ್ಥಾನದಲ್ಲಿ ಆದರ್ಶ ವ್ಯಕ್ತಿಯಾಗುವಂತೆ ಕಾರ್ಯನಿರ್ವಹಿಸುತ್ತಾನೆ. ಅಲ್ಲದೇ ಈ ಎಲ್ಲಾ ಅಂಕಗಳು ಶಿಕ್ಷಕನ ಪ್ರಮುಖ ಪಾತ್ರವಾಗಿದೆ ಎಂದೇ ಹೇಳಬಹುದು. ಮಾಧ್ಯಮಿಕ ಶಾಲಾ ಹಂತದಲ್ಲಿ ವಿದ್ಯಾರ್ಥಿಗಳಲ್ಲಿ ವೃತ್ತಿ ಕೌಶಲವನ್ನು ಬೆಳೆಸಲು, ಜ್ಞಾನ ಮೂಡಿಸಲು ಅಲ್ಲದೆ ಈ ಆಧುನಿಕ ಬದಲಾಗುತ್ತಿರುವ ಪ್ರಪಂಚಕ್ಕೆ ಅನುಗುಣವಾಗಿ ಮಾಹಿತಿ ಸಂವಹನ ತಂತ್ರಜ್ಞಾನದ ಅರಿವನ್ನು ಬೆಳೆಸುವಲ್ಲಿ ಮಹತ್ವವನ್ನು ಪಡೆದುಕೊಂಡಿದೆ. R.M.S.A. ಕಾರ್ಯಕ್ರಮವು ಮತ್ತು ತರಬೇತಿ ಮಾಧ್ಯಮಿಕ ಶಾಲಾ ಶಿಕ್ಷಕರಲ್ಲಿ ತಮ್ಮ ವೃತ್ತಿ ಸಾಮರ್ಥ್ಯವನ್ನು ಮತ್ತು ವೃತ್ತಿ ದಕ್ಷತೆಯನ್ನು ಹೆಚ್ಚಿಸುವಲ್ಲಿ ಅವಶ್ಯಕವಾಗಿದ್ದು, ಇದು ಶಿಕ್ಷಕರಲ್ಲಿ ಬೋಧನಾ ಮತ್ತು ಕಲಿಕಾ ಸಾಮರ್ಥ್ಯವನ್ನು ಹೆಚ್ಚಿಸುವಲ್ಲಿ ಸಹಾಯಕವಾಗಿದೆ. ಅಷ್ಟೇ ಅಲ್ಲದೇ ಶಿಕ್ಷಕರು ತರಬೇತಿಯಿಂದ ಪಡೆದ ಮಾಹಿತಿಗಳಿಗೆ ಅನುಗುಣವಾಗಿ ತಮ್ಮ ತರಗತಿಗಳನ್ನು ಬಳಸಿಕೊಂಡು ಉತ್ತಮ ಬೋಧನಾ ಕಲಿಕಾ ಚಟುವಟಿಕೆಗಳನ್ನು ರೂಪಿಸಲು ಇವರ ಅವಶ್ಯಕತೆ ಮತ್ತು ಮಹತ್ವವನ್ನು ಪಡೆದುಕೊಂಡಿದೆ ಹಾಗೂ ಶೈಕ್ಷಣಿಕ ಚಟುವಟಿಕೆಗಳು ಸುಲಭವಾಗಿ ನಡೆಯಲು ಈ ತರಬೇತಿ ಕಾರ್ಯಕ್ರಮಗಳು ಮಹತ್ವ ಅವಶ್ಯಕವಾಗಿದೆ.

## R.M.S.A. ಕಾರ್ಯಕ್ರಮದಲ್ಲಿ ಶಿಕ್ಷಕರ ಪಾತ್ರ

R.M.S.A. ಕಾರ್ಯಕ್ರಮವನ್ನು ಮಾಧ್ಯಮಿಕ ಶಾಲೆಗಳಲ್ಲಿ ಜಾರಿಗೆ ಮಾಡುವಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪಾತ್ರ ಹೇಗಿದೆಯೋ, ಹಾಗೆಯೇ ಈ ಕಾರ್ಯಕ್ರಮಗಳನ್ನು ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಶಾಲೆಗಳಲ್ಲಿ ಉಪಯೋಗಿಸಿಕೊಳ್ಳುವಲ್ಲಿ ಶಿಕ್ಷಕರ ಪಾತ್ರವು ತುಂಬಾ ಮಹತ್ವವಾಗಿದೆ. ಈ ಕಾರ್ಯಕ್ರಮವು ಶಿಕ್ಷಕರಿಗಾಗಿ ವಿವಿಧ ರೀತಿಯ ಕಾರ್ಯಕ್ರಮಗಳನ್ನು ಮತ್ತು ತರಬೇತಿಯನ್ನು ನೀಡುತ್ತಿದೆ. ಇವುಗಳ ಮೂಲಕವಾಗಿ ಶಿಕ್ಷಕರು ತಮ್ಮ ವೃತ್ತಿ ಸಾಮರ್ಥ್ಯವನ್ನು, ವೃತ್ತಿ ದಕ್ಷತೆಯನ್ನು ಹೆಚ್ಚಿಸಿಕೊಳ್ಳಲು ಸಾಧ್ಯ, ಅಷ್ಟೇ ಅಲ್ಲದೇ, ವಿಷಯಗಳಲ್ಲಿ ಹೆಚ್ಚಿನ ಜ್ಞಾನವನ್ನು ಪಡೆದುಕೊಳ್ಳಬಹುದು. ಈ ಜ್ಞಾನದ ಮೂಲಕ ಶಿಕ್ಷಕರಲ್ಲಿ ಇನ್ನೂ ಆಳವಾದ ಅಧ್ಯಯನ ಸಾಮರ್ಥ್ಯವನ್ನು ಬೆಳೆಸುವುದು. ಶಿಕ್ಷಕರು ಹೊಸ ಹೊಸ ಬೋಧನಾ ವಿಧಾನಗಳ ಕುರಿತು ಹೆಚ್ಚು ಹೆಚ್ಚು ಸಂಶೋಧನೆ ಕೈಗೊಳ್ಳಲು ಸಹಾಯಕಾರಿಯಾಗಿದೆ. ಶಿಕ್ಷಕರು ತಾವು ಪಡೆದಂತಹ ಜ್ಞಾನದ ಮೂಲಕ ತಮ್ಮ ತರಗತಿಗಳಲ್ಲಿ ಬೋಧನಾ ಕಲಿಕಾ ಚಟುವಟಿಕೆಗಳು ಸಮರ್ಪಕವಾಗಿ ನಡೆಯಲು ಬಳಸಿಕೊಳ್ಳುವರು. ಶಿಕ್ಷಕನು ತರಗತಿಯಲ್ಲಿ ಉತ್ತಮ ನಾಯಕತ್ವವನ್ನು, ನಾಯಕತ್ವದ ಗುಣಗಳನ್ನು ಬೆಳೆಸಿಕೊಂಡು ಮಕ್ಕಳಲ್ಲಿಯೂ ಉತ್ತಮ ನಾಯಕತ್ವ ಗುಣಗಳನ್ನು ಬೆಳೆಸುವಂತೆ ಪ್ರೇರಿಪಿಸುವರು.ಶಿಕ್ಷಕರು ಮಾಹಿತಿ ಸಂವಹನ ತಂತ್ರಜ್ಞಾನದ ಮೂಲಕ ವಿದ್ಯಾರ್ಥಿಗಳಲ್ಲಿ ಆಧುನಿಕತೆಯಲ್ಲಿ ಮಾಹಿತಿ ಸಂವಹನ ಪಾತ್ರ, ಅದರ ಮಹತ್ವ, ಅದರ ಬಳಕೆ ಹೇಗೆ ಎಂಬುದನ್ನು ಸಮಗ್ರವಾಗಿ ಹೇಳುವರು ಹಾಗೂ ಸಾಮಾಜಿಕ ಉತ್ಪದನಾ ಕಾರ್ಯಗಳಲ್ಲಿ ವೃತ್ತಿಯ ಬಗ್ಗೆ ಅದರ ಉಪಯೋಗವನ್ನು ಕುರಿತು ವಿದ್ಯಾರ್ಥಿಗಳಲ್ಲಿ ಆಳವಾದ ಜ್ಞಾನವನ್ನು ತುಂಬುವರು. ಶಿಕ್ಷಕರು ತಮ್ಮ ತರಗತಿಯಲ್ಲಿ ಕಂಡು ಬರುವ ಸಮಸ್ಯೆಗಳನ್ನು, ತಮ್ಮ ಆಡಳಿತದಲ್ಲಿ ಕಂಡು ಬರುವ ಸಮಸ್ಯೆಗಳನ್ನು, ಚಟುವಟಿಕೆಗಳನ್ನು ಸಲಹೆಯ ಮೂಲಕ ಮಾರ್ಗದರ್ಶನದ ಮೂಲಕ ಪರಿಹರಿಸುವ ಕಾರ್ಯವನ್ನು ಮಾಡುತ್ತಾನೆ. ಹಾಗೂ ವಿದ್ಯಾರ್ಥಿಗಳಲ್ಲಿ, ಆಡಳಿತ ವರ್ಗದವರಲ್ಲಿ ಉತ್ತಮ ಸಹಕಾರ ಸಂಬಂಧವನ್ನು, ಹೊಂದಾಣಿಕೆ ಸಂಬಂಧವನ್ನು ಬೆಳೆಸುವುದು ಹಾಗೂ ಸಾಮಾಜಿಕ ಮೌಲ್ಯಗಳನ್ನು ಹಾಗೂ ನೈತಿಕ ಮೌಲ್ಯಗಳ ಮೂಲಕ ಶಿಕ್ಷಕ ತನ್ನ ಸ್ಥಾನದಲ್ಲಿ ಆದರ್ಶ ವ್ಯಕ್ತಿಯಾಗುವಂತೆ ಕಾರ್ಯನಿರ್ವಹಿಸುತ್ತಾನೆ,

– 9ನೇ ಪುಟಕ್ಕೆ ಮುಂದುವರೆದುದು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಸಂಗೀತದಲ್ಲಿ ಶ್ರವಣಜ್ಞಾನದ ಪ್ರಾಮುಖ್ಯತೆ ಮತ್ತು ಸುಮಧುರ ಹಾಗೂ ಕರ್ಕಶ ಧ್ವನಿಗಳ ಮಧ್ಯೆ ವೈಜ್ಞಾನಿಕ ಅಂತರ

**ಮಂಜುನಾಥ ಬ. ಭಜಂತ್ರಿ,** ಸಂಶೋಧನಾ ವಿದ್ಯಾರ್ಥಿ, ಸಂಗೀತ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಸಂಗೀತವು ಸುಮಧುರವಾದ 'ನಾದ'. ನಾದವನ್ನು ಭಾರತೀಯ ಸಂಸ್ಕೃತಿಯಲ್ಲಿ ಓಂಕಾರವೆಂದು ಕರೆಯಲಾಗಿದೆ. ಓಂಕಾರದಿಂದಲೇ ಜಗತ್ತಿನ ಸೃಷ್ಟಿಯಾಯಿತೆಂಬ ನಂಬಿಕೆ ಇದೆ. ಸಂಗೀತವು ಮಾನವನ ಹುಟ್ಟಿನಿಂದಲೂ ಇದೆ. ನಾಗರಿಕತೆ ವಿಕಾಸಗೊಳ್ಳುತ್ತ ಬಂದಂತೆ ಸಂಗೀತವೂ ವಿಕಸನಗೊಳ್ಳುತ್ತ ಬಂದಿದೆ.

'ನಾದ' ಮೊದಲು ಕೇಳಿಸಿದ್ದು ಎಲ್ಲಿ ? ಸಂಗೀತ ಆರಂಭಗೊಂಡಿದ್ದು ಯಾವಾಗ ಎಂಬ ಪ್ರಶ್ನೆಗಳಿಗೆ ಉತ್ತರ ಸುಲಭವಲ್ಲ. ಕಿವಿಗೆ ಕೇಳಿಸುವ ಹಲವಾರು ರೀತಿಯ ಸದ್ದುಗಳಿಂದ ಮಾನವ ಅವುಗಳ ವ್ಯತ್ಯಾಸ ತಿಳಿದುಕೊಂಡ ಕಿವಿಗೆ ಇಂಪಾಗುವ ಸದ್ದುಗಳನ್ನು ಕೇಳಲು ಬಯಸಿದ ಹಾಗೆಯೇ ಕರ್ಕಶವಾಗುವ ಸದ್ದುಗಳನ್ನು ದೂರ ಮಾಡಲು ಪ್ರಯತ್ನಿಸಿದ ಇವುಗಳಿಂದ ನಾದವನ್ನು ಮಾನವ ತಿಳಿದುಕೊಂಡ ಅಲ್ಲದೇ ಪ್ರಕೃತಿಯಲ್ಲಿ ಎಲ್ಲಿಂದಲೋ ಕೇಳಿಸುವ ತಮಟೆಯ ಸಪ್ಪಳ, ಪಕ್ಷಿಗಳ ಇಂಪಾದ ಧ್ವನಿ ಗಾಳಿಯಲ್ಲಿ ಅಲೆ ಅಲೆಯಾಗಿ ತೇಲಿ ಬರುವ, ಬಳುಕುವ ಬಳ್ಳಿ, ತೊನೆದಾಡುವ ನೀಳಮರ, ಹರಿಯುವ ನೀರಿನ ಮಂಜುಳ ಆದಿಮಾನವನ ಮೇಲೆ ಮೋಡಿ ಮಾಡಿವೆ. ಯಾವುದಕ್ಕೋ ಕೈ ತಾಗಿದಾಗ ಕೇಳಿಸುವ ವಿಚಿತ್ರ ಶಬ್ದಗಳಿಂದ ಚಕಿತಗೊಂಡು ಮತ್ತೆ ಕೇಳಬೇಕು ಎಂಬ ಬಯಕೆ ಸದ್ದಿನ ಮೇಲೆ ಸದ್ದು ಲಯಬದ್ಧವಾದಾಗ ಅದಕ್ಕೆ ಅನುಗುಣವಾಗಿ ಹೆಜ್ಜೆಯಿಡುವ ತವಕ ಗುಡುಗು ಮಿಂಚಿನ ಭಯಾನಕ ಸದ್ದು. ಹೀಗೆ ಅನೇಕ ರೀತಿಯ ಸದ್ದುಗಳಿಂದ ನಾದದ ವ್ಯತ್ಯಾಸ ತಿಳಿದು ಸಂತೋಷವಾದಾಗ ಗುಣುಗುತ್ತ ಹಾಡುತ್ತ ಕುಣಿಯುತ್ತ ಗಾಯನ ನರ್ತನದ ಹುಟ್ಟು ಆಯಿತು ಎಂಬ ನಂಬಿಕೆ ಇದೆ. ಈ ರೀತಿಯ ಶ್ರವಣಜ್ಞಾನದಿಂದಲೇ ಸಂಗೀತದ ಹುಟ್ಟು ಆಗಿರುವುದರಿಂದ ಸಂಗೀತದಲ್ಲಿ ಶ್ರವಣ ಜ್ಞಾನಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡಲಾಗಿದೆ.

ಸಂಗೀತವು ಶ್ರವಣಜ್ಞಾನದ ಆಧಾರದ ಮೇಲೆ ನಿಂತಿದೆ ಎಂದು ಹೇಳಿದರೆ ತಪ್ಪಾಗಲಾರದು. ಸಂಗೀತವು ನೋಡುವಂತಹದಲ್ಲ ಅದು ಕಿವಿಗಳಿಂದ ಆಲಿಸಿ ಮನಸ್ಸಿಗೆ ಮುದ ನೀಡುವಂತಹದ್ದು ಕಣ್ಣಿಲ್ಲದವರೂ ಸಹ ಶ್ರವಣಜ್ಞಾನದಿಂದ ಸಂಗೀತವನ್ನು ಕಲಿಯ ಬಲ್ಲವರಾಗಿದ್ದಾರೆ ಹಾಗೂ ಹಾಡಬಲ್ಲವರಾಗಿದ್ದಾರೆ. ಕೇಳಿಸುವ ನಾದದಿಂದಲೇ ಅವುಗಳ ಸ್ಥಾಯಿಗಳನ್ನು ಗುರುತಿಸಿ ತಾರಸಪ್ತಕ, ಮಂದ್ರಸಪ್ತಕ ಹಾಗೂ ಏಳು ಸ್ವರಗಳನ್ನಾಗಿ ವಿಂಗಡಿಸಲಾಯಿತು. ಬರೀ ಸ್ವರಗಳನ್ನು ಹಾಡಿದರೆ ನುಡಿಸಿದರೆ ಸಾಲದು ಅದನ್ನು ಲಯ ಬದ್ಧವಾಗಿ ತಾಲಬದ್ಧವಾಗಿ ಹಾಡಿದರೆ ನುಡಿಸಿದರೆ ರಂಜನೆ ವರ್ಧಿಸುವುದು. "ಸ್ವರ ಮಾತಾ ಲಯ ಪಿತಾ" ಎಂಬ ಉಕ್ತಿಯಿದೆ. ಸ್ವರ ಮತ್ತು ಲಯ ಸಂಗೀತದ ಎರಡು ಕಣ್ಣುಗಳಿದ್ದಂತೆ. ತಾಲಕ್ಕೆ ಲಯವೇ ಮೂಲಾಧಾರ ಈ ತಾಲ ಲಯಗಳ ಆಧಾರದ ಮೇಲೆ ವಿಶ್ವ ನಿಂತಿದೆ. ಲಯವು ಚರಾಚರ ವಸ್ತುಗಳಲ್ಲಿ ಒಂದು ನಿಯಮಿತ ಶಕ್ತಿಯಾಗಿದೆ. ಹೃದಯದ ಮಿಡಿತಕ್ಕೊಂದು ಲಯವಿದೆ. ಅದು ತುಸು ಏರುಪೇರಾದರೂ ಅಪಾಯ ತಪ್ಪಿದ್ದಲ್ಲ ಹಗಲು ಇರುಳು ಋತುಮಾನಗಳು ಸರಿಯಾದ ಕಾಲಕ್ಕೆ ಜರುಗುವವು ಇದಕ್ಕೆಲ್ಲ ಸೃಷ್ಟಿಯಲ್ಲಿನ ಲಯವೇ ಕಾರಣ ಮಾನವ ನಿಸರ್ಗದ ಕೂಸು ಪಕ್ಷಿಗಳ ಕೂಗು ಹರಿಯುವ ನೀರಿನ ನಿನಾದ ಮನುಷ್ಯನ ಸಂಗೀತಕ್ಕೆ ಸ್ಫೂರ್ತಿಯಾಯಿತು. ಮನುಷ್ಯನು ಈ ಶ್ರವಣಜ್ಞಾನದ ಕಲೆಯಿಂದಲೇ ಸಂಗೀತವನ್ನು ಲಯದೊಂದಿಗೆ ವರ್ಧಿಸಿಕೊಂಡನು.

## ಶ್ರವಣಜ್ಞಾನದ ಪ್ರಾಮುಖ್ಯತೆ

ಸಂಗೀತದ ಕಲಿಕೆಗೆ ಶ್ರವಣ ಜ್ಞಾನವೇ ಮುಖ್ಯ ಒಂದು ಮಗು ಸಂಗೀತ ಕಲಿಯುವಾಗ ಅದು ಅಕ್ಷರಗಳನ್ನು ನೋಡುವುದಿಲ್ಲ ಬದಲಾಗಿ ತನ್ನ ಗುರು ಹೇಳುತ್ತಿರುವ ಸ್ವರಗಳನ್ನು ಆಲಿಸುತ್ತದೆ. ನುಡಿಯುವ ತಂಬೂರಿಯ ನಾದ ಕೇಳುತ್ತದೆ ಹಾಗೂ ನುಡಿಸುತ್ತಿರುವ ಹಾರ್ಮೋನಿಯಮ್ ಜೊತೆಗೆ ತನ್ನ ಧ್ವನಿ ಕೂಡಿಸಲು ಪ್ರಯತ್ನಿಸುತ್ತದೆ. ಹೀಗೆ ಸಂಗೀತಕ್ಕೆ ಮುಖ್ಯ ಅಂಶವೇ ಶ್ರವಣಜ್ಞಾನ. ಅನ್ಯ ಕಲಾಮಾಧ್ಯಮಗಳಿಗೆ ಹೋಲಿಸಿದಲ್ಲಿ ಕೇವಲ ಸಂಗೀತವು ಮಾತ್ರ 'ಶ್ರವಣ ಸಾಧನ' ವಿದ್ಯೆಯೆಂಬುದು ತಿಳಿಯುತ್ತದೆ. ಭೌತಿಕವಾಗಿ ಸ್ಪರ್ಶಿಸಲು ಅಥವಾ ನೋಡಲು ಅಸಾಧ್ಯವಾದ ಸಂಗೀತದ ಸ್ವರಗಳು ಶ್ರವಣಮಾತ್ರದಿಂದ ಗ್ರಹಿಸಬಹುದು. ಆದ್ದರಿಂದ ಪ್ರಾರಂಭದ ಹಂತದಿಂದಲೂ ವಿದ್ಯಾರ್ಥಿಗಳಿಗೆ 'ಶ್ರವಣಜ್ಞಾನದ' ವಿಶೇಷ ಪರಿಶ್ರಮ ಅತ್ಯವಶ್ಯಕ.

ಸಾಮಾನ್ಯವಾಗಿ ಕಲಿಕೆಯ ಪ್ರಾರಂಭದ ಹಂತದಲ್ಲಿ ಶಾಸ್ತ್ರದ ಪರಿಚಯ ನಂತರ ಬರುವುದು ಸಹಜ. ಸಂಗೀತದ ಆರಂಭದಲ್ಲಿ ವಿದ್ಯಾರ್ಥಿಗಳು ಸ್ವರಮಾಧುರ್ಯಕ್ಕೆ ಮಾರುಹೋಗಿ, ಚೀಜ್‌ನ (ರಚನೆ–ಕೃತಿಯ) ಶಬ್ದಗಳ ಹಿಂದೆ ಅಡಗಿರುವ ಸ್ವರಸ್ಥಾನಗಳನ್ನು ತಿಳಿಯದೇ ಇರುವ ಸಾಧ್ಯತೆ ಇದೆ ಈ ಹಿನ್ನಲೆಯಲ್ಲಿ ಸಂಪೂರ್ಣ ಶ್ರವಣಜ್ಞಾನ–ಸೂಕ್ಷ್ಮ ಸ್ವರಗಳ ಗ್ರಹಿಕೆಯ ಶಕ್ತಿ ಅತ್ಯವಶ್ಯಕ. ಪ್ರಾರಂಭಿಕ ಸ್ವರಾಲಂಕಾರ ರಾಗದ ಆರೋಹ ಅವರೋಹಗಳನ್ನು 'ಆ' ಕಾರದಲ್ಲಿ ಹಾಡಿದಾಗಲೂ ಸ್ವರವನ್ನು ಗುರುತಿಸುವ ಕ್ಷಮತೆ ಇರಬೇಕು.

ತಮಗೆ ಬೇಕಾದ ಸ್ವರಸಮೂಹಗಳನ್ನು ತಾವೇ ಕಲಿತು ಹಾಡಿ ರೂಢಿಸಿಕೊಳ್ಳುವುದು ಸುಲಭವಾಗಿ ಕಂಡು ಬಂದರೂ ಅನ್ಯರು ಹಾಡಿದ ಸ್ವರ ಸಮೂಹವನ್ನು ತಕ್ಷಣವೇ ಗುರುತಿಸುವ ಶಕ್ತಿ ವಿದ್ಯಾರ್ಥಿಯಲ್ಲಿದ್ದರೆ ಅದನ್ನು ಕೂಡಲೇ ಸ್ವರಲಿಪಿಯಲ್ಲಿ ಬರೆಯಲೂ ಬಂದರೆ ನಾವು ಕಲಿತ ರಚನೆಯ ಮೂಲ ಸ್ವರೂಪವನ್ನು ಸ್ವಲ್ಪವೂ ಬದಲಾಯಿಸದೆ ಮುಂದಿನ ಪೀಳಿಗೆಗೂ ಕಾಯ್ದಿಡಬಹುದು.

ಒಂದು 'ಚೀಜ್'ನ್ನು (ರಚನೆ–ಕೃತಿಯನ್ನು) ಕಲಿಸಿದ ರೀತಿಯಲ್ಲಿಯೇ ಯಾವ ಬದಲಾವಣೆಯೂ ಇಲ್ಲದೆ ಹಾಡಿದಲ್ಲಿ ಅದು ಸಹಜವಾಗಿಯೇ ತಾಳದ ಚೌಕಟ್ಟಿಗೆ ಒಳಪಟ್ಟಿರುತ್ತದೆ. ಆದರೆ ಕೇವಲ ತಬಲಾದಲ್ಲಿ ಯಾವುದೇ ತಾಳವನ್ನು ಸ್ವತಂತ್ರವಾಗಿ ನುಡಿಸಿದಾಗ ಆ ತಾಳದಲ್ಲಿನ 'ಮಾತ್ರೆ', 'ಪೆಟ್ಟು', 'ಹುಸಿ' ಮುಂತಾದ ಸೂಕ್ಷ್ಮ ಅಂಶಗಳನ್ನು ಗುರುತಿಸುವ ಕ್ಷಮತೆ; ವಿದ್ಯಾರ್ಥಿಗಳಿಗೆ ತಾಳದ ಪರಿಕಲ್ಪನೆ ಮತ್ತು ಗಾಯನದ ಮೇಲೆ ಪ್ರಭುತ್ವ ಸಾಧಿಸಲು ಅನುಕೂಲವಾಗುತ್ತದೆ.

ವಿವಿಧ ಸ್ವರಗಳನ್ನು ಹಾಗೂ ತಾಳದ ಬೋಲ್‌ಗಳನ್ನು ಗುರುತಿಸುವ ಶಕ್ತಿಯಂತೆ, ಮಂದ್ರ–ಮಧ್ಯ–ತಾರ ಸಪ್ತಕದ ಸ್ವರಗಳನ್ನು ಹಾಡಿದಾಗ–ನುಡಿಸಿದಾಗ, ಗ್ರಹಿಸಿ ಹೆಸರಿಸುವ ಕ್ಷಮತೆ ವಿದ್ಯಾರ್ಥಿಯಲ್ಲಿರಬೇಕು.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಈ ಮೇಲೆ ಚರ್ಚಿಸಿದ ಕೆಲವು ಅಂಶಗಳ ಹಿನ್ನಲೆಯಲ್ಲಿ ಶ್ರವಣಜ್ಞಾನದ ಮಹತ್ವವನ್ನು ಸಂಗೀತದ ವಿದ್ಯಾರ್ಥಿಗಳು ಅರಿಯಬಹುದಾಗಿದೆ.

## ಸುಮಧುರ ಹಾಗೂ ಕರ್ಕಶ ಧ್ವನಿಗಳ ಮಧ್ಯೆ ವೈಜ್ಞಾನಿಕ ಅಂತರ

ಏನನ್ನು ನಾವು ಕಿವಿಯಿಂದ ಕೇಳುತ್ತೇವೊ ಅದಕ್ಕೆ ಧ್ವನಿ ಎನ್ನಲಾಗುತ್ತದೆ. ಮಗು ಅಳುವುದು, ಕೂಗಾಡುವುದು, ಸಂಗೀತಗಾರರ ತಾನಗಳು, ಕುದರೆಗಳ ಹೆಜ್ಜೆಯ ಸದ್ದು ಇವುಗಳನ್ನು ಧ್ವನಿ ಎನ್ನುತ್ತಾರೆ. ಆದರೆ ಎಲ್ಲ ಧ್ವನಿಗಳ ಉಪಯೋಗ ಸಂಗೀತದಲ್ಲಿ ಇರುವುದಿಲ್ಲ ಸಂಗೀತದಲ್ಲಿ ಕೇವಲ ಮಧುರ ಧ್ವನಿಗಳ ಉಪಯೋಗ ಇರುತ್ತದೆ. ಇದಕ್ಕೆ ನಾದ ಎನ್ನುತ್ತಾರೆ. ಬೇರೆ ರೀತಿಯ ಧ್ವನಿಗಳಿಗೆ ಕರ್ಕಶ ಅಥವಾ ಬರಿ ಸದ್ದು ಎಂದು ಕರೆಯುತ್ತಾರೆ. ಇವು ಕರ್ಕಶವಾಗಿರುತ್ತವೆ. ಮಧುರ ಧ್ವನಿಗಳನ್ನು ಮನುಷ್ಯ ಕೇಳಲು ಬಯಸುತ್ತಾನೆ ಹಾಗೆಯೇ ಅಮಧುರ ಧ್ವನಿಗಳಿಂದ ಅಸಂತುಷ್ಟಗೊಳ್ಳುತ್ತಾನೆ ಈ ಎರಡು ಧ್ವನಿಗಳ ಮಧ್ಯೆ ಈ ಕೆಳಗಿನ ರೀತಿಯ ವೈಜ್ಞಾನಿಕ ಅಂತರವಿದೆ ಸಿತಾರ, ತಾನಪುರ್ ಅಥವಾ ತಬಲಾ ನುಡಿಸುವುದರಿಂದ ಇದರ ತಂತಿಗಳು ಹಾಗೂ ಚರ್ಮದ ಕಂಪನದಿಂದ ಧ್ವನಿ ಉತ್ಪನ್ನವಾಗುತ್ತದೆ. ತಂತಿಗಳ ಕಂಪನಗಳು ಸಾಧಾರಣವಾಗಿ ಕಣ್ಣಿಗೆ ಕಾಣಿಸುತ್ತದೆ. ತಬಲಾದ ಮೇಲೆ ಕೂದಲನ್ನು ಇಟ್ಟು ನುಡಿಸುವುದರಿಂದ ಆ ಕೂದಲು ಕುಣಿದಾಡುವುದು ಕಾಣಿಸುತ್ತದೆ. ಇದರಿಂದ ನಮಗೆ ತಬಲಾದ ಚರ್ಮ ಕಂಪಿಸುವುದು ತಿಳಿಯುತ್ತದೆ. ಎಲ್ಲಿಯವರೆಗೆ ಒಂದು ವಸ್ತು ಕಂಪಿಸುತ್ತಿರುತ್ತದೆಯೋ ಅಲ್ಲಿಯವರೆಗೂ ಧ್ವನಿ ಉತ್ಪಾದಿಸುತ್ತಿರುತ್ತದೆ. ಯಾವಾಗ ಕಂಪನ ನಿಲ್ಲುತ್ತದೋ ಆಗ ಧ್ವನಿ ಕೇಳಿಸುವುದು ನಿಲ್ಲುತ್ತದೆ. ಇದರಿಂದ ಇಲ್ಲಿ ವಸ್ತುವಿನ ಕಂಪನದಿಂದ ಧ್ವನಿ ಉತ್ಪನ್ನವಾಗುತ್ತದೆ ಎನ್ನುವುದು ಸ್ಪಷ್ಟವಾಗುತ್ತದೆ. ಆದರೆ ಕೆಲವು ಕಂಪನಗಳಿಂದ ಧ್ವನಿ ಉತ್ಪಾದನೆಯಾಗುವುದಿಲ್ಲ ತಾನ್‌ಪುರದ ತಂತಿಗಳು ಸಡಿಲವಾಗಿದ್ದರೆ ಧ್ವನಿ ಉತ್ಪನ್ನವಾಗುವುದಿಲ್ಲ ಆದರೆ ಅದನ್ನು ನಿಧಾನವಾಗಿ ಬಿಗಿಯಲು ಪ್ರಾರಂಭಿಸಿದಾಗ ಅದರಿಂದ ಧ್ವನಿ ಕೇಳಿಸುತ್ತದೆ ಹಾಗೆಯೇ ಅದನ್ನು ಎಷ್ಟು ಬಲವಾಗಿ ಬಿಗಿಯುತ್ತೇವೋ ಅಷ್ಟು ಹೆಚ್ಚು ನಾದ ಕೇಳಿಸುತ್ತದೆ ಜೊತೆಯಲ್ಲಿ ಇನ್ನೂ ಹೆಚ್ಚು ಬಿಗಿಯುವುದರಿಂದ ತಂತಿ ಹರಿಯುತ್ತದೆ ಇದರ ಅರ್ಥವೇನೆಂದರೆ ಕಂಪನಕ್ಕೆ ಒಂದು ನಿರ್ಧಿಷ್ಟ ಹಂತ ಎಂದು ಸೀಮಿತವಿರುತ್ತದೆ. ಅತಿ ಕಡಿಮೆ ಇದ್ದಾಗ ಧ್ವನಿ ಬರುವುದಿಲ್ಲ ಹಾಗೆಯೇ ಅತಿ ಹೆಚ್ಚು ಆದಾಗ ಅದರ ನಷ್ಟವಾಗುತ್ತದೆ. ಅದೇ ರೀತಿಯಾಗಿ ತಬಲಾ ನುಡಿಸುವವರು ಅದರ ಚರ್ಮವನ್ನು ಸಡಿಲ ಮಾಡಿದರೆ ಅದರಿಂದ ಮಧುರ ಧ್ವನಿ ಕೇಳಿಸುವುದಿಲ್ಲ ಅಂತೆಯೇ ಹೆಚ್ಚು ಬಿಗಿಯುವುದರಿಂದ ಚರ್ಮ ಹರಿಯುತ್ತದೆ. ಅಂದರೆ ಮಧುರ ಧ್ವನಿಯ ಆಂದೋಲನ ನಿಯಮಿತ ಅಂದರೆ ಸಮಾನವಾಗಿರುತ್ತದೆ. ಹಾಗೆಯೇ ಅಮಧುರ ಧ್ವನಿಯ ಆಂದೋಲನ ಅನಿಯಮಿತವಾಗಿರುತ್ತದೆ.

ಸಂಗೀತದಲ್ಲಿ ಒಟ್ಟಾರೆಯಾಗಿ ಮಧುರ ಧ್ವನಿಗೆ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಇದಕ್ಕೆ ಮೇಲಿನ ಕೆಲವು ಅಭಿಪ್ರಾಯಗಳೆ ಸಾಕ್ಷಿಯಾಗಿವೆ ಎಂದರೆ ತಪ್ಪಾಗಲಾರದು.

## ಆಕರ ಗ್ರಂಥಗಳು


- ಸದಾನಂದ ಕನವಳ್ಳಿ, "ವಾದ್ಯಾಲಾಪ"
- ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಪಠ್ಯಪುಸ್ತಕ ರಚನಾ ಸಮಿತಿ, "ಹಿಂದೂಸ್ತಾನಿ ಸಂಗೀತ/ತಾಳವಾದ್ಯ"
- ಹರಿಶ್ಚಂದ್ರ ಶ್ರೀವಾತ್ಸವ, "ಪ್ರವೀಣ ಪ್ರವಾಹ"


■■

– 7ನೇ ಪುಟದಿಂದ ಮುಂದುವರೆದುದು

ಅಲ್ಲದೇ ಈ ಎಲ್ಲಾ ಅಂಶಗಳು ಶಿಕ್ಷಕನ ಪ್ರಮುಖ ಪಾತ್ರವಾಗಿದೆ ಎಂದೇ ಹೇಳಬಹುದು.

## ಉಪಸಂಹಾರ

ಭಾರತದಲ್ಲಿ ಇತರ ಶಿಕ್ಷಣಕ್ಕಿಂತ ಮಾಧ್ಯಮಿಕ ಶಿಕ್ಷಣವು ಮಹತ್ವ ಪೂರ್ಣವಾದ ಸ್ಥಾನವನ್ನು ಪಡೆದುಕೊಂಡಿದೆ. ಇದು ನಮ್ಮ ಸಾಂಸ್ಕೃತಿಕ ಜೀವನವಾದ ಶಿಕ್ಷಣವನ್ನು ನೀಡುವುದರ ಜೊತೆಗೆ ಪ್ರತಿಯೋರ್ವನೂ ಸ್ವಾವಲಂಬಿಯಾಗಲು ಅಗತ್ಯವಾದ ಶಿಕ್ಷಣವನ್ನು ನೀಡುವುದು. ಮಾಧ್ಯಮಿಕ ಶಿಕ್ಷಣವು ಪ್ರಾಥಮಿಕ ಮತ್ತು ಉನ್ನತ ಶಿಕ್ಷಣದ ನಡುವೆ ಬೆಸೆಯುವ ಕೊಂಡಿಯಾಗಿದೆ. ಶಿಕ್ಷಣದಲ್ಲಿ ಗುಣಾತ್ಮಕತೆಯನ್ನು ತರುವುದಾದರೆ ಈ ರೀತಿಯ ಬಂಧವನ್ನು ಅತ್ಯಂತ ಬಲಯುತಗೊಳಿಸುವ ಅವಶ್ಯಕತೆಯಿದೆ. ಮಾಧ್ಯಮಿಕ ಶಿಕ್ಷಣವು ಯಾವುದೇ ಶಿಕ್ಷಣ ವ್ಯವಸ್ಥೆಗೆ ಬೆನ್ನೆಲುಬು ಇದ್ದಂತೆ ಎಂದು ಹೇಳಿದರೆ ತಪ್ಪಾಗಲಾರದು ಬಹುತೇಕ ವಿದ್ಯಾರ್ಥಿಗಳಿಗೆ ಮಾಧ್ಯಮಿಕ ಶಿಕ್ಷಣವು ಅವರ ಜೀವನದ ಕಡೆಯ ಹಂತದ ಶಿಕ್ಷಣವಾಗಿರುವುದರಿಂದ ಮಾಧ್ಯಮಿಕ ಶಿಕ್ಷಣದ ಬೆಳವಣಿಗೆ ಮತ್ತು ಅಭಿವೃದ್ಧಿಯ ಕಡೆ ಗಮನ ಹರಿಸುವುದು ಸೂಕ್ತ. ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನವು ಮಾಧ್ಯಮಿಕ ಶಾಲಾ ಶಿಕ್ಷಣವನ್ನು ವಿಸ್ತರಿಸುವ ಮತ್ತು ಗುಣಮಟ್ಟವನ್ನು ಸುಧಾರಿಸುವ ಗುರಿ ಹೊಂದಿದೆ. ಇದು 9 ಮತ್ತು 10ನೇ ತರಗತಿಯ ಮಾಧ್ಯಮಿಕ ಶಿಕ್ಷಣವನ್ನು ದೇಶ ಮೂಲೆ ಮೂಲೆಗೂ ಹರಡುವ ಗುರಿ ಹೊಂದಿದೆ.ಮಾಧ್ಯಮಿಕ ಶಿಕ್ಷಣ ಗುರಿಯು ಉತ್ತಮ ಗುಣಮಟ್ಟದ ಮಾಧ್ಯಮಿಕ ಶಿಕ್ಷಣವನ್ನು 14–18 ವಯೋಮಾನದ ಹದಿಹರೆಯದವರಿಗೆ ದೊರೆಯುವಂತೆ ಅವರಿಗೆ ಎಲ್ಲಾ ರೀತಿಯಿಂದಲೂ ಅವಕಾಶ ಮಾಡಿಕೊಡುವ ಪರಿಕಲ್ಪನೆಯನ್ನು ಇಟ್ಟುಕೊಂಡಿದೆ. ವಿಶೇಷವಾಗಿ ಸಮಾಜದಲ್ಲಿ ಆರ್ಥಿಕವಾಗಿ ದುರ್ಬಲದವರಿಗೆ, ಶೈಕ್ಷಣಿಕವಾಗಿ ಹಿಂದುಳಿದವರಿಗೆ ಹುಡುಗಿಯರಿಗೆ, ಗ್ರಾಮಾಂತರ ಪ್ರದೇಶದಲ್ಲಿ ವಾಸಿಸುವ ವಿಕಲಚೇತನರಿಗೆ, ನಿರ್ಲಕ್ಷಿತ ವರ್ಗಗಳಿಂದ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಇತರೆ ಹಿಂದುಳಿದ ಗುಂಪು ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಅಲ್ಪಸಂಖ್ಯಾತರಿಗೆ ಮಾಧ್ಯಮಿಕ ಶಿಕ್ಷಣವನ್ನು ಒದಗಿಸುವ ಗುರಿ ಹೊಂದಿದೆ.

## ಆಕರ ಗ್ರಂಥಗಳು


- 'ಬಹುಮುಖಿ' (2005) ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಸಂಪನ್ಮೂಲ ಸಾಹಿತ್ಯ' ಬೆಂಗಳೂರು ಕರ್ನಾಟಕ ಸರ್ಕಾರ.
- **ಡಿ.ಎಸ್.ಇ.ಆರ್. ಟಿ.,** "ಚೈತನ್ಯ ಶಿಕ್ಷಕರ ಸಾಹಿತ್ಯ", ಬೆಂಗಳೂರು ಕರ್ನಾಟಕ ಸರ್ಕಾರ.
- **ಡಿ.ಎಸ್.ಇ.ಆರ್.ಟಿ.** (2003),"ಶಿಕ್ಷಣದಲ್ಲಿ ರಂಗಕಲೆ, ಶಿಕ್ಷಕರಿಗೆ ತರಬೇತಿ ಸಾಹಿತ್ಯ" ಬೆಂಗಳೂರು ಕರ್ನಾಟಕ ಸರ್ಕಾರ.
- **ಡಿ.ಎಸ್.ಇ.ಆರ್.ಟಿ.** (2003) "ಸ್ಪಂದನ " ಎಸ್.ಡಿ.ಎಂ.ಸಿ. ಸದಸ್ಯರಾಗಿ ತರಬೇತಿ ಪೂರಕ ಸಾಹಿತ್ಯ" ಬೆಂಗಳೂರು ಕರ್ನಾಟಕ ಸರ್ಕಾರ.
- **ಡಿ.ಎಸ್.ಇ.ಆರ್. ಟಿ.** (2003), "ಪಠ್ಯಕ್ರಮ ಕಾರ್ಯಚರಣೆಯ ತತ್ವಗಳು– ಡಿ.ಎಡ್. ಪ್ರಥಮ ವರ್ಷ", ಬೆಂಗಳೂರು ಕರ್ನಾಟಕ ಸರ್ಕಾರ.
- **ಲೋಕಾಪೂರ ಐ. ಎ.** (1994), "ಪ್ರೌಢ ಶಿಕ್ಷಣ ಹಾಗೂ ಶಿಕ್ಷಣದ ಕಾರ್ಯಗಳು" ಗದಗ ವಿದ್ಯಾನಿಧಿ ಪ್ರಕಾಶನ.


■■

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಗದಗ ರಂಗಭೂಮಿ ಕಲಾವಿದರು

✍ **ಶಿವಬಸಯ್ಯ ಎಸ್. ಗಡ್ಡದಮಠ,** ಖಯಾಲ ಉಪನ್ಯಾಸಕರು, ಪಿ. ಪಿ. ಜಿ. ಸಂಗೀತ ಮಹಾವಿದ್ಯಾಲಯ, ಗದಗ

ಮಾನವ ತನ್ನ ಭಾವನೆಗಳು ವ್ಯಕ್ತಪಡಿಸಲು ಕಂಡುಕೊಂಡ ಪ್ರಭಾವಿತ ಮಾಧ್ಯಮಗಳಲ್ಲಿ ನಾಟಕವೂ ಒಂದು. ಮಾನವ ಸೃಷ್ಠಿಸಿದ ಹಲವಾರು ಲಲಿತಕಲೆಗಳಲ್ಲಿ ನಾಟಕ ಸರ್ವಶ್ರೇಷ್ಠಾದುದು. 'ಕಾವ್ಯೇಷು ನಾಟಕಂ ರಮ್ಯಂ' ಎಂಬುದು ನಾಟಕದ ಜನಪ್ರಿಯತೆಯನ್ನು ಹೇಳುತ್ತದೆ. ಪೂರ್ವದಲ್ಲಿ ಶ್ರೀ ಸಾಮಾನ್ಯನನ್ನು ರಂಜಿಸುತ್ತಾ ಬಂದಿರುವುದು ಜನಪದ ರಂಗಭೂಮಿ. ಈ ಜನಪದ ರಂಗಭೂಮಿಯ ವಿಕಾಸವೇ ವೃತ್ತಿ ರಂಗಭೂಮಿಯ ಉಗಮಕ್ಕೆ ಪ್ರೇರಣೆ. ಕರ್ನಾಟಕ ವೃತ್ತಿ ರಂಗಭೂಮಿಗೆ ಒಂದು ಶತಮಾನದ ಇತಿಹಾಸವಿದೆ. ಉತ್ತರ ಕರ್ನಾಟಕದ ವೃತ್ತಿರಂಗಭೂಮಿಗೆ ನಾಂದಿ ಹಾಡಿದ್ದು ಗದಗ ಇಲ್ಲಿನ ವೃತ್ತಿರಂಗಭೂಮಿ ಹಾಗೂ ಹವ್ಯಾಸಿ ರಂಗಾಸ್ತಕರ ಕಿರು ಪರಿಚಯ ಇಲ್ಲಿದೆ.

## ವೃತ್ತಿ ರಂಗಭೂಮಿ ಕಲಾವಿದರು

**ಸಕ್ಕರಿ ಬಾಳಾಚಾರ್ಯರು (ಶಾಂತಕವಿ) :** ಮರಾಠಿ ನಾಟಕಗಳ ಹಾವಳಿಗೆ ಸಿಡಿದೆದ್ದು, ಶ್ರೀ ವೀರನಾರಾಯಣ ಪ್ರಸಾದಿತ ಕೃತಪುರ ನಾಟಕ ಮಂಡಳಿ ಸ್ಥಾಪಿಸಿ, ಅಭಿನಯ ತರಬೇತಿ ನೀಡಿ, ವೃತ್ತಿ ನಾಟಕದ ಹೊಸ ಸಂಪ್ರದಾಯಕ್ಕೆ ನಾಂದಿಹಾಡಿ, 'ಕರ್ನಾಟಕ' ನಾಟಕ ಪಿತಾಮಹ ಎನಿಸಿದರು.

**ಗರುಡ ಸದಾಶಿವರಾಯರು :** 'ಶ್ರೀ ದತ್ತಾತ್ರೇಯ ಸಂಗೀತ ನಾಟಕ ಮಂಡಳಿ'ಯನ್ನು ಹುಟ್ಟು ಹಾಕಿ, ನಾಟಕ ಮಾಧ್ಯಮವನ್ನು ರಾಷ್ಟ್ರೀಯ ಜಾಗೃತಿಗೆ ಪರಿಣಾಮಕಾರಿಯಾಗಿ ಬಳಸಿಕೊಂಡರು. ಬಾಲವಿವಾಹ, ಅಸ್ಪೃಶ್ಯತೆ, ವರದಕ್ಷಿಣೆ ಮೊದಲಾದ ಸಾಮಾಜಿಕ ಅನಿಷ್ಠಗಳ ವಿರುದ್ಧ ನಾಟಕ ಮಾಧ್ಯಮದಿದಂಲೇ ಸಮರ ಸಾರಿದರು. ಇತರೇ ಹಲವು ನಾಟಕ, ಮಂಡಳಿಗಳಲ್ಲಿಯೂ ನಾಟ್ಯಚಾರ್ಯರಾಗಿ ಕೆಲವು ವರ್ಷಕಾಲ ಸೇವೆ ಸಲ್ಲಿಸಿ 'ಕರ್ನಾಟಕ ನಾಟಕಾಲಂಕಾರ' ಎನಿಸಿದ್ದಾರೆ.

**ಗುಡಿ ರಾಘವೇಂದ್ರಾಚಾರ್ಯರು :** ಅಸ್ಖಲಿತ ಮಾತುಗಾರರೂ, ಅಭಿನಯ ಚತುರರೂ, ಕೀರ್ತನಕಾರರೂ, ಪ್ರವಚನಕಾರರೂ, ಸಂಸ್ಕೃತ ಕನ್ನಡ ಸಾಹಿತ್ಯಾಭ್ಯಾಸಿಗಳೂ ಆಗಿದ್ದರು. ಪುರುಷ, ಸ್ತ್ರೀ ಪಾತ್ರಗಳನ್ನು ಸುಂದರವಾಗಿ ನಿರ್ವಹಿಸುತ್ತಿದ್ದರು. ಹುಯಿಲಗೋಳ ನಾರಾಯಣರಾಯರ ನಾಟಕಗಳು ಯಶಸ್ವಿಯಾಗಲೂ ಗುಡಿಯವರ ನಟನೆಯೇ ಕಾರಣಾಗಿತ್ತು.

**ಗರುಡ ಶ್ರೀಪಾದರ ರಾಯರು :** ಬಾಲನಟನಾಗಿದ್ದಲೇ 'ಸತ್ಯಸಂಕಲ್ಪ'ದ ಕುಮಾರ ಪಾತ್ರಕ್ಕೆ ಗಾಂಧೀಜಿಯವರಿಂದ ಮೆಚ್ಚುಗೆ ಪಡೆದರು. ಮಾಸ್ತಿಯವರಿಂದ 'ಬಾಲ ಅಭಿನಯ ಕೇಸರಿ' ಬಿರುದು ದೊರೆಯಿತು. ಸ್ತ್ರೀ ಪಾತ್ರ, ಹಾಸ್ಯಪಾತ್ರ, ಗಂಭೀರ ಪಾತ್ರಗಳಿಗೆ ಜನರಿಂದ ಪ್ರಶಂಸೆ ಪಡೆದರು. ಗದುಗಿನಲ್ಲಿ 'ಗರುಡ ನಾಟ್ಯ ಸಂಘ' ಸ್ಥಾಪಿಸಿ ಹಲವು ನಾಟಕಗಳನ್ನು ಪ್ರದರ್ಶಿಸಿದರು.

**ಶಿವಮೂರ್ತಿಸ್ವಾಮಿ ದೇವಗಿರಿ :** ಗರುಡುರ ನಾಟಕ ಕಂಪನಿಯಲ್ಲಿ ತನಗೊದಗಿದ ಪಾತ್ರಕ್ಕೆ ಕಳೆಕಟ್ಟುತ್ತಿದ್ದ ಅಭಿನಯ ಚುತರರಾಗಿದ್ದರು. ನಂತರ ಪಂ. ಪುಟ್ಟರಾಜ ಗವಾಯಿಗಳವರ ನಾಟಕ ಕಂಪನಿಯಲ್ಲಿ ನಾಯಕ ನಟರಾಗಿ, ನಿರ್ದೇಶಕರಾಗಿ, ಹಲವಾರು ಕಲಾವಿದರನ್ನು ತಯಾರು ಗೊಳಿಸಿದರು, ಪುರುಷರಿಂದಲೇ ಸ್ತ್ರೀ ಪಾತ್ರಗಳನ್ನು ಮಾಡಿಸಿ 'ಸಂಪೂರ್ಣ ಹೇಮರೆಡ್ಡಿ ಮಲ್ಲಮ್ಮ' 'ಸತಿಸುಕನ್ಯಾ ರತ್ನಹಾರ, ದೇವರದುಡ್ಡು ನಾಟಕಗಳನ್ನು ಯಶಸ್ವಿಯಾಗಿ ಪ್ರದರ್ಶಿಸಿದರು.

**ಹೊಂಬಳ ಹುಚ್ಚಾಚಾರ್ಯರು :** ಸ್ತ್ರೀ ಪಾತ್ರದಲ್ಲಿ ಜನಮನ್ನಣೆ ಪಡೆದ ಹುಚ್ಚಾಚಾರ್ಯರ ಸ್ತ್ರೀಪಾತ್ರ ನಿರ್ವಹಣೆ ಅಮೋಘವೂ, ಸಹಜವೂ ಆಗಿದ್ದು, ಅವರು ಸ್ತ್ರೀ ವೇಷ ತೊಟ್ಟು ಅರಿಷಣ, ಕುಂಕುಮ ಕಾರ್ಯಕ್ರಮಗಳಿಗೆ ಹೋದರೆ ಆಕೆ ಹೆಣ್ಣು ಮಗಳೇ ಎಂದು ಸ್ತ್ರೀಯರು ಭಾವಿಸುತ್ತಿದ್ದರಂತೆ. ಅಭಿನಯ ಚತುರರಾದ ಅವರು ಭೀಮಸೇನ, ಘಟೋತ್ಕಜ ಪಾತ್ರಗಳನ್ನು ಅದ್ಭುತವಾಗಿ ಮಾಡಿದವರು.

**ಯಶೋಧರಾ ಗರುಡ :** ಗರುಡ ಸದಾಶಿವರಾಯರ ಕೊನೆಯ ಪುತ್ರಿ, ಬಾಲ ಪಾತ್ರಗಳಿಂದ ಪ್ರೇಕ್ಷಕರಿಗೆ ಮೋಡಿ ಮಾಡಿದ್ದ ಬಾಲಕಿ ಚಿಕ್ಕವಯಸ್ಸಿನಲ್ಲೇ ಕಾಯಿಲೆಗೆ ತುತ್ತಾಗಿ ವಿಧಿವಶಳಾದಳು.

**ಗದಗ ರತ್ನಾ :** ಅಬ್ಬಿಗೇರಿ ಬಸನಗೌಡರ 'ಕನ್ನಡ ಸಾಹಿತ್ಯ ಸೇವಾ ಸಂಗೀತ ನಾಟಕ ಮಂಡಳಿ'ಯಲ್ಲಿ ಪ್ರತಿಭಾ ಸಂಪನ್ನ ಕಲಾವಿದೆಯಾಗಿ, ಸ್ವಾತಂತ್ರ್ಯ ಚಳುವಳಿ ಸನ್ನಿವೇಶದಲ್ಲಿ 'ಕಿತ್ತೂರ ಚೆನ್ನಮ್ಮ' ಝಾನ್ಸಿ ಲಕ್ಷ್ಮೀಬಾಯಿ 'ನರಗುಂದ ಬಂಡಾಯ' ನಾಟಕಗಳಲ್ಲಿನ ಪಾತ್ರಗಳಿಂದ ಜನಮನ್ನಣೆ ಪಡೆದರು.

**ಬಸವಣ್ಣೆಯ್ಯ ಶಾಸ್ತ್ರ, ಬಸವನಕಟ್ಟೆ :** ಪಂ. ಪುಟ್ಟರಾಜ ಗವಾಯಿಗಳವರು ಸ್ಥಾಪಿಸಿದ 'ಶ್ರೀ ಗುರು ಕುಮಾರೇಶ್ವರ ಕೃಪಾ ಪೋಷಿತ ಲಿಂ. ಪಂಚಾಕ್ಷರ ಗವಾಯಿಗಳ ನಾಟಕ ಮಂಡಳಿ' ಯಲ್ಲಿ ಇಪ್ಪತ್ತೈದು ವರ್ಷ ಕಲಾ ಸೇವೆ ಸಲ್ಲಿಸಿದ್ದಾರೆ. ದೇವಗಿರಿ ಶಿವಮೂರ್ತಿ ಸ್ವಾಮಿಗಳ ಗರಡಿಯಲ್ಲಿ ಪಳಗಿ, ಸ್ತ್ರೀ ಪಾತ್ರಗಳಲ್ಲೂ ಹಾಗೂ ಪುರುಷ ಪಾತ್ರಗಳಲ್ಲೂ ಶ್ರೇಷ್ಠ ಅಭಿನಯ ತೋರಿದರು.

**ಎಚ್.ಡಿ. ಮಹಾಂತೇಶ ಶಾಸ್ತ್ರಿಗಳು :** ತಮ್ಮ ನಾಟಕ, ನಾಟ್ಯಸಂಘ, ಅಭಿನಯದಿಂದ ಗದುಗಿನ ಹೆಸರನ್ನು ಮೆರಿಸಿದ್ದಾರೆ. ಪೌರಾಣಿಕ, ಸಾಮಾಜಿಕ ವಸ್ತುಗಳೇ ಇವರ ನಾಟಕದ ಜೀವಾಳ ಐವತ್ತಕ್ಕೂ ಹೆಚ್ಚು ನಾಟಕಗಳಲ್ಲಿ ಇವರ ಪ್ರತಿಭೆಯ ಮಿಂಚು ಹರಿದಾಡಿದೆ, ಹಾಸ್ಯದ ಹೊನಲು ಹರಿದಿದೆ. ಕರುಣಾರಸ ಮಡುಗೊಂಡಿದೆ. ವಿಡಂಬನೆಯ ಚಾಟಿಯ ಏಟು ಸಾಮಾಜಿಕರನ್ನು ಎಚ್ಚರಿಸಿದೆ. ಅಂದಿನ ಮುಖ್ಯಮಂತ್ರಿ ಬಿ. ಡಿ. ಜತ್ತಿ ಯವರಿಂದ 'ನಟರಾಜ ಸುವರ್ಣ ಪದಕ' ಅರ್ಪಣೆಯು ಕನ್ನಡ ನಾಟಕ ಪ್ರಪಂಚದಲ್ಲಿ 'ನಾಟ್ಯಕವಿರಾಜ' ರನ್ನಾಗಿಸಿದೆ.

**ಶ್ರೀ ರುದ್ರಪ್ಪ ಕಲ್ಲಪ್ಪ ಮತ್ತೀಗಟ್ಟಿ (ಚವಡಣ್ಣವರ) :** ಪಂ. ಪಂಚಾಕ್ಷರ ಗವಾಯಿಗಳವರಲ್ಲಿ ಸಂಗೀತ, ಶಿಕ್ಷಣ ಪಡೆದು, ಗವಾಯಿಗಳ ಆಶ್ರಯದಲ್ಲಿ ರಂಗ ಕಲಾಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ್ದಾರೆ. 'ಕೊಂಡು ತಂದ ಗಂಡದಲ್ಲಿ' ಠಾಕೂರ್ ಪಾತ್ರಕ್ಕೆ ಜನಮನ್ನಣೆ ಪಡೆದ ಕಲಾವಿದರಾಗಿದ್ದಾರೆ.

**ಬಿ.ಬಿ. ಬಣ್ಣದ :** ಭಾಗವತರ ಆಟದಿಂದ ಬಣ್ಣ ಹಾಕುವವರೆಗೆ ಬೆನಕಪ್ಪನವರ ವ್ಯಾಪ್ತಿ ವಿಸ್ತರಿಸಿದೆ. ಇವರು ಬಣ್ಣಹಾಕಿಕೊಂಡು, ವೇಷಭೂಷಣ ಧರಿಸಿ ದೊಡ್ಡಾಟದಲ್ಲಿ ಕುಣಿಯುವ ರೀತಿ, ಮಾತಿನ ಧಾಟು, ಹಾಡುವ ಧಾಟಿ, ಕೇಳಲು ಸೊಗಸು, ನೋಡಲು ಕಣ್ಣಿಗೆ ಹಬ್ಬವೆನಿಸುವಂತ ಕಲಾಪ್ರತಿಭಾನ್ವಿತರು.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

**ಪಿ. ಭೀಮರಾವ್ :** ಶಾಲೆಯಲ್ಲಿದ್ದಾಗಲೇ ನಾಟ್ಯದ ಅಭಿಲಾಷೆ, ಶಾಲೆಯ ವಾರ್ಷಿಕೋತ್ಸವ, ನಾಡಹಬ್ಬ, ಉತ್ಸವಗಳಲ್ಲಿ, ಚಿಕ್ಕ ಚಿಕ್ಕ ಪಾತ್ರ ವಹಿಸಿ 'ಭಲೆ' ಎನ್ನಿಸಿಕೊಂಡವರು. ಮುಂದೆ ಗುಬ್ಬಿ ಕಂಪನಿ, ಹಿರಣ್ಣಯ್ಯ ಕಂಪನಿಗಳಲ್ಲಿ ಪ್ರಭುದ್ಧ ನಟರಾಗಿ ಬೆಳೆದರು.

**ಎನ್. ವ್ಹಿ. ಹುಯಿಲಗೋಳ :** ಇವರು ಒಳ್ಳೆಯ ಆಟಗಾರರಿದ್ದಂತೆ ಶ್ರೇಷ್ಠ ನಟರೂ ಆಗಿದ್ದರು. ಗದಗ ಯಂಗ್ ಮನ್ ಅಮೆಚೂರ ನಾಟ್ಯ ಸಂಘ' ದಲ್ಲಿ ಪಾತ್ರವಹಿಸುತ್ತಿದ್ದಂತೆ. 'ಯಂಗಮನ್ ಫುಟ್‌ಬಾಲ್ ಕ್ಲಬ್'ದ ಫುಟಬಾಲ್ ಆಟಗಾರರಾಗಿದ್ದರು.

**ಶಿವಯೋಗಿ ಶಾಸ್ತ್ರೀ ದೇವಗಿರಿ :** ಗದುಗಿನ ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ಹಲವಾರು ವರ್ಷ ಗವಾಯಿಗಳ ಶಿಷ್ಯತ್ವ ಪಡೆದು ಸಂಗೀತ ಅಭಿನಯ ಕಲೆ ಕಲಿತು ನಂತರ ಗವಾಯಿಗಳ ನಾಟಕ ಕಂಪನಿಯಲ್ಲಿ ಸ್ತ್ರೀ ಪುರುಷ ಪಾತ್ರಗಳನ್ನು ನಿರ್ವಹಿಸಿ ಪ್ರಸಿದ್ಧರಾದರು. ನಾಟಕ ಕೀರ್ತನಕಾರರಾಗಿ 'ಕರ್ನಾಟಕ ಕಲಾಶ್ರೀ ಪ್ರಶಸ್ತಿ ಪಡೆದವರಾಗಿದ್ದಾರೆ.

**ಬೆಟಗೇರಿ ಆನಂದ ಸಾನಿ :** ಶಿರಹಟ್ಟಿ ವೆಂಕೋಬರಾವ್ ಹಲಗೇರಿಕರ್ ರವರ 'ಶ್ರೀ ಮಹಾಲಕ್ಷ್ಮೀ ಪ್ರಸಾದಿತ ನಾಟಕ ಮಂಡಳಿ' ಯಲ್ಲಿ ಕಲಾವಿದರಾಗಿ ಕಲಾ ಸೇವೆ ಗೈದವರು.

**ಡಂಬಳ ಸಂಕಣ್ಣ ಸಂಗಪ್ಪ :** ಬೆಳವಣಿಕೆಯವರ 'ಶ್ರೀ ವೀರಭದ್ರೇಶ್ವರ ನಾಟ್ಯ ಸಂಘ' ದಲ್ಲಿ 'ಜಗನ್ಮಾಯ' ಹಾಗೂ 'ಸುಮಾ' ನಾಟಕಗಳಲ್ಲಿ ಹಾಗೂ ಹದ್ಲಿ ಶಿವಪ್ಪ, ಹದ್ಲಿ ಮಲ್ಲಪ್ಪ, ಚಿಕರೆಡ್ಡಿ ಶಿವಪ್ಪ ಇವರ ನೇತೃತ್ವದ 'ಶ್ರೀ ಅಮರೇಶ್ವರ ನಾಟ್ಯ ಸಂಘ' ದ 'ರತ್ನ ಮಾಂಗಲ್ಯ', 'ಹುಚ್ಚರ ರಾಜ್ಯ' ನಾಟಕಗಳಲ್ಲಿ ಅಭಿನಯಿಸಿದ ಕಲಾವಿದರು.

**ಚನ್ನಪ್ಪ ಹುರಕಡ್ಲಿ :** ಎಸ್. ಕೆ. ಮಾಸ್ತರ ಗರಡಿಯಲ್ಲಿ ಪಳಗಿ 'ಯಂಗಮೆನ್ಸ್ ಅಮೆಚೂರ ಕಂಪನಿ'ಯಲ್ಲಿ ಸೇರ್ಪಡೆಯಾದರು. ಹೆಂಗಸರು ಬೆರಳುಕಚ್ಚುವಂತೆ ಸ್ತ್ರೀ ಪಾತ್ರಗಳನ್ನು ಸೊಗಸಾಗಿ ಅಭಿನಯಿಸುತ್ತಿದ್ದರು. ನಂತರ 'ಮಹಾಲಕ್ಷ್ಮೀ ಕಂಪನಿ' ಯಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡಿದರು.

**ಕಂಬಾರ ಎಲ್ಲಪ್ಪ :** ಗಡಿಯಾರ ರಿಪೇರಿ ಜೊತೆ ಅಭಿನಯದಲ್ಲಿ ಆಸಕ್ತಿ ಹೊಂದಿದ್ದ ಕಂಬಾರರು. ಸ್ತ್ರೀ ಪಾತ್ರಕ್ಕೆ ಒಪ್ಪುವ ಮೈಕಟ್ಟು ಹೊದಿದ್ದರು. ಮಾತುಹಾಡಿನಿಂದ ಪ್ರೇಕ್ಷಕರನ್ನು ಮೋಡಿ ಮಾಡುವ ಅಭಿನಯ ಇವರದು. 'ಸ್ತ್ರೀ ಧರ್ಮ ರಹಸ್ಯ' ನಾಟಕದ 'ಲಜ್ಜಾವತಿ ನಾಯಕಿ ಪಾತ್ರ ಹೆಸರು ತಂದಿತು.

**ವಿಠ್ಠಲಸಾ ಕಬಾಡಿ :** ಒಳ್ಳೆಯ ಕಲಾವಿದರು. ತಬಲಾ, ಪೇಟಿ ವಾದನಗಳಲ್ಲಿ ನಿಷ್ಣಾತರು, ಚಿಕ್ಕವರಿದ್ದಾಗಲೇ ಶಿರಹಟ್ಟಿ ವೆಂಕೋಬರಾಯರ ನಾಟಕ ಕಂಪನಿ ಸೇರಿದ್ದರು. ಕೃಷ್ಣಲೀಲಾದಲ್ಲಿ ಕೃಷ್ಣನ ಪಾತ್ರವನ್ನು ಜನ ಮುಗಿಬಿದ್ದು ನೋಡುವಂತೆ ನಟಿಸುತ್ತಿದ್ದರು. ನಾಟಕ ಕಂಪನಿಗಳಲ್ಲಿ ಕೆಲವರ್ಷದ ನಂತರ ಪೇಟಿ ಮಾಸ್ತರರಾಗಿ ಜೀವನ ನಡೆಸಿದರು.

**ಎಸ್. ಕೆ. ಹುಯಿಲಗೋಳ :** ಎಸ್. ಕೆ. ಮಾಸ್ತರರೆಂದೆ ಪ್ರಸಿದ್ಧರಾಗಿದ್ದ ಇವರು ಹುಯಿಲಗೋಳ ನಾರಾಯಣರ ನಾಟಕಗಳನ್ನು ರಂಗಭೂಮಿಗೆ ತಂದು ಯಶಸ್ವಿಗೊಳಿಸಿದರು. ಇವರು ನಾಟಕದ ಗರಡಿ ಆಚಾರ್ಯರೆನಿಸಿದ್ದರು. ವರ್ಷಕ್ಕೊಂದು, ಹೊಸ ನಾಟಕವನ್ನು ನಾರಾಯಣರಾಯರು ಬರೆಯಬೇಕು. ಶ್ರೀನಿವಾಸರಾಯರು ಅದನ್ನು ಆಡಬೇಕು ಎಂಬಂತಿತ್ತು ಇವರ ನಾಟಕದ ಕಾಯಕ

**ಬಸವಣ್ಣೆವ್ವ ಗದಗ :** ಸಂಗಪ್ಪ ಬೆಳವಣಿಕೆಯವರ 'ಶ್ರೀ ವೀರಭದ್ರೇಶ್ವರ ನಾಟ್ಯಸಂಘ' ದಲ್ಲಿನ ಪ್ರತಿಭಾಸಂಪನ್ನ ಕಲಾವಿದೆ 'ಪುಥ್ಥಳಿ' 'ಹೆಣ್ಣಿನ ಜೀವನ', 'ರಕ್ತರಾತ್ರಿ' 'ಚಿತ್ರಾಂಗದಾ' ದಲ್ಲಿ ಅನುಪಮ ಅಭಿನಯ ತೋರಿದರು.

**ನೀಲಕಂಠಭುವಾ ಮಣ್ಣೂರ :** ತಂದೆ ಅನಂತಭಟ್ಟ ಮಣ್ಣೂರರಂತೆ ವೈದಿಕ ಶಾಸ್ತ್ರೀ ಆಗುವ ಬದಲು ಸಂಗೀತ ವಿಶಾರದರಾದರು. ಸಂಗೀತಗಾರರಿಗೆ ಆಶ್ರಯ ನಾಟಕ ಕಂಪನಿಗಳಾಗಿದ್ದ ಕಾಲದಲ್ಲಿ ಗರುಡ ಸದಾಶಿವರಾಯರ ಕಂಪನಿ ಸೇರಿ ಸ್ತ್ರೀ ಪಾತ್ರ ವಹಿಸುತ್ತಿದ್ದರು. ಅಭಿನಯ ಸಂಗೀತದಿಂದ ಅಪಾರ ಜನಮೆಚ್ಚಿಗೆ ಪಡೆದಿದ್ದರು.

**ಹೆಚ್. ಎನ್. ಹೂಗಾರ :** ಎಪ್ಪತ್ತೈದಕ್ಕೂ ಮಿಕ್ಕಿ ನಾಟಕಗಳನ್ನು ರಚಿಸಿ 'ಜ್ಯುಬಿಲಿ ಕವಿ' ಗಳೆಂದು ಹೆಸರು ಪಡೆದವರು. 'ಕಲಾಭೂಷಣ' ಪದವಿಯನ್ನು ಜನತೆಯಿಂದ ಪಡೆದ ಹೂಗಾರರು ನಾಟಕಕಾರಿದ್ದಂತೆ, ಉತ್ತಮ ನಟರೂ ಆಗಿದ್ದರು. ಶ್ರೇಷ್ಠ ಮಟ್ಟದ ಹಾಸ್ಯನಾಟರಾಗಿದ್ದರು.

**ಡಾ. ಎನ್. ಎಚ್. ಗೋಡಬೋಲೆ :** ವೈದ್ಯಕೀಯ ವೃತ್ತಿಯಲ್ಲಿ ತುಂಬಾ ಯಶಸ್ವಿಯಾಗಿರುವ ಗೋಡಬೋಲೆಯವರು ಬಹುಮುಖ ಪ್ರತಿಭೆಯ ಸೇವಾಕಾಂಕ್ಷಿ, ಸಂಗೀತ, ಸಾಹಿತ್ಯ, ನೃತ್ಯ, ನಾಟಕದಂತಹ ಲಲಿತ ಕಲೆಗಳಲ್ಲಿ ತುಂಬಾ ಆಸಕ್ತಿ ಹೊಂದಿದರವರು. ಒಳ್ಳೆಯ ನಾಟಕಕಾರರಾಗಿದ್ದು, ಅನೇಕ ಮರಾಠಿ ನಾಟಕಗಳಲ್ಲಿ ಅಭಿನಯಿಸಿದ್ದಾರೆ.

**ಚಿತ್ತರಗಿ ಗಂಗಾಧರ ಶಾಸ್ತ್ರಿ :** ಶಾಸ್ತ್ರೀಯ ಸಂಗೀತ ಶಿಕ್ಷಣಕ್ಕಾಗಿ ಪಂ. ಪಂಚಾಕ್ಷರಿ ಗವಾಯಿಗಳವರ ಶಿಷ್ಯತ್ವ ಪಡೆದು ನಂತರ ನಟರಾಗಿ ಬೆಳೆದರು. ಗವಾಯಿಗಳ ನಾಟಕ ಕಂಪನಿಯ ವ್ಯವಸ್ಥಾಪಕರಾಗಿ, ನಟರಾಗಿ ಜನಪ್ರೀಯರಾದರು. ನಂತರ 'ಶ್ರೀ ಕುಮಾರ ವಿಜಯ ನಾಟ್ಯ ಸಂಘ' ಸ್ಥಾಪಿಸಿ ಯಶಸ್ವಿಯಾದರು.

**ತುಳಜಪ್ಪ ಗದಗ :** ಶಿರಹಟ್ಟಿ ವೆಂಕೋಬರಾವ್ ಹಲಗೇರಿಕರ್‌ರವರ 'ಶ್ರೀ ಮಹಾಲಕ್ಷ್ಮೀ ಪ್ರಸಾದಿತ ಸಂಗತೀ ನಾಟಕ ಮಂಡಳಿ'ಯಲ್ಲಿ ಕಲಾವಿದರಾಗಿ, ಹಲವಾರು ನಾಟಕಗಳಲ್ಲಿ ನಟಿಸಿ ಉತ್ತಮ ನಟರೆನಿಸಿದರು.

**ಯಶೋಧಾ ಬಳ್ಳಾರಿ :** ಎಮ್. ಹದಿಮೂರನೇ ವಯಸ್ಸಿನಲ್ಲೇ ಅಭಿನಯ ಪ್ರಾರಂಭಿಸಿ, ನಂತರದಲ್ಲಿ ಪೌರಾಣಿಕ, ಐತಿಹಾಸಿಕ, ಸಾಮಾಜಿಕ, ನಾಟಕಗಳಲ್ಲಿ ಸ್ತ್ರೀ ಪಾತ್ರ ಮತ್ತು ಪುರುಷಪಾತ್ರಗಳನ್ನು ಅಭಿನಯಿಸಿ ಪ್ರಸಿದ್ಧರಾದರು.

**ಎಸ್. ಎಸ್. ಸಾರಂಗಮಠ :** ಶ್ರೀ ಹುಚ್ಚೇಶ್ವರ ನಾಟ್ಯ ಸಂಘ, ಕಮತಗಿ ಇದರಲ್ಲಿ ಗರೀಬಿ ಹಟಾವೋ, ಲಂಚ ಸಾಮ್ರಾಜ್ಯ, ಹೆಣ್ಣು ಮಗಳು ಮುಂತಾದ ನಾಟಕಗಳಲ್ಲಿ ಅಭಿನಯಿಸಿ 'ನಟಭಯಂಕರ' 'ಅಭಿನಯ ಚತುರ, ಪ್ರಶಸ್ತಿ ಪಡೆದಿದ್ದಾರೆ. ಹಲವಾರು ಸಾಮಾಜಿಕ, ಐತಿಹಾಸಿಕ, ಪೌರಾಣಿಕ ನಾಟಕಗಳನ್ನು ರಚಿಸಿ, ನಿರ್ದೇಶಿಸಿದ್ದಾರೆ.

**ಸುಶೀಲಮ್ಮ ಬಳ್ಳಾರಿ :** ಕೋಲಾಟ, ದೊಡ್ಡಾಟದಲ್ಲಿ ಹೆಸರು ಮಾಡಿದ ವೃತ್ತಿ ನಾಟಕ ರಂಗ ಕಲಾವಿದೆ. ರಂಗ ಗೀತೆ ಹಾಡುವುದು, ನರ್ತಿಸುವುದರ ಮೂಲಕ ಪ್ರಸಿದ್ಧರಾಗಿದ್ದಾರೆ.

**ಶ್ರೀದೇವಿ ಗದಗ :** ಬಾಲನಟಿಯಾಗಿ ರಂಗ ಪ್ರವೇಶ ಮಾಡಿದ ಶ್ರೀದೇವಿಯವರು, ಶ್ರೀಮತಿ ಭಾರತಿಯವರ ಪುತ್ರಿ. 'ಶ್ರೀ ಉಮಾಮಹೇಶ್ವರಿ ನಾಟ್ಯ ಸಂಘ', ಕೆ. ಬಿ.ಆರ್. ಡ್ರಾಮಾ ಕಂಪನಿ', ಶ್ರೀ ಗುರು ತೋಂಟದಾರ್ಯ ನಾಟ್ಯ ಸಂಘ, ಮಂಡಲಗೇರಿ. ಶ್ರೀ ಗುರು ಕುಮಾರೇಶ್ವರ ನಾಟ್ಯ ಸಂಘ ಹಾನಗಲ್ಲ, ಮೊದಲಾದ ವೃತ್ತಿ ನಿರತ ನಾಟಕ ಮಂಡಳಿಗಳಲ್ಲಿ ಮೂರು ದಶಕಗಳಿಂದ ವೈವಿಧ್ಯಮಯ ಪಾತ್ರಗಳನ್ನು ಮಾಡಿದ ಸಾಧಕರಾಗಿದ್ದಾರೆ.

**ರಾಚಯ್ಯಸ್ವಾಮಿ ಬೆಳಧಡಿ :** ವೃತ್ತಿರಂಗಭೂಮಿಯ ಕಲಾವಿದರಾಗಿ ಕಲೆಗಾಗಿ ತಮ್ಮ ಬದುಕನ್ನು ಅರ್ಪಿಸಿಕೊಂಡವರು. ಕೊಟ್ಟೂರು ಬಸಪ್ಪನವರ ಕಂಪನಿ, ವೆಂಕಂಚಿ ಚೆಟ್ಟೆಪ್ಪನವರ ಕಂಪನಿ, ತಳಕಲ್ಲ ವೆಂಕಟರೆಡ್ಡೆಪ್ಪನವರ ಕಂಪನಿಗಳಲ್ಲಿ ನಟಿಸಿದ್ದಾರೆ. ಮಾರುತೇಶ ಮಾಂಡ್ರೆಯವರ 'ಮೋಳಿಗೆ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಮಾರಯ್ಯ' ನಾಟಕದ ಮಹದೇವ ಭೂಪಾಲನ ಪಾತ್ರ ಇವರಿಗೆ ಹೆಸರು ತಂದು ಕೊಟ್ಟಿತು.

**ಶಾಂತಾಬಾಯಿ ರಾಚಯ್ಯ ಸ್ವಾಮಿ ಬೆಳಧಡಿ :** 'ಚಿತ್ರಾಂಗದಾ, ಹೇಮರೆಡ್ಡಿ ಮಲ್ಲಮ್ಮ, ಹರಿಶ್ಚಂದ್ರ, ಲಂಕದಾಹನ, ನಾಟಕಗಳಲ್ಲಿನ ಸಹಜಾಭಿನಯ, ಹಾಡುಗಾರಿಕೆ ಮೋಡಿಯಿಂದ ಪ್ರಸಿದ್ಧ ಪಡೆದರು. ಗಾನಕೋಗಿಲೆ ಎಂದೇ ಮನೆ ಮಾತಾಗಿದ್ದ ಶಾಂತಾಬಾಯಿ ಗದಗಕರ್ ರವರು ರಾಚಯ್ಯಸ್ವಾಮಿ ಬೆಳಧಡಿಯವರ ಧರ್ಮಪತ್ನಿ. ಪತಿಯೊಂದಿಗೆ ರಂಗಭೂಮಿಯುಲ್ಲಿ ಜೊತೆಜೊತೆಯಾಗೇ ನಟಿಸಿ ಸತ್ವಯುತ ಕಲಾವಿದೆಯಾಗಿ ಬೆಳೆದವರು.

**ಪ್ಲೋರಿನಾಬಾಯಿ ಕೊಟ್ರಪ್ಪ ಲಕ್ಕುಂಡಿ :** ಹಾಸ್ಯ ಪಾತ್ರಗಳಿಂದಲೇ ವಿಶಿಷ್ಟ ಛಾಪು ಮೂಡಿಸಿ, ವೃತ್ತಿ ರಂಗಭೂಮಿಯಲ್ಲಿ ಮೆರೆದವರು. 'ಕೊರವಂಜಿ' ನಾಟಕದ ಕೊರವಂಜಿಯಾಗಿ ಶ್ರೇಷ್ಠ ಅಭಿನಯ ನೀಡಿದರು. 'ಬಂಜೆ ತೊಟ್ಟಿಲು' ಹೆಜ್ಜೆ ತಪ್ಪಿದ ಹೆಣ್ಣು, ದಸರಾ ನಾಟಕಗಳಲ್ಲಿನ ಅಭಿಯನದಿಂದ ಪ್ರೇಕ್ಷಕರನ್ನು ಮೋಡಿ ಮಾಡಿದರು.

**ಅನ್ನಪೂರ್ಣಾ ಬೆಳಧಡಿ :** ಬಾಲಕಲಾವಿದೆಯಾಗಿ ರಂಗ ಪ್ರವೇಶ ಮಾಡಿ ಜೀವ ತುಂಬುವ ಅಭಿನಯದಿಂದ ಪ್ರೇಕ್ಷಕರನ್ನು ರಂಜಿಸಿದರು. ಗದುಗಿನ ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ಸಂಗೀಂತಾಭ್ಯಾಸ ಮಾಡಿ, ಹಲವು ವೃತ್ತಿಹವ್ಯಾಸಿ ನಾಟಕ ಸಂಸ್ಥೆಗಳಲ್ಲಿ ಕಲಾ ಸೇವೆಗೈದರು. ಗದುಗಿನ ಫ. ಶಿ. ಭಾಂಡಗೆಯವರ ಕಂಪನಿ, ಶ್ರೀ ಗುರು ನಿರಪಾದೇಶ್ವರ ಕೃಪಾ ಪೋಷಿತ ನಾಟ್ಯಸಂಘ, ನ್ಯಾಮತಿಯ ಶ್ರೀ ಮಹೇಶ ನಾಟ್ಯ ಸಂಘ, ಮುಂತಾಗಿ ಹಲವಾರು ನಾಟಕ ಕಂಪನಿಗಳಲ್ಲಿ ವೈವಿಧ್ಯಮಯ ಪಾತ್ರಗಳಿಂದ ಹೆಸರಾದರು.

**ವೀರೇಶ್ವರ ಹಿರೇಮಠ :** ಹೆಚ್. ಎನ್. ಹೂಗಾರ ಹಾಗೂ ಕೆ. ಬ್ರಹ್ಮಾವರೊಡನೆ ಸೇರಿ ಕಟ್ಟಿದ 'ಶ್ರೀ ವೀರೇಶ್ವರ ನಾಟ್ಯ ಸಂಘ'ದ ಯಶಸ್ವಿ ಪ್ರದರ್ಶನದ 'ತಾಳ ತಪ್ಪಿದ ಬಾಳು' ನಾಟಕವು 'ಪಟ್ಟಣಕ್ಕೆ ಬಂದ ಪತ್ನಿಯರು' ಎಂಬ ಚಲನ ಚಿತ್ರವಾಗಿ ಯಶಸ್ಸು ಕಂಡಿತು.

**ಏರಾಸಿ ಭರಮಪ್ಪ :** ಡಂಬಳ ಗ್ರಾಮದ ನಾಟಕ ಪ್ರಿಯರಾಗಿ 'ಶ್ರೀ ವಾಣಿ ವಿಲಾಸ ಸಂಗೀತ ನಾಟಕ ಮಂಡಳಿ, ಗದಗ ಸ್ಥಾಪಿಸಿ ಬಸವರಾಜ ಮನಸೂರ, ಮಲ್ಲಿಕಾರ್ಜುನ ಮನಸೂರ, ಹಂದಿಗನೂರ ಸಿದ್ರಾಮಪ್ಪ, ರಂತಹ ನಟರನ್ನು ಗೋಹರ ಜಾನ್ ಕರ್ನಾಟಕಿ, ಅಮೀರಜಾನ ಕರ್ನಾಟಕಿ, ಮುನ್ನುಜಾನ್ ಬೀಳಗಿಯಂತಹ ನಟಿಯರಿಗೆ ತರಬೇತಿ ನೀಡಿ ಪ್ರಸಿದ್ಧಿಗೆ ತಂದವರು.

**ಲಕ್ಷ್ಮೀಬಾಯಿ ಶಿರಹಟ್ಟಿಯ :** ವೃತ್ತಿ ನಾಟಕ ಕಲಾವಿದ ಸಿದ್ಧರಾಮಪ್ಪ ಪುಟ್ಟಪ್ಪ ಅಕ್ಕಿಯವರ 'ಶ್ರೀ ಫಕ್ಕೀರೇಶ್ವರ ನಾಟಕ ಕಂಪನಿ'ಯ 'ಬಡತನದ ಭೂತ', ಸೌಭಾಗ್ಯ ಲಕ್ಷ್ಮೀ, ದೇವರದುಡ್ಡು, ಸಿಂಧೂರ ಲಕ್ಷ್ಮಣ, ಅಮರಗಾಂಧೀಜಿ, ನಾಟಕಗಳಲ್ಲಿ ನಟಿಯಾಗಿ ಪ್ರಸಿದ್ಧಿಯಾದವರು.

**ಗುರುಬಸಪ್ಪ ರಾಚಪ್ಪ ಶಿರೂರ :** ವೃತ್ತಿ ರಂಗ ಕಲಾವಿದರಾಗಿ ಪೌರಾಣಿಕ ನಾಟಕಗಳಲ್ಲಿ, ದೊಡ್ಡಾಟಗಳಲ್ಲಿ ಧರ್ಮರಾಯ, ಭೀಷ್ಮ ಪಾತ್ರಗಳನ್ನು ಹಾಗೂ ಇತರ ನಾಟಕಗಳಲ್ಲಿ ಹಾಸ್ಯ ಪಾತ್ರಗಳನ್ನು ಮಾಡಿ ಹೆಸರಾದರು.

**ಶ್ರೀಮತಿ ಭಾರತಿ ಶಿರಹಟ್ಟಿ :** ಆರನೇ ವರ್ಷದಲ್ಲಿ ಬಾಲ ಕಲಾವಿದೆ ಯಾಗಿ ರಂಗಭೂಮಿಗೆ ಪಾದಾರ್ಪಣೆ, ಮಾಡಿದರು. ಶ್ರೀ ಸಂಗಮೇಶ್ವರ ನಾಟ್ಯಸಂಘ, ಗುಡಿಗೇರಿ, 'ಹಾನಗಲ್ಲ ಕುಮಾರಸ್ವಾಮಿ ನಾಟ್ಯಸಂಘ, ಚಿತ್ತರಗಿ. ಏಣಗಿ ಬಾಳಪ್ಪನವರ ಕಂಪನಿಗಳಲ್ಲಿ ಹಲವು ಬಗೆ ಪಾತ್ರ ಮಾಡಿದರು. 'ಶ್ರೀ ರಾಘವೇಂದ್ರ ಕೃಪಾಪೋಷಿತ ಸ್ತ್ರೀ ನಾಟಕ ಮಂಡಳಿಯನ್ನುಹುಟ್ಟುಹಾಕಿ. ಎಲ್ಲಾ ಪಾತ್ರಗಳನ್ನು ಸ್ತ್ರೀಯರಿಂದಲೇ ಮಾಡಿಸಿ ಪ್ರಶಂಸೆ ಪಡೆದವರು. 'ಶ್ರೀ ನಟರಾಜ ನಾಟ್ಯ ಸಂಘ ಹೊಳೆ ಹಡಗಲಿ' ಶ್ರೀ ಉಮಾಮಹೇಶ್ವರ ನಾಟ್ಯ ಸಂಘ, ಶಿರಹಟ್ಟಿ ನಂತರ 'ಶ್ರೀ ಪಂಚಾಕ್ಷರಿ ಗವಾಯಿಗಳ ವೃತ್ತಿ ಕಲಾವಿದರ ಸ್ತ್ರೀ ನಾಟ್ಯ ಮಂಡಳಿ, ಗದಗ ಸ್ಥಾಪಿಸಿ ನಾಟಕಗಳನ್ನು ಪ್ರದರ್ಶಿಸಿದರು. 'ಅಖಿಲ ಕರ್ನಾಟಕ ಶ್ರೀದೇವಿ ಮಹಿಳಾ ರಂಗಭೂಮಿ ಕಲಾವಿದೆಯರ ಸಂಸ್ಥೆ' ಯನ್ನು ಪ್ರಾರಂಭಿಸಿ ವಿವಿಧ ರಂಗಳಲ್ಲಿನ ಕಲಾವಿದೆಯರನ್ನು ಸಂಘಟಿಸಿದರು.

**ರೇಣುಕಾ ಉಮೇಶಯ್ಯ ಹಿರೇಮಠ :** ನಾಲ್ಕು ದಶಕಗಳ ಕಾಲ ವೃತ್ತಿ ರಂಗಭೂಮಿಯಲ್ಲಿ ಕಲಾ ಸೇವೆಗೈದ ಕಲಾವಿದೆ. ಸುಮಾರು ಇನ್ನೂರು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಅರಿಷಿಣ ಕುಂಕುಮ, ಸಂಪತ್ತಿಗೆ ಸವಾಲ್, ತಾಯಿ ಕರಳು, ಚಿನ್ನದ ಗೊಂಬೆ, ದೇವರಿಗೆ ನೆನಪಿಲ್ಲ. ಹೂವಿನ ಅಂಗಡಿ ನಾಟಕಗಳಲ್ಲಿನ ನಟನೆಗೆ ಜನಮನ್ನಣೆ ಪಡೆದರು.

**ಸುಶೀಲಮ್ಮ ನೀಲಕಂಠಯ್ಯ ಹಿರೇಮಠ :** 'ಜಗಜ್ಯೋತಿ ಬಸವೇಶ್ವರ ನಾಟ್ಯ ಸಂಘ ಧಾರವಾಡ ಕಂಪನಿಯ ಮೂಲಕ ರಾಗಿ ಐವತ್ತು ವರ್ಷಗಳ ಸೇವೆ ಸಲ್ಲಿಸಿದವರು. ನೀನೂ ಸಾಹುಕಾರನಾಗು, ಸಾಹುಕಾರನು, ಲಮಾಣಿ ಹುಡುಗಿ, ಕೈಲಾಗದ ಗಂಡ, ರಾಜ ಸತ್ಯಹರಿಶ್ಚಂದ್ರ, ಕೊರವಂಜಿ ಮುಂತಾದ ನಾಟಕಗಳಲ್ಲಿ ಅಭಿನಯಿಸಿ ಪ್ರಸಿದ್ಧರಾಗಿದ್ದಾರೆ.

**ಶಾರದಮ್ಮ ಹೊಂಬಳ :** ನವಲಗುಂದ ನಾಗಲಿಂಗ, ಇಟಗಿ ಭೀಮಮ್ಮ, ಹಸಿರು ಬಳೆ, ರತ್ನ ಮಾಂಗಲ್ಯ ಮುಂತಾಗಿ ಹಲವಾರು ನಾಟಕದಲ್ಲಿ ವೈವಿದ್ಯಮಯ ಪಾತ್ರಗಳಲ್ಲಿ ಮಿಂಚಿದ್ದಾರೆ. ನೂರಾರು ನಾಟಕಗಳಲ್ಲಿ ಅಭಿನಯಿಸುತ್ತಾ ಐವತ್ತು ವರ್ಷಗಳ ರಂಗಭೂಮಿ ಕಲಾಸೇವೆಗೈದಿರುವ ಪ್ರತಿಭಾ ಸಂಪನ್ನೆಯಾಗಿದ್ದಾರೆ.

**ಸಾವಿತ್ರಿ ದೇವರಾಜ ಬಳ್ಳಾರಿ :** ವೃತ್ತಿ ರಂಗಭೂಮಿ ಕಲಾವಿದರಾಗಿ ನಲವತ್ತೈದು ವರ್ಷಗಳ ಸೇವೆ ಸಲ್ಲಿಸಿ, ತಮ್ಮದೇ ಆದ 'ಶಾರದಾ ನಾಟ್ಯ ಸಂಘ ಅದ್ವಾನಿ' ಸ್ಥಾಪಿಸಿ ಮುನ್ನೂರಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ರಕ್ತರಾತ್ರಿ, ಕುರುಕ್ಷೇತ್ರ, ವೀರ ಅಭಿಮನ್ಯು, ವೀರರಾಣಿ ಕಿತ್ತೂರು ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ಅಣ್ಣ –ತಂಗಿ, ಆದರ್ಶ ಪ್ರೇಮ ಮುಂತಾಗಿ ಪೌರಾಣಿಕ, ಐತಿಹಾಸಿಕ, ಸಾಮಾಜಿಕ ನಾಟಕಗಳಲ್ಲಿ ಅಭಿನಯಿಸಿದ್ದಾರೆ.

**ಉಮಾದೇವಿ ವೀರಯ್ಯ ಹಿರೇಮಠ :** ಅಡವಿ ಸಿದ್ದೇಶ್ವರ ನಾಟ್ಯಸಂಘ ಸ್ಥಾಪಿಸಿ, ರಂಗಭೂಮಿಯಲ್ಲಿ ಐವತ್ತೈದು ವರ್ಷಗಳ ರಂಗಸೇವೆಗೈದಿದ್ದಾರೆ. ಬೇಡರ ಕಣ್ಣಪ್ಪ, ಮೋಹಿನಿ ಬಸ್ಮಾಸುರ, ಲವಕುಶ, ಸತ್ಯಹರಿಶ್ಚಂದ್ರ, ಮಗಳಾಗಿ ಬಂದಳು ಸೊಸೆಯಾಗಿ ನಿಂತಳು, ನಾಟಕಗಳಲ್ಲಿ ಪ್ರಭುದ್ದ ಅಭಿನಯ ನೀಡಿದ್ದಾರೆ.

**ಅನ್ನಪೂರ್ಣ ಹೊನಗುಡಿ :** ಚಿನ್ನದ ಗೊಂಬೆ, ರತ್ನ ಮಾಂಗಲ್ಯ, ಚನ್ನಪ್ಪಚನ್ನಗೌಡ, ಗೌರಿಗೆದ್ದಳು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಮೂವತ್ತು ವರ್ಷಗಳ ರಂಗಭೂಮಿ ಸೇವೆಯಲ್ಲಿ ಇನ್ನೂರಕ್ಕೂ ಹೆಚ್ಚು ನಾಟಕಗಳಲ್ಲಿ ನಟಿಸಿದ್ದಾರೆ.

**ಕುಸುಮ ರವಿ ಹಿರೇಮಠ :** ಆಶಲತಾ ನಾಟಕದ ವೈಶಾಲಿ ಹಾಸ್ಯಪಾತ್ರದಿಂದ ಪ್ರಶಂಸಿತರಾಗಿ, ಎರಡು ದಶಕಗಳ ರಂಗ ಸೇವೆಯಲ್ಲಿ ಇನ್ನೂರಕ್ಕು ಹೆಚ್ಚು ನಾಟಕಗಳಲ್ಲಿ ನಟಿಸಿದ್ದಾರೆ.

**ವಿರುಪಾಕ್ಷಯ್ಯ ಬೇಲೇರಿ :** 'ಶುಭೋದಯ ನಾಟ್ಯ ಸಂಘ ಗದಗ ' ಸ್ಥಾಪಿಸಿ, ಕೆಲವು ವರ್ಷಗಳ ಕಾಲ ರಾಜ್ಯದ ಹಲವೆಡೆಗಳಲ್ಲಿ ನಾಟಕಗಳನ್ನು ಪ್ರದರ್ಶಿಸಿದ್ದಾರೆ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

## ಹವ್ಯಾಸಿ ರಂಗಭೂಮಿ ಕಲಾವಿದರು

**ಗದುಗಿನ ಬಾಬಣ್ಣ ಮುಲ್ಲಾ :** ಶ್ರೀ ವೀರನಾರಾಯಣ ಕೃಪಾಪೋಷಿತ ನಾಟಕ ಮಂಡಳಿ ಕಟ್ಟಿ ತಾವೇ ರಚಿಸಿದ 'ಬಾಯಿಗೆ ಬಡೆದ ಬೀಗ' ಹಾಗೂ 'ಯಮನ ಸೋಲು' ನಾಟಕಗಳನ್ನಾಡಿದ್ದಾರೆ.

**ಕೆ. ವಿ. ಬಾಳಿಕಾಯಿ ಮಾಸ್ತರ :** ಸಂಸ್ಕೃತ ಶಿಕ್ಷಕರಾಗಿ, ಪ್ರವಚನಕರರಾಗಿ ಜನಪ್ರೀಯತೆ ಪಡೆದವರಾಗಿ ಆರ್. ಡಿ. ಕಮತರ 'ಟಿಪ್ಪು ಸುಲ್ತಾನ' ನಾಟಕ ಪ್ರದರ್ಶಿಸಿದರು. ಬಿ. ಜಿ. ಅಣ್ಣಿಗೇರಿ ಗುರುಗಳ ನಿರ್ದೇಶನದಲ್ಲಿ 'ವಿಜಯನಗರ ಸಾಮ್ರಾಜ್ಯ' ದ ಖಳನಾಯಕರಾಗಿ ಅಮೋಘ ಅಭಿನಯ ನೀಡಿದ್ದರು.

**ಎಲ್. ಡಿ. ಪಾಟೀಲ :** ಗದುಗಿನ 'ಕುಮಾರ ವ್ಯಾಸ ಸಂಘ'ದ ಆಶ್ರಯದಲ್ಲಿ ಟಿ. ಪಿ. ಕೈಲಾಸಂ ಅವರ ' ಬಂಡ್ವಾಳಿಲ್ಲದ ಬಡಾಯಿ' ರಂ. ಶ್ರೀ ಮುಗಳಿಯವರ 'ಎತ್ತಿದ ಕೈ' ಬಿ. ಎಂ. ಜಹಗೀರದಾರರು ಬರೆದ 'ಕೀಚಕವಧಾ' ಮೋದಲಾದ ನಾಟಕಗಳನ್ನು ಪ್ರದರ್ಶಿಸಿ ಹವ್ಯಾಸಿಗಳಲ್ಲಿ ಹೊಸ ಸಂಚಲನೆಯನ್ನುಂಟು ಮಾಡಿದವರು.

**ಜಯತೀರ್ಥ ಜೋಷಿ :** ಗದುಗಿನಲ್ಲಿ ನಾಟಕ ನಿರ್ಮಾಣದ ಕನಸಿನ ನಿರ್ದೇಶಕ ಜೋಷಿಯವರು ಕೆಲಕಾಲ ಹವ್ಯಾಸಿ ರಂಗಭೂಮಿಯಲ್ಲಿ ನಿರತರಾಗಿ, ರಾಷ್ಟ್ರೀಯ ನಾಟಕ ಶಾಲೆ ಸೇರಿ ಪದವಿ ಪಡೆದವರು ಇಂಗ್ಲಂಡಿನ ಲ್ಯಾಂಕಸ್ಟರ್ ವಿಶ್ವವಿದ್ಯಾಲಯದಿಂದ ನಾಟ್ಯಶಾಸ್ತ್ರದಲ್ಲಿ ಎಂ. ಎ. ಪಡೆದು, ಮೈಸೂರಿನ, ನಾಟಕರೆಪರ್ಟರಿ, ಕರ್ನಾಟಕ ರಂಗಾಯಣದಲ್ಲಿ ಆಡಳಿತ ಅಧಿಕಾರಿ ಮತ್ತು ಉಪನಿರ್ದೇಶಕರಾಗಿದ್ದವರು. 'ತಲೆದಂಡ' ನಾಟಕ ಪ್ರದರ್ಶನಕ್ಕೆ ಗದುಗಿನ ಶ್ರೀ ವೀರನಾರಾಯಣನ ದೇವಸ್ಥಾನದ ಸಮೀಪದ ಕೊನೇರಿ ಹೊಂಡವನ್ನು ಆಯ್ಕೆ ಮಾಡಿ, ನಾಟಕವನ್ನು ಪ್ರಸ್ತುತಿ ಮಾಡಿ ನಾಟಕಾಸಕ್ತರ ಪ್ರಶಂಸೆಗೆ ಪಾತ್ರರಾದರು.

**ಆರ್. ಎನ್. ಕುಲಕರ್ಣಿ :** ರಾಗ, ನಾದ, ಕಲೆ (ಆರ್.ಅನ್.ಕೆ.') ಮಿತ್ರ ಮಂಡಳಿಯನ್ನು ಹುಟ್ಟುಹಾಕಿ, ನೂರಾರು ನಾಟಕಗಳನ್ನು ಪ್ರದರ್ಶಿಸಿ, ಪ್ರಸಿದ್ಧರಾದವರು. ಹೆಂಡತಿ ನಿನಗೆ ನಮೋ ನಮೋ, ಸತ್ಯವಂತರಿಗಿದು ಕಾಲವಲ್ಲ 'ನಿನ್ಯಾಕೋ ನಿನ್ನ ಹಂಗ್ಯಾಕೋ' ಆದೆದ್ದೆಲ್ಲ ಒಳಿತೇ ಆಯಿತು' ಅವರ ಪ್ರಮುಖ ನಾಟಕಗಳು.

**ಪ್ರಕಾಶ ಗರುಡ :** ಗರುಡ ನಾಟ್ಯಸಂಘದಲ್ಲಿ ಓಥಲೋ, ಹ್ಯಾಮ್ಲೆಟ್, ಕ್ರಾಂತಿಪುರುಷ ಬಸವಣ್ಣ ನಾಟಕಗಳನ್ನು ನಿರ್ದೇಶಿಸಿ ಯಶಸ್ವಿಗೊಳಿಸಿದರು. ಮಕ್ಕಳಿಂದ 'ಪುಷ್ಪರಾಣಿ' ನಾಟಕವನ್ನು ಆಡಿಸಿ ಜನರ ಗಮನ ಸೆಳೆಯಿತು.

**ಬಿ.ಎಸ್. ಗೊರವರ :** ನಾಟಕಗಳನ್ನು ಬರೆದು, ಪ್ರದರ್ಶಿಸಿ, ಅಭಿನಯ, ನಿರ್ದೇಶನಗಳಲ್ಲಿ ಹೆಸರು ಮಾಡಿದವರು. 'ಬಸವ ಕಲಾ ತಂಡ' ವನ್ನು ಸಂಘಟಿಸಿ ಹಲವೆಡೆಗಳಲ್ಲಿ ನಾಟಕಗಳನ್ನು ಆಡಿದ್ದಾರೆ. ಗದುಗಿನ ಶ್ರೀ ಸಿದ್ಧಲಿಂಗೇಶ್ವರ ಕಲ್ಯಾಣ ಕೇಂದ್ರದಲ್ಲಿ ಪ್ರದಶೀತವಾದ 'ಕಳಬೇಡ' ನಾಟಕ ಜನಮನ್ನಣೆ ಪಡೆಯಿತು.

**ಫ. ಶೀ. ಭಾಂಡಗೆ :** ಸರಳ, ಸಹಜಾಭಿನಯದ ಪ್ರದರ್ಶನದ ಮೂಲಕ ರಂಗಭೂಮಿಗೊಂದು ಮಾದರಿಯನ್ನು ಹಾಕಿಕೊಟ್ಟರು. ಹೊಸ ಕಾನೂನು, ದೇವದರ್ಶನ, ಜೀವಂತಜನ, ಕನ್ಯಾಬಲಿ, ದಿಂಗಾಲೇಶ್ವರ ಮೊದಲಾದ ನಾಟಕಗಳನ್ನು ರಚಿಸಿ, ಅಭಿನಯಿಸಿ, ನಿರ್ದೇಶಿಸಿ ಹವ್ಯಾಸಿ ರಂಗಭೂಮಿಗೆ ನೆರವಾದರು.

**ಶಿವಯ್ಯ ವೀರಭದ್ರಯ್ಯ ಶಿರೋಳ :** ಶಿಕ್ಷಕ ವೃತ್ತಿಯೊಂದಿಗೆ ನಾಟಕ ರಚನೆ ಮತ್ತು ಅಭಿನಯದಲ್ಲಿ ಆಸಕ್ತಿ ಇದ್ದವರು. ತಾವೇ ಬರೆದ 'ಕೆಂಪಿ ಮಾಡಿದ ಕಿತಾಪತಿ' ಸಂಡೆಸ್ಪೇಷಲ್, ಎಂಥಾಕಾಲ ಬಂತರೀ ಇದು, ತಪ್ಪು ನನ್ನದಲ್ಲ ಮೊದಲಾದ ನಾಟಕಗಳನ್ನು ಪ್ರದರ್ಶಿಸಿದ್ದಾರೆ.

**ಪ್ರಮೋದ ಶಿಗ್ಗಾಂವ :** ಗದುಗಿನ ತೋಂಟದಾರ್ಯ ಕಲಾರಂಗ ಪ್ರದರ್ಶಿಸಿದ 'ಸೆಜುವಾನ್ ನಗರದ ಸಾಧ್ವಿ' ನಾಟಕವನ್ನು ನಿರ್ದೇಶಿಸಿ ಗದುಗಿನ ಶ್ರೀ ಸಿದ್ಧಲಿಂಗೇಶ್ವರ ಕಲ್ಯಾಣ ಕೇಂದ್ರದಲ್ಲಿ ಪ್ರದಶೀಸಿ ಹವ್ಯಾಸಿ ರಂಗಾಸ್ತಕರಲ್ಲಿ ಹೊಸ ಸ್ಫೂರ್ತಿ ನೀಡಿತು.

**ಬಸವರಾಜ ನೆಲಜೇರಿ :** ಕಲಾ ಶಿಕ್ಷಕರಾಗಿದ್ದು. ಬಿ. ಶಿವರಾಂ ರೊಂದಿಗೆ, 'ಸಾಹಿತ್ಯ ಕಲಾ ಸಂಸ್ಕೃತಿ ವಿಕಾಸ ಪರಿಷತ್ತು ಹುಟ್ಟು ಹಾಕಿ 'ಭೋಯತ್ಪಾದನೆ ನಂತರ' 'ಸಾಕ್ರಟಿಸ್' ನಾಟಕಗಳನ್ನು ಯಶಸಸ್ವಿಯಾಗಿ ಪ್ರದರ್ಶಿಸಿ ಹವ್ಯಾಸಿ ರಂಗ ಚೈತನ್ಯ ಹೆಚ್ಚಿಸಿದ್ದಾರೆ. ಮಕ್ಕಳಿಂದ 'ಅದಲು ಬದಲು ನಾಟಕ ಪ್ರದರ್ಶಿಸಿ ಸಾರ್ವಜನಕರಿಂದ ಮೆಚ್ಚುಗೆ ಪಡೆದಿದ್ದಾರೆ.

**ರಾಜಣ್ಣ ಹೂಗಾರ :** ವಿಜಯಶ್ರೀ ಹವ್ಯಾಸಿ ನಾಟಕ ಸಂಘ' ವನ್ನು ರಚಿಸಿ, ತಾಳಿಕೋಟೆ ಬಲಿದಾನದ ಕಥೆ, ವೀರನಾಯಕ ಮುಕ್ಕಲ್ಲು ತಿಮ್ಮಯ್ಯ ಮೊದಲಾಗಿ ಹಲವು ನಾಟಕಗಳನ್ನು ಪ್ರದರ್ಶಿಸಿ ಪ್ರಶಸ್ತಿ ಪಡೆದಿದ್ದಾರೆ.

**ಫಣೇಂದ್ರಾಚಾರ್ಯ ದ್ಯಾಮೇನಹಳ್ಳಿ :** 'ರಾಘವೇಂದ್ರ ಯುವ ಸೇವಾ ಬಳಗ' ವನ್ನು ಆರಂಭಿಸಿ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಸೇರಿಸಿ ಭಕ್ತಿ ಪ್ರಧಾನ ಸಂಗೀತ ರೂಪಕಗಳನ್ನು ಪ್ರದರ್ಶಿಸಿದ್ದಾರೆ. ದಶಾವತಾರ, ದೇವಬಂದಾ ನಮ್ಮ ಸ್ವಾಮಿ ಬಂದಾನೋ, ಧರೆಗಿಳಿದ ಧರಣೀಧರ ಮೊದಲಾದ ಗೀತರೂಪಕಗಳನ್ನು ರಚಿಸಿ, ನಿರ್ದೇಶಿಸಿ, ಪ್ರದರ್ಶಿಸಿದ್ದಾರೆ.

**ರವೀಂದ್ರ ಕೊಪ್ಪರ್ ರಜನಿ :** ರಂಗ ನಿರಂತರ ಆರಂಭಿಸಿ, ರಂಗ ಚಟುವಟಿಕೆಯಲ್ಲಿ ತೊಡಗಿದ್ದು, ಬೆಂಗಳೂರಿನ 'ಗೆಜ್ಜೆ ಹೆಜ್ಜೆ' ರಂಗತಂಡದಿಂದ ಗ್ರಾಮೀಣ ನಲೆಗಳಲ್ಲಿನ ಜ್ವಲಂತ ಸಮಸ್ಯೆಗಳನ್ನಾಧರಿಸಿ ನಾಟಕಗಳನ್ನು ಪ್ರದರ್ಶಿಸಿದ್ದಾರೆ. ಹುಯಿಲಗೋಳ ನಾರಾಯಣರಾವ ಪ್ರತಿಷ್ಠಾನದ ವೇದಿಕೆಯ ಅಡಿಯಲ್ಲಿ ಗದಗ ಮತ್ತು ಬೆಂಗಳೂರಿನಲ್ಲಿ 'ಪತಿತೋದ್ಧಾರ' ನಾಟಕದ ದೃಶ್ಯಾವಳಿಗಳನ್ನು ಪ್ರಸ್ತುತಿ ಮಾಡಿದ್ದಾರೆ.

ಹೀಗೆ ಪಂ. ಪುಟ್ಟರಾಜ ಗವಾಯಿಗಳವರಂತಹ ನಾಟಕಕಾರರನ್ನು, ಗಾಯತ್ರಿ ಬಳ್ಳಾರಿ, ಪ್ರೇಮ ಪಟ್ಟಣಶೆಟ್ಟಿ, ಸಾವಿತ್ರಿ ಬಳ್ಳಾರಿ, ವಜೀರವ್ವ ಹೊಂಬಳ, ಕುಸುಮಾ ಬಾಗಲಕೋಟೆ, ಶಾರದಾ ಹೊಂಬಳ, ಲಕ್ಷ್ಮಣರಾವ ಅಸುಂಡಿ, ವೀರಭದ್ರಪ್ಪನವರ ಹೂವಿನಹಡಗಲಿ ಯಂತಹ ನೂರಾರು ನಟ–ನಟಿ–ನಿರ್ದೇಶಕರನ್ನು ರಂಗ ಭೂಮಿಗೆ ನೀಡಿದ ವಿಶಿಷ್ಠ ಚಾರಿತ್ರಿಕ ಹಿನ್ನಲೆಯ ಸಿರಿವಂತ ಸಂಸ್ಕೃತಿ ಪರಂಪರೆಗಳ ಗದಗ, ಸಂಗೀತದ ತವರಾಗಿ, ಶಿಲ್ಪಕಲೆಗೆ ಬೀಡಾಗಿ, ಶೈಕ್ಷಣಿಕ ಕೇಂದ್ರವಾಗಿ, ಸಾಹಿತ್ಯ ಧರ್ಮ ಸಂಸ್ಕೃತಿಗಳ ನೆಲೆವೀಡಾಗಿ, ರಂಗಕೃಷಿಗೆ ಫಲವತ್ತಾದ ನೆಲೆಯಾಗಿ ಕರ್ನಾಟಕದ ಮಧ್ಯದಲ್ಲಿರುವ ಬಯಲು ಸೀಮೆಯ ಗಂಡುಮೆಟ್ಟಿನ ನಾಡಾಗಿ ಲಲಿತ ಕಲಾಸ್ತಕರನ್ನು ಆಕರ್ಷಿಸುತ್ತಿದೆ.

■■

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದಲ್ಲಿ ಘರಾಣೆಗಳ ಪ್ರಾಮುಖ್ಯತೆ ಹಾಗೂ ಅವುಗಳ ಅಚ್ಚುಕಟ್ಟಾದ ಪ್ರಸ್ತುತತೆ

✍ **ಡಾ. ವಿಜಯಕುಮಾರ ಪಾಟೀಲ,** ಸಂಶೋಧನಾ ವಿದ್ಯಾರ್ಥಿ, ಸಂಗೀತ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

✍ **ಡಾ. ನಂದಾ ಎಂ ಪಾಟೀಲ,** ಸಹಪ್ರಾಧ್ಯಾಪಕರು ಸಂಗೀತ ಮತ್ತು ಲಲಿತ ಕಲಾ ಮಹಾವಿದ್ಯಾಲಯ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

## ಪೀಠಿಕೆ

"ಘರಾನೆಗಳ ಪ್ರಸ್ತುತತೆಯಲ್ಲಿ ಹೇಳುವುದಾದರೆ, ಘರಾನೆಗಳು ಇಂತಹದೇ ಕಾಲದಲ್ಲಿ ಬದಲಾವಣೆ ಆಗುತ್ತಿವೆ ಎಂದು ಹೇಳು ಸಾಧ್ಯವಿಲ್ಲ, ಆದರೆ ಬದಲಾವಣೆಯನ್ನು ಸಹ ಗಮನಿಸಬಹುದು. ಹಾಗಾದರೆ ಘರಾನೆಗಳು ಪ್ರಸ್ತುತತೆಯಲ್ಲಿ ಬದಲಾವಣೆ ಹೊಂದುತ್ತಿರುವುದು ಯಲ್ಲಿ? ಹೇಗೆ? ಏಕೆ? ಎಂದು ಗಮನ ಹರಿಸುವುದು ಮುಖ್ಯವಾದ ಸಂಗತಿ. ಜೊತೆಗೆ ಘರಾನೆಗಳ ಅಚ್ಚುಕಟ್ಟಾದ ಪ್ರಸ್ತುತತೆಯನ್ನು ಹೇಗೆ ಕಾಪಾಡಿಕೊಳ್ಳುವುದು ಎಂಬುದು ವಿಚಾರಿಸಬಹುದಾದ ಸಂಗತಿ.

ಬದಲಾವಣೆ ಇದೊಂದು ಸಹಜವಾದ ಕಾರ್ಯ. ಕಾಲಗಳ ಘಟ್ಟಗಳ ಪ್ರಭಾವದ ಮೇಲೆ ಅಲ್ಲಿ ಬದಲಾವಣೆಗಳ ಮೇಲೆ ಸಂಗೀತ ಮಾರ್ಪಾಟಾಗುತ್ತದೆ. ಮೊದಲಿನ ಕಾಲದಲ್ಲಿ ಕಲಾವಿದರಿಗೆ ಯಾವ ರೀತಿಯ ಮಾಧ್ಯಮಗಳ ಪ್ರಭಾವಗಳೂ ಇರಲಿಲ್ಲ. ಆಗಿನ ಕಾಲದಲ್ಲಿ ಇರುವುದು ಒಂದೇ ಕಾರ್ಯಕ್ರಮಗಳಲ್ಲಿ ನೇರವಾಗಿ ಸಂಗೀತ ಕೇಳುವುದು. ಆಗಿನ ಕಾಲದಲ್ಲಿ ಕಾರ್ಯಕ್ರಮಗಳು ಸಹ ಕಡಿಮೆ ಆಗುತ್ತಿದ್ದವು. ಮತ್ತು ಸಂಗೀತ ಕೇಳಲು ಈಗಿನ ಹಾಗೆ ಯಾವ ಸಿ.ಡಿ., ಟೆಲಿವಿಜನ್, ಧ್ವನಿಸುರುಳಿಗಳು, ಇಂಟರನೆಟ್‌ಗಳ ಹಾಗೆ ಆಧುನಿಕ ವ್ಯವಸ್ಥೆ ಇರಲಿಲ್ಲ. ಕಾರಣ ಸಂಗೀತಗಾರರಿಗೆ ಬೇರೆ ಘರಾಣೆಗಳ ಶೈಲಿಯ ಪ್ರಭಾವ ಆಗುವ ಸಾಧ್ಯತೆಗಳೂ ಇರಲಿಲ್ಲ, ಬೇರೆ ಘರಾಣೆಗಳ ಶೈಲಿಯ ಪ್ರಭಾವ ಆದರೂ ಬಹಳ ವಿರಳ. ಹೀಗಾಗಿ ಗುರಗಳು ಕಲಿಸಿರುವುದನ್ನೇ ತಮ್ಮ ಸ್ವಂತಿಕೆಯೊಂದಿಗೆ ಹಾಡುತ್ತಿದ್ದರು.

ಈ ಆಧುನಿಕ ಯುಗದಲ್ಲಿ ಹಾಗಿಲ್ಲ. ಮಾಧ್ಯಮಗಳು ಬೆಳೆದಿವೆ. ಆಲಿಸಲು ಅನುಸರಿಸಲು ಹಲವಾರು ವಿಧಗಳ ಮಾಧ್ಯಮಗಳು ತತ್‌ಕ್ಷಣದಲ್ಲಿ ಲಭ್ಯವಿವೆ. ಈಗ ಸಂಗೀತ ಕಲಿಯಲು ಬಯಸುವವರು ಹಲವಾರು ಸಿ.ಡಿ., ಇಂಟರನೆಟ್ ಹಾಗೂ ಧ್ವನಿಸುರುಳಿಗಳ ಮಾಧ್ಯಮದಿಂದ ಸಂಗೀತ ಕೇಳಿ ಇವರಲ್ಲಿಯೇ ಇದೇ ಘರಾಣೆಯ ಸಂಗೀತ ಕಲಿಯಬೇಕು ಎಂದು ಬಯಸುವುದು ಸಹಜವಾದದ್ದು. ಇನ್ನು ಕೆಲವರು ತಮಗೆ ಸೇರಿರುವ ಹಾಗೂ ಸೇರುವ ಗಾಯನವನ್ನು ತಮ್ಮ ಗಾಯನದಲ್ಲಿ ಸೇರಿಸಿಕೊಳ್ಳುತ್ತಾರೆ. ಇಲ್ಲವೇ ಅವರಿಗೆ ಸೇರಿರುವ ಗಾಯನ ಅವರಿಗೆ ತಿಳಿಯದಂತೆ ಅವರವರ ಗಾಯನದಲ್ಲಿ ಸೇರಿಹೊಗುತ್ತದೆ. ಹೀಗಿರುವಾಗ ಘರಾಣೆಗಳ ಶೈಲಿಗಳು ಮಿಶ್ರಿತವಾಗಿ ತಮ್ಮ ತಮ್ಮ ಮೂಲ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿವೆ. ಹಾಗಾದರೆ ಕಲಾವಿದರು ತಮ್ಮ ಗಾಯನದಲ್ಲಿ ಘರಾನೆಗಳ ಅಚ್ಚುಕಟ್ಟಾದ ಪ್ರಸ್ತುತತೆಯನ್ನು ಕಾಪಾಡಿಕೊಳ್ಳುವುದು ಹೇಗೆ?

ಘರಾನೆಗಳನ್ನು ಅಚ್ಚುಕಟ್ಟಾಗಿ ಪ್ರಸ್ತುತಪಡಿಸಲು ಹಾಗೂ ಅವು ಮಿಶ್ರಿತವಾಗದಂತೆ ಹಾಡಲು ಈ ಕೆಳಗೆ ವಿವರಿಸುವ ವಿಷಯದಬಗ್ಗೆ ಗಮನಹರಿಸುವುದು ಉಚಿತ.

ಈಗಿನ ಕಲಾವಿದರು ಅವರವರ ಧ್ವನಿಗಳಿಗೆ ತಕ್ಕಂತೆ ತಮ್ಮ ಗಾಯನ ಹಾಗೂ ಘರಾಣೆಗಳ ಶೈಲಿಯನ್ನ ರೂಢಿಸಿಕೊಳ್ಳುತ್ತಾರೆ. ಎಲ್ಲ ಸಂಗೀತ ದಿಗ್ಗಜರ ಗಾಯನ ಕೇಳಿ ಅವುಗಳಲ್ಲಿ ತಮಗೆ ಸರಿಹೊಂದುವ ಶೈಲಿಗಳನ್ನು ಆರಿಸಿಕೊಳ್ಳುತ್ತಾರೆ. ಇದು ಒಳ್ಳೆಯ ವಿಷಯವೇ ಆದರೆ ಇಲ್ಲಿ ಕೆಲವು ಅಂಶಗಳನ್ನು ಗಮನಿಸಬೇಕು...

- ಒಂದು ಘರಾನೆಯ ಗಾಯನದ ಶೈಲಿಯನ್ನು ತಮ್ಮ ಗಾಯನದಲ್ಲಿ ಸೇರಿಸಿಕೊಳ್ಳಲು ತಮ್ಮ ಘರಾನೆಯ ಗಾಯನದ ಶೈಲಿಯನ್ನು ಮೊದಲು ಬಹಳಷ್ಟು ಅಭ್ಯಾಸ ಮಾಡಿರಬೇಕು. ಕಾರಣ ಮೊದಲು ಒಂದು ಘರಾನೆಯ ಸಾಕಷ್ಟು ಅಭ್ಯಾಸ ಅಗತ್ಯವಾಗಿದೆ.
- ಒಂದು ಗಾಯನವನ್ನು ಕೇಳಿ ಒಳ್ಳೆಯದನ್ನು ಆರಿಸಿಕೊಂಡರೆ ಒಳ್ಳೆಯ ಸಂಗೀತವೇ ಮುಂದುವರಿಯುತ್ತದೆ. ಅದರ ಜೊತೆಗೆ ತಮ್ಮ ಘರಾನೆಯ ಶುದ್ಧತೆ ಹಾಗೂ ಮುಖ್ಯ ಅಂಶಗಳು ನಶಿಸಿ ಹೋಗದಂತೆ ಗಾಯಕರಲ್ಲಿ ಕಾಪಾಡಿಕೊಳ್ಳುವುದು ಉಚಿತ.
- ಇಂದಿನ ಯುವಕರು ತಮ್ಮ ರಿಯಾಜಿನ ಮೂಲಕ ಘರಾನೆಗಳ ಮೂಲ ಅಂಶಗಳನ್ನು ಗಟ್ಟಿಗೊಳಿಸಬೇಕು. ಅಂದರೆ ಘರಾನೆಗಳ ಶುಧ್ಧತೆ ಕಾಯ್ದುಕೊಳ್ಳುತ್ತವೆ.
- ನಂತರ ಘರಾನೆಗಳ ಆಳಕ್ಕೆ ಇಳಿದು ಸೂಕ್ಷ್ಮ ಅಂಶಗಳು ನಶಿಸದಂತೆ ಅಭ್ಯಾಸಿಸಬೇಕು. ಮತ್ತೆ ಕಾಲಕ್ಕೆ ತಕ್ಕಂತೆ ಸಂಗೀತದಲ್ಲಿ ಬದಲಾವಣೆ ಅನಿವಾರ್ಯ, ಇಲ್ಲಿ "ಅನಿವಾರ್ಯವನ್ನ ಒಪ್ಪಿಕೊಳ್ಳುವುದು ಅನಿವಾರ್ಯವೇ"
- ಶಿಶ್ಯಂದಿರು ಗುರುವಿನ ನಕಲು ಅಲ್ಲ ಮತ್ತು ಆಗಲೂಬಾರದು. ಸಂಗೀತ ಕ್ಷೇತ್ರದಲ್ಲಿ ಪ್ರತಿಯೊಬ್ಬರು ತಮ್ಮದೇ ಆದ ಸ್ವಂತ ಶೈಲಿಯನ್ನು ನಿರ್ಮಿಸಿಕೊಳ್ಳುವುದು ಅವಶ್ಯವಾಗಿದೆ.

ಒಂದೇ ಘರಾನೆಯಲ್ಲಿ ಹತ್ತು ಶಿಷ್ಯರಿದ್ದರೆ ಎಲ್ಲರೂ ಬೇರೆ ಬೇರೆ ರೀತಿ ಹಾಡುತ್ತಾರೆ. ಇದಕ್ಕೆ ಹಿಂದುಸ್ಥಾನಿ ಸಂಗೀತ ಸಹಕರಿಸುತ್ತದೆ. ಬೇರೆ ಶೈಲಿಯನ್ನು ಕೇಳಿ ಅದನ್ನೆ ನಾವು ಹಾಡುವುದಾದರೆ ಅದನ್ನು ನಮ್ಮ ಅಭ್ಯಾಸದ ಮೂಲಕ, ಅಭ್ಯಾಸದ ಬಲದ ಮೇಲೆ ನಮ್ಮ ಶೈಲಿಗೆ ರೂಪಾಂತರಿಸಿಕೊಳ್ಳಬೇಕು.

ಅಂದರೆ ಮಾತ್ರ ಘರಾನೆಗಳ ಶುಧ್ಧತೆಯ ಜೊತೆಗೆ ಸಂಗೀತಗಾರನ ಸ್ವಂತ ಶೈಲಿ ನಿರ್ಮಾಣವಾಗಲು ಸಾಧ್ಯ. ಆಧುನಿಕ ಕಾಲದಲ್ಲಿ ಸಂಗೀತ ಶ್ರೋತ್ರಗಳು ಪ್ರತಿಯೊಬ್ಬ ಕಲಾವಿದನಿಂದ ಹೊಸ ಗಾಯನ–ಸಂಗೀತವನ್ನು ಇಚ್ಚೆ ಪಡುತ್ತಾರೆ. ಶೋತ್ರಗಳು ಹೇಗೆ ಹೊಸದನ್ನು ಹುಡುಕುತ್ತಾರೊ, ಹಾಗೆಯೇ ಉತ್ತಮ ಕಲಾವಿದನು ಹೊಸದನ್ನೂ ಹುಡುಕುತ್ತಾನೆ. ಈ ಸಂದರ್ಭದಲ್ಲಿ ಹಲವಾರು ನವೀನತೆ ಬದಲಾವಣೆ ಆಗುವುದು ಸಹಜ. ಈಗಿನ ಕಾಲದಲ್ಲಿ ಕಲಾವಿದನೂ ಬದುಕಬೇಕಾಗಿದೆ. ಆದರೂ ಕಲಾವಿದರು ಘರಾಣೆಗಳ ಸ್ವಸ್ಥತೆ ಅದರಲ್ಲಿ ಗುಣಮಟ್ಟ ಇಟ್ಟುಕೊಂಡೇ ನಡೆಯಬೇಕು.

ಶಾಸ್ತ್ರೀಯ ಸಂಗೀತದಲ್ಲಿ ಕಲಾವಿದನಿಗೆ ಸ್ವಾತಂತ್ರವಿದೆ. ಆದರೆ, ಸ್ವಇಚ್ಛೆ ಇಲ್ಲ. ಶಾಸ್ತ್ರೀಯ ಸಂಗೀತದ ಸಿದ್ಧಾಂತಗಳನ್ನು ಮೀರಿ ಹೋಗುವುದು ಸ್ವಇಚ್ಛೆ ಎನಿಸುತ್ತದೆ. ಇದಕ್ಕೆ ಶಾಸ್ತ್ರೀಯ ಸಂಗೀತದಲ್ಲಿ ಅವಕಾಶವಿಲ್ಲ. ಗಾಯಕರು ಹೊಸದನ್ನು ಘರಾನೆಗೆ ಅಳವಡಿಸುವುದಾದರೆ ಶಾಸ್ತ್ರೀಯ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಸಂಗೀತದ ಚೌಕಟಿನಲ್ಲಿ ಒಳಗಡೆ ಅಳವಡಿಸಬೇಕು. ಇಂದಿನ ಕಾಲದಲ್ಲಿ ಸಂಗೀತದಲ್ಲಿ ಕಲಾವಿದ ತನ್ನ ಸ್ವಂತಿಕೆಯೊಂದಿಗೆ ಬಾಳಬೇಕು ಎಂದರೆ ಬದಲಾವಣೆ ಅನಿವಾರ್ಯವಾಗಿ ಬಿಟ್ಟಿದೆ. ಆದರೂ ಸಹ ಶಾಸ್ತ್ರೀಯ ಸಂಗೀತದ ಘರಾಣೆಗಳ ಶುದ್ಧತೆ ಕಾಪಾಡುವುದು ಅಷ್ಟೆ ಅವಶ್ಯವಾದ ಸಂಗತಿಯೂ ಆಗಿದೆ.

## ಉಪಸಂಹಾರ

### ಬದಲಾಗುತ್ತಿರುವ ಕಾಲ ಘಟ್ಟದಲ್ಲಿ ಘರಾನೆಗಳ ಪ್ರಸ್ತುತಪಡಿಸುವ ರೀತಿ

ಆಧುನಿಕ ಕಾಲದಲ್ಲಿ ಘರಾನೆಗಳನ್ನು ಪ್ರಸ್ತುತ ಪಡಿಸುವುದು ಸಂಗೀತಗಾರರಿಗೆ ಒಂದು ಜವಾಬ್ದಾರಿಯೇ ಸರಿ. ಕಾಲ ಮಾನ ಬದಲಾದಂತೆ ಶೋತ್ರಗಳ ಅಭಿರುಚಿ ಬದಲಾಗಿದೆ. ಹಿಂದಿನ ಶತಮಾನಗಳಲ್ಲಿ ಆಗಿ ಹೋಗಿರುವ ಎಲ್ಲಾ ಗಾಯಕರು, ಹಲವಾರು ಬಗೆಯ ಹೊಸ ಹೊಸ ಶಾಸ್ತ್ರೀಯ ಸಂಗೀತದ ಶೈಲಿಗಳನ್ನು ಶೋತ್ರಗಳಿಗೆ ಹಾಗೂ ಸಂಗೀತಲೋಕಕ್ಕೆ ಸಮರ್ಪಿಸಿದ್ದಾರೆ. ಜೊತೆಗೆ ಘರಾನೆಗಳ ಶೈಲಿಗಳನ್ನು ಸಹ ಸಾಧ್ಯವಾದಷ್ಟು ಶುದ್ಧವಾಗಿ ಕಾಪಾಡಿಕೊಂಡಿದ್ದಾರೆ. ಈ ಆಧುನಿಕ ಕಾಲದ ಸಂಗೀತಗಾರು ಹೊಸ ಹೊಸ ಶೈಲಿಗಳನ್ನು ರೂಢಿಸಿಕೊಳ್ಳುವುದರ ಜೊತೆಗೆ ಘರಾನೆಗಳ ಶುದ್ಧತೆಯನ್ನು ರಕ್ಷಿಸಿಕೊಳ್ಳಬೇಕಾಗಿದೆ. ಮುಂದಿನ ಪೀಳಿಗೆಗೆ ಘರಾನೆಗಳ ಶುದ್ಧ ಶೈಲಿಗಳನ್ನು ತಲುಪಿಸುವುದು ಈ ಶತಮಾನದ ಗಾಯಕರ ಜವಾಬ್ದಾರಿಯೂ ಸಹ. ಜೊತೆಗೆ ಹಿಂದಿನ ಗಾಯಕರು ಹಾಡಿರುವ ಶೈಲಿಗಳನ್ನು ಬಿಟ್ಟು ಹೊಸ ಶೈಲಿಗಳೊಂದಿಗೆ ತಮ್ಮನ್ನು ಗುರುತಿಸಿಕೊಳ್ಳಬೇಕಾಗಿರುವುದು ಅಷ್ಟೇ ಸತ್ಯ. ಈ ಸಾಧನೆಯಲ್ಲಿ ಕೆಲವು ನಿಯಮಗಳನ್ನು ಸಂಗೀತಗಾರರು ಸಂಗೀತದ ವಿದ್ಯಾರ್ಥಿಗಳು ಅಳವಡಿಸಿಕೊಂಡಲ್ಲಿ ಘರಾಣೆಗಳ ಶುದ್ಧ ಸಂಗೀತವನ್ನು ಮುಂದಿನ ಪೀಳಿಗೆಯೂ ಅಚ್ಚುಕಟ್ಟಾಗಿ ಪ್ರಸ್ತುತ ಪಡಿಸಬಹುದು. ಘರಾನೆಗಳ ಪ್ರಸ್ತುತ ಪಡಿಸುವುದು ಹಾಗು ರೂಢೀಸಿಕೊಳ್ಳುವುದರ ಬಗೆಯಲ್ಲಿ ಸಂಗೀತ ದಿಗ್ಗಜರ ಕೆಲವು ಸಲಹೆಗಳು ಹೀಗಿವೆ.

- ಸಂಗೀತಗಾರರು ಅವರವರ ಧ್ವನಿಗಣಕ್ಕೆ ಅನುಗುಣವಾಗಿ ಘರಾನೆಗಳನ್ನು ಆರಿಸಿಕೊಂಡು ಕಲಿಯಬೇಕು.
- ಒಳ್ಳೆಯ ಗುರುಗಳಲ್ಲಿ, ಒಂದೇ ಘರಾನೆಯಲ್ಲಿ ಕನಿಷ್ಠ ಹತ್ತು ವರ್ಷ ಅಭ್ಯಾಸ ಮಾಡಬೇಕು.
- ಬೇರೆ ಘರಾನೆಗಳ ಒಳ್ಳೆಯ ಅಂಶಗಳನ್ನು ತೆಗೆದುಕೊಂಡರೆ, ಒಳ್ಳೆಯ ರಿಯಾಜಿನ ಮೂಲಕ ಅದನ್ನು ಹಾಡಿ, ನಮ್ಮ ಗಾಯನದೊಂದಿಗೆ ಬೆರೆಸಿಕೊಳ್ಳಬೇಕು. ಅದರಿಂದ ಗಾಯಕರ ಮೂಲ ಘರಾಣೆಗೆ ಹಾನಿಯಾಗಬಾರದು.
- ಶಾಸ್ತ್ರೀಯ ಸಂಗೀತದಲ್ಲಿ ನವೀನತೆಗೆ ಸ್ವಾತಂತ್ರವಿದೆ. ಆದರೆ, ಸ್ವ-ಇಚ್ಛೆಯಿಂದ ಏನು ಬೇಕಾದರೂ ಹಾಡುವಂತಿಲ್ಲ. ಕಾರಣ ಘರಾಣೆಗಳ ಸಿದ್ಧಾಂತಗಳನ್ನು ಮೀರಿ ಅವುಗಳ ಶುದ್ಧ ಶೈಲಿ ನಶಿಸುವಂತೆ ಗಾಯನವನ್ನು ರೂಪಿಸಿಕೊಳ್ಳಬಾರದು.
- ಆಧುನಿಕ ಶಿಕ್ಷಣ ಪದ್ಧತಿಯಿಂದ ಘರಾನೆಗಳ ಇತಿಹಾಸ ಹಾಗೂ ಪದ್ಧತಿಗಳನ್ನು ತಿಳಿಯಬಹುದು. ಗುರುಕುಲದಿಂದ ಹಾಡುವ ಶೈಲಿಗಳನ್ನು ಕಾರಣ, ಎರಡನ್ನು ರೂಢಿಸಿಕೊಳ್ಳುವುದೆ ಉತ್ತಮ.
- ಆಧುನಿಕ ಶಿಕ್ಷಣ ಪದ್ಧತಿಯಲ್ಲಿ ಪ್ರಾಯೋಗಿಕತೆಗೆ ಬೇರೆ ಬೇರೆ ಘರಾಣೆಗಳ ಗಾಯನ ಶೈಲಿಗಳನ್ನು ಹೇಳಿಕೊಡುವ ಬೇರೆ ಬೇರೆ ಗುರುಗಳನ್ನು ನೇಮಿಸುವುದು ಒಳ್ಳೆಯ ಸಂಗತಿ. ಇದರಿಂದ ವಿದ್ಯಾರ್ಥಿಗಳು ತಮಗೆ ಬೇಕಾದ ಅಚ್ಚು ಮೆಚ್ಚಿನ ಘರಾಣೆಗಳ ಪ್ರಾಯೋಗಿಕ ಅಭ್ಯಾಸ ಮಾಡಬಹುದು.

## ಸಂಗೀತೊಪಾಸಕರು ಗಮನಿಸಬೇಕಾದ ಅಂಶಗಳು

- ಗುರುಗಳು ಕಲಿಸುವ ಪಾಠದಲ್ಲಿ ಘರಾಣೆಗಳ ವಿವರಣೆ ನೀಡುವುದು ಅತ್ಯವಶ್ಯಕವಾಗಿದೆ.
- ಶಿಶ್ಯವರ್ಗದ ಸಂಗೀತ ಅಭ್ಯಾಸದಲ್ಲಿ ಘರಾಣೆಗಳ ಶುದ್ಧತೆಕಾಪಾಡುದು ಅವಶ್ಯಕವಾಗಿದೆ.
- ಗಾಯಕರು ಹಾಗೂ ವಾದಕರ ಪ್ರದರ್ಶನದಲ್ಲಿ ಘರಾಣೆಗಳ ಸ್ಪಷ್ಟತೆಮೂಡಿಬಂದರೆ ಘರಾಣೆಗಳನ್ನು ಉಳಿಸಿಕೊಂಡಂತಾಗುತ್ತದೆ.
- ಶ್ರೋತ್ರಗಳ ಆಲಿಕೆಯಲ್ಲಿ ಘರಾಣೆಗಳ ತಿಳುವಳಿಕೆ ಮೂಡಿಸುವುದರಿಂದ ಘರಾಣೆಗಳ ಶುದ್ಧ ಶೈಲಿಗಳನ್ನು ಉಳಿಸಿ ಬೆಳೆಸಿದಂತಾಗುತ್ತದೆ.

## ಆಕರ ಗ್ರಂಥಗಳು


- **ಬಿ. ಎಸ್. ವೆಂಕಟಲಕ್ಷ್ಮಿ**, 'ಸಂಗೀತ ಸಾಮ್ರಾಟ್ ಮಲ್ಲಿಕಾರ್ಜುನ ಮನಸೂರ', ಬೆಂಗಳೂರು ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ.
- **ಅಶೋಕ ದಾ ರಾನಡೆ,** 'HINDUSTANI MUSIC' ನ್ಯಾಶನಲ್ ಬುಕ್ ಟ್ರಸ್ಟ, ಇಂಡಿಯಾ
- **ಪದ್ಮಶ್ರೀ ಪಂ. ವೆಂಕಟೇಶಕುಮಾರ ಹಾಗೂ ಪಂ. ಕೈವಲ್ಯಕುಮಾರ ಗುರವ** ಸಂದರ್ಶನ.


■■


ವಿದ್ಯಾನಿಧಿ ಪ್ರಕಾಶನ® ಶ್ರೀ ಶಿವಕುಮಾರ ಏಜನ್ಸಿ®

ಶೈಕ್ಷಣಿಕ ಪುಸ್ತಕಗಳ ಪ್ರಕಾಶಕರು ಮತ್ತು ಮಾರಾಟಗಾರರು

ಸ್ಟೇಶನ್ ರೋಡ ಮತ್ತು 'ನನಸು' ಜೆ. ಟಿ. ಮಠ ರೋಡ, ಗದಗ-582 101

ದೂರವಾಣಿ : 08372-237527, 277527

e-mail : vidyanidhiprakashana@gmail.com. www. vidyanidhionline.com



ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಸ್ಥಳೀಯ ನೀತಿ ರೂಪಿಸುವಲ್ಲಿ ಸಾರ್ವಜನಿಕರ ಪಾತ್ರ

✍ **ಶ್ರೀ ಪ್ರಕಾಶ ಹ. ಜೋಗಿನ** ಸಂಶೋಧಕರು, ರಾಜ್ಯಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
✍ **ಡಾ. ಎನ್. ಎಮ್. ಸಾಲಿ** ಸಹಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

*ಸಾರಾಂಶ*

*ಜಗತ್ತಿನಲ್ಲಿಯೇ ಅತ್ಯಂತ ವಿಶಾಲವಾದ ಪ್ರಜಾಪ್ರಭುತ್ವ ಸರಕಾರ ಹೊಂದಿರುವ ಭಾರತದಲ್ಲಿ ಅನೇಕ ಹಳ್ಳಿಗಳು ನಗರಗಳು, ಪಟ್ಟಣಗಳು ಇದ್ದು ಇವುಗಳ ಆಡಳಿತ ಅತ್ಯಂತ ಮಹತ್ವದ್ದಾಗಿದೆ. ಇವುಗಳ ನಿರ್ವಹಣೆಗಾಗಿಯೇ ಸ್ಥಳೀಯಸರಕಾರಗಳ ಆಡಳಿತಕ್ಕೆ ಹಿಂದಿನಿಂದಲೂ ಪ್ರಾಮುಖ್ಯತೆ ನೀಡುತ್ತಾ ಬಂದಿದ್ದು ಇವು ಸ್ಥಳೀಯ ಸಮಸ್ಯೆಗಳನ್ನುಅರಿತಿರುವ ಸ್ಥಳೀಯರಿಂದಲೇ ನಡೆಸಲ್ಪಡುವದರಿಂದ ಸುಲಭವಾಗಿ ಪರಿಹಾರೋಪಾಯಗಳನ್ನು ಕಂಡುಕೊಳ್ಳಲು ಸಾಧ್ಯವಾಗುವುದು, ತಮಗೆ ಬೇಕಾದ ನೀತಿ ಕಾನೂನುಗಳನ್ನು ತಾವೆ ರಚಿಸಿತಮ್ಮ ಸ್ಥಳೀಯ ಆಡಳಿತದಲ್ಲಿ ಅಳವಡಿಸುವ ಮೂಲಕ ಉತ್ತಮ ಆಡಳಿತ ವ್ಯವಸ್ಥೆಯನ್ನು ಹೊಂದಲು ಸಾಧ್ಯ. ಈ ಹಿನ್ನಲೆಯಲ್ಲಿ ಸ್ಥಳೀಯ ನೀತಿಯನ್ನುರೂಪಿಸುವಲ್ಲಿ ಸಾರ್ವಜನಿಕರ ಅಭಿಪ್ರಾಯ, ಆಸಕ್ತಿ ಭಾಗವಹಿಸುವಿಕೆ ಸಮಸ್ಯೆಗಳು ಅಧಿಕಾರಿಗಳ ಹಾಗೂ ಜನಪ್ರತಿನಿಧಿಗಳ ಪಾತ್ರ ಮುಂತಾದವುಗಳನ್ನು ಕುರಿತು ವಿವರಣೆಯನ್ನು ಪ್ರಸ್ತುತ ಪಡಿಸುವಲ್ಲಿ ಈ ಲೇಖನ ಮಹತ್ವ ಪಡೆದಿದೆ.*

*ಮುಖ್ಯ ಪದಗಳು (Keywords) : (ಸ್ಥಳೀಯ ಸರಕಾರ, ಮಹಾನಗರಪಾಲಿಕೆ ಆಡಳಿತ, ನಾಯಕತ್ವ,ಅಧಿಕಾರಿವರ್ಗ, ನೀತಿ ನಿಯಮಗಳು, ಅಧೀನ ಸಂಸ್ಥೆಗಳು, ಜನಪ್ರತಿನಿಧಿಗಳು, ಭಾಗವಹಿಸುವಿಕೆ, ಮಾಹಿತಿ ಸಮಸ್ಯೆ, ಅಧಿಕಾರ, ಸಮೀತಿಗಳು ಜನಸಂಖ್ಯೆ)*

## ಪೀಠಿಕೆ

ಭಾರತದಲ್ಲಿ ಅನೇಕ ಹಳ್ಳಿಗಳು, ನಗರಗಳು, ಪಟ್ಟಣಗಳು ಇದ್ದು ಇವುಗಳ ಆಡಳಿತ ಅತ್ಯಂತ ಮಹತ್ವದ್ದಾಗಿದೆ. ಏಕೆಂದರೆ ಆಡಳಿತದಲ್ಲಿ ಸರಕಾರವು ಅಧಿಕಾರಗಳ ವಿಕೇಂದ್ರಿಕರಣ ನೀತಿ ಹೊಂದಿರುವದರಿಂದ ಆಡಳಿತದ ಕೊನೆಯ ಹಂತದವರೆಗೂ ಆಡಳಿತ ತಲುಪಲುಅತ್ಯಂತ ಕಾಳಜಿ ವಹಿಸಬೇಕಾಗುತ್ತದೆ ಈ ಹಿನ್ನಲೆಯಲ್ಲಿದೇಶದಅತ್ಯಂತಕೊನೆಯ ಹಂತವಾಗಿಗ್ರಾಮ ಮತ್ತು ನಗರಗಳ ಆಡಳಿತ ಪ್ರಧಾನವಾಗಿವೆ.ಆದ್ದರಿಂದಲೇ ಹಿಂದಿನಿಂದಲೂ ಸ್ಥಳೀಯ ಸರಕಾರಗಳ ಆಡಳಿತಕ್ಕೆ ಹೆಚ್ಚಿನ ಮಹತ್ವ ನೀಡಿರುವದು ಕಂಡು ಬರುತ್ತದೆ. ಸ್ಥಳೀಯ ಪ್ರದೇಶಗಳ ಸಮಸ್ಯೆಗಳ ಬಗ್ಗೆ ಸ್ಥಳೀಯರಿಗೆ ಚನ್ನಾಗಿ ತಿಳಿದಿರುವದರಿಂದ ಅವುಗಳ ಸೂಕ್ತ ಪರಿಹಾರಕ್ಕಾಗಿ ಸ್ಥಳೀಯ ಜನರಿಗೆ ಅವಕಾಶಗಳನ್ನು ನೀಡುವ ಉದ್ದೇಶದಿಂದ ಸ್ಥಳೀಯ ಸರಕಾರಗಳ ಸ್ಥಾಪನೆ ಮಾಡಲಾಗಿದೆ. ಈ ಸ್ಥಳೀಯ ಸಂಸ್ಥೆಗಳಲ್ಲಿ ಸ್ಥಳೀಯರು ಭಾಗವಹಿಸುವದರಿಂದ ಆಡಳಿತದ ಹೊಂದಾಣಿಕೆ, ಸಹಕಾರ, ನಾಯಕತ್ವ ಮುಂತಾದಗುಣಗಳನ್ನು ಬೆಳಸಿಕೊಳ್ಳಲು ಅವಕಾಶ ನೀಡುತ್ತದೆ.

ಇಂತಹ ಅತ್ಯಂತ ಮಹತ್ವದ ಸ್ಥಳೀಯ ಸರಕಾರದಲ್ಲಿತಮ್ಮ ಅನುಕೂಲಕ್ಕಾಗಿ ಸಾರ್ವಜನಿಕರು ಯಾವ ರೀತಿ ಭಾಗವಹಿಸುತ್ತಾರೆ ತಮಗೆ ಬೇಕಾದ ನೀತಿ–ನಿಮಯಗಳನ್ನುರೂಪಿಸುವಲ್ಲಿ ಅವರು ತೆಗೆದುಕೊಳ್ಳುವ ಕ್ರಮಗಳು, ಅವರ ಆಸಕ್ತಿ ಅಭಿಪ್ರಾಯ, ಸಹಕಾರ ಮುಂತಾದವುಗಳು ಅತ್ಯಂತ ಪ್ರಮುಖ ಪಾತ್ರ ವಹಿಸುತ್ತವೆ. ಇವುಗಳ ಕುರಿತು ಇಲ್ಲಿ ವಿವರಿಸಲಾಗಿದೆ.

## ಸ್ಥಳೀಯ ನೀತಿ ನಿರೂಪಣೆ

ಸ್ಥಳೀಯ ಸರಕಾರಗಳು ಸಾರ್ವಜನಿಕರಿಗೆ ಅನುಕೂಲವಾಗುವ ರೀತಿಯಲ್ಲಿ ಸ್ಥಳೀಯ ಕಾನೂನುಗಳನ್ನು ರಚಿಸುತ್ತವೆ. ಇದಕ್ಕೆ ಸಂವಿಧಾನವು ಶ್ರೀರಕ್ಷೆಯಾಗಿದ್ದು 1992ರಲ್ಲಿ ಸಂವಿಧಾನದ 74 ನೇ ತಿದ್ದುಪಡಿಕಾಯ್ದೆಯ ಮೂಲಕ 9A ಭಾಗವನ್ನು ಸಂವಿಧಾನಕ್ಕೆ ಸೇರಿಸಲಾಗಿದ್ದು ಮುನ್ಸಿಪಾಲಿಟೀಸ್ ಎಂಬ ಶೀರ್ಷಿಕೆಯುಳ್ಳ ಈ ಕಾಯ್ದೆ 243-P ಯಿಂದ 243-ZG ವರೆಗಿನ ವಿಧಿಗಳನ್ನು ಒಳಗೊಂಡಿದ್ದು ಈ ಕಾಯ್ದೆಯ ಮೂಲಕ ಸಂವಿಧಾನಕ್ಕೆ 12 ನೇ ಅನುಸೂಚಿಯನ್ನುಸೇರಿಸಲಾಯಿತು. 12ನೇ ಅನುಸೂಚಿಯು ಮುನ್ಸಿಪಾಲಿಟಿಗಳು ನಿರ್ವಹಿಸಬೇಕಾದ 18 ವಿಷಯಗಳನ್ನು ಒಳಗೊಂಡಿದ್ದು 74 ನೇ ತಿದ್ದುಪಡಿಕಾಯಿದೆ ಮುನ್ಸಿಪಾಲಿಟಿಗಳಿಗೆ ಸಂವಿಧಾನಬದ್ಧ ಸ್ಥಾನವನ್ನು ನೀಡಿದೆ ಈ ಕಾಯ್ದೆ ಮುನ್ಸಿಪಾಲಿಟಿಯನ್ನು ಸಂವಿಧಾನದ ನ್ಯಾಯರಕ್ಷಿತ ಭಾಗದ ವ್ಯಾಪ್ತಿಯೊಳಗೆ ಸೇರಿಸಿದೆ. ಈ ಸಂವಿಧಾನಾತ್ಮಕ ಅವಕಾಶಗಳ ಹಿನ್ನಲೆಯಲ್ಲಿ ಸ್ಥಳೀಯ ಸರಕಾರಗಳು ತಮಗೆ ಪೂರಕವಾಗುವ ನೀತಿ ನಿಯಮಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ತಮ್ಮ ಇತಿಮಿತಿಯಲ್ಲಿ ತನ್ನದೇ ಆದ ಒಂದು ವ್ಯವಸ್ಥೆ ಹಂತಗಳ ಮೂಲಕ ನಡೆಸುತ್ತವೆ. ಇದಕ್ಕೆ ಸಂಬಂಧಪಟ್ಟಂತೆಜನಪ್ರತಿನಿಧಿಗಳು, ಅಧಿಕಾರಿಗಳು, ಸೇರಿದಂತೆ ಸಾರ್ವಜನಿಕರ ಪ್ರಯತ್ನ ಸಾಕಷ್ಟಿದ್ದುತಮಗೆ ಪೂರಕವಾಗುವ ನೀತಿ ನಿಯಮಗಳನ್ನುರಚಿಸುತ್ತವೆ.

## ಸ್ಥಳೀಯ ನೀತಿ ರೂಪಿಸುವಲ್ಲಿ ಸಾರ್ವಜನಿಕರ ಪಾತ್ರ

ಸ್ಥಳೀಯ ನೀತಿ ರೂಪಿಸುವಾಗ ಅದರಲ್ಲಿ ಸ್ಥಳೀಯ ಅಂಶಗಳಿಗೆ ಒತ್ತು ನೀಡುವದರಿಂದ ಅವುಗಳ ರಚನೆಯಲ್ಲಿ ಸ್ಥಳೀಯರು ಅತ್ಯಂತ ಮಹತ್ವದ ಪಾತ್ರ ವಹಿಸುತ್ತಾರೆ ಏಕೆಂದರೆ ಸ್ಥಳೀಯ ನೀತಿಗಳು ರಚನೆಯಾಗುವದೇ ಸ್ಥಳೀಯರಿಗಾಗಿ ಹಾಗಾಗಿ ಅವು ಆಯಾ ಭಾಗದ ಸಾರ್ವಜನಿಕರ ಬೇಕು ಬೇಡಿಕೆಗಳಾಗಿದ್ದು ಅವುಗಳನ್ನು ಅತ್ಯಂತ ಮುತುವರ್ಜಿವಹಿಸಿ ಜಾರಿಗೆ ತರಬೇಕಾಗುತ್ತದೆ. ಈ ನಿಟ್ಟಿನಲ್ಲಿ ಸಾರ್ವಜನಿಕರು ಸ್ಥಳೀಯ ನೀತಿ ಕುರಿತು ತಮ್ಮ ಸಮಸ್ಯೆ, ಮಾಹಿತಿ, ಅಧಿಕಾರ, ಪ್ರಭಾವಗಳನ್ನು ವ್ಯವಸ್ಥಿವಾಗಿ ತಿಳಿದುಕೊಳ್ಳಬೇಕಾಗುತ್ತದೆ.

## ಸ್ಥಳೀಯ ಸಮಸ್ಯೆಗಳು ಮತ್ತು ಸಾರ್ವಜನಿಕರು

ಸಾರ್ವಜನಿಕರು ಸ್ಥಳೀಯ ನೀತಿ ರೂಪಿಸುವ ಪೂರ್ವದಲ್ಲಿ ತಮ್ಮ ಸ್ಥಳೀಯ ಸಮಸ್ಯೆಗಳನ್ನು ಕುರಿತು ತಿಳಿದುಕೊಳ್ಳಬೇಕು. ತಮ್ಮ ಪ್ರದೇಶದಲ್ಲಿಯಾವಯಾವ ಸಮಸ್ಯೆಗಳಿವೆ, ಯಾವವು ಗಂಭೀರವಾಗಿವೆ, ಯಾವುದನ್ನು ಸುಲಭವಾಗಿ ಪರಿಹರಿಸಬಹುದು ಎಂಬ ಮುಂತಾದ ವಿಷಯಗಳನ್ನು ಕುರಿತು ತಿಳಿಯಬೇಕು. ರಸ್ತೆ, ಒಳಚರಂಡಿ, ಚರಂಡಿ, ನೀರು ಸರಬರಾಜು, ವಿದ್ಯುತ್ ಸರಬರಾಜು, ಸ್ವಚ್ಚತೆ, ಬೀದಿನಾಯಿ, ಹಾವಳಿ, ಹಂದಿಗಳ ಹಾವಳಿ, ಬೀದಿ ದೀಪ, ನೈರ್ಮಲ್ಯ, ಸಾಂಕ್ರಾಮಿಕ ರೋಗಳು, ಇನ್ನೂ ಮುಂತಾದ ಸಮಸ್ಯೆಗಳನ್ನು ಕುರಿತು ಸಾರ್ವಜನಿಕರು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ತಿಳಿದುಕೊಳ್ಳಬೇಕು ತಮ್ಮಲ್ಲಿ ಇರುವ ಸಮಸ್ಯೆಗಳನ್ನು ಅರಿತು ಅದು ಯಾವ ರೀತಿ ಆಗಿದೆ ಅದಕ್ಕೆ ಪರಿಹಾರ ಏನು ಎಂಬುದನ್ನು ಚರ್ಚಿಸಿ ಆ ಕುರಿತಂತೆ ಸ್ಥಳೀಯ ನೀತಿ ರಚಿಸಬೇಕು.

## ಜನಪ್ರತಿನಿಧಿಗಳು ಮತ್ತು ಸಾರ್ವಜನಿಕರು

ಸ್ಥಳೀಯ ನೀತಿ ರೂಪಿಸುವ ವಿಷಯದಲ್ಲಿ ಜನಪ್ರತಿನಿಧಿಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಏಕೆಂದರೆ ಸಾರ್ವಜನಿಕರು ತಮಗಾಗುತ್ತಿರುವ ಸಮಸ್ಯೆಗಳನ್ನು ಕುರಿತು ಜನಪ್ರತಿನಿಧಿಗಳೊಂದಿಗೆ ಚರ್ಚೆ ಮಾಡಿ ಅವರಿಗೆ ಮನವರಿಕೆ ಆದಾಗ ಅವರು ಆ ವಿಷಯ ಕುರಿತು ಕ್ರಮಕೈಗೊಳ್ಳುತ್ತಾರೆ ಹಾಗಾಗಿ ಜನಪ್ರತಿನಿಧಿಗಳೊಂದಿಗೆ ಸಂಬಂಧ ಸ್ಥಳೀಯ ನೀತಿರೂಪಿಸಲು ಸಹಕಾರಿ ಆಗುತ್ತದೆ ಸ್ಥಳೀಯ ಪ್ರದೇಶವನ್ನು ಪ್ರತಿನಿಧಿಸುವ ಜನಪ್ರತಿನಿಧಿಗಳು ತಮ್ಮ ಕ್ಷೇತ್ರದಲ್ಲಿ ಜನರಿಗಾಗುತ್ತಿರುವ ತೊಂದರೆ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸುತ್ತಾರೆ. ಜನಪ್ರತಿನಿಧಿಗಳಾದ ಕಾರ್ಪೊರೇಟರರು, ಶಾಸಕರು, ಸಂಸಧರನ್ನೊಳಗೊಂಡು ಪ್ರತಿಯೊಬ್ಬಜನ ಪ್ರತಿನಿಧಿಗಳು ಸ್ಥಳೀಯ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸುತ್ತಾರೆ. ಇವರು ಸಹ ತಮ್ಮ ವ್ಯಾಪ್ತಿಯಲ್ಲಿ ಸ್ಥಳೀಯ ನೀತಿರೂಪಿಸುವಲ್ಲಿ ಪ್ರಮುಖಪಾತ್ರ ವಹಿಸುತ್ತಾರೆ. ಏಕೆಂದರೆತಮ್ಮಕ್ಷೇತ್ರದ ಜನರ ಸಮಸ್ಯೆಗಳನ್ನು ಅರಿತು ಅದಕ್ಕೆ ಸೂಕ್ತ ಪರಿಹಾರವನ್ನು ಸೂಚಿಸುವಲ್ಲಿ ಜನಪ್ರತಿನಿಧಿಗಳ ಪಾತ್ರಅತ್ಯಂತ ಮಹತ್ವದ್ದಾಗಿದೆ. ಇವರು ಈ ನಿಟ್ಟಿನಲ್ಲಿ ಸೂಕ್ತ ಕಾನೂನು ನೀತಿ ರಚಿಸಲು ಪ್ರಯತ್ನಿಸುತ್ತಾರೆ ಹಾಗಾಗಿ ಸ್ಥಳೀಯ ನೀತಿ ರಚಿಸುವಲ್ಲಿ ಜನಪ್ರತಿನಿಧಿಗಳ ಪಾತ್ರವು ಅತ್ಯಂತ ಮಹತ್ವದ್ದಾಗಿದೆ ಎಂದು ಹೇಳಬಹುದು. ಆಡಳಿತಾರೂಢ ರಾಜಕೀಯ ಪಕ್ಷಗಳು ಸಹ ಸ್ಥಳೀಯವಾಗಿ ನೀತಿರೂಪಿಸುವಾಗ ತಮ್ಮ ಪ್ರಭಾವ ಬೀರಿರುವದು ಕಂಡು ಬರುತ್ತದೆ ತಮ್ಮ ಪಕ್ಷದ ಆಡಳಿತದ ಪ್ರಭಾವಕಂಡುಬರಲು ಸ್ಥಳಿಯ ಸರಕಾರಗಳಿಗೆ ಸಹಾಯ ಮಾಡುವುದು ಕಂಡು ಬರುತ್ತದೆ ಸ್ಥಳೀಯವಾಗಿ ತಮ್ಮ ಪಕ್ಷದ ವರ್ಚಸ್ಸು ಮೂಡಿಸಲು ಪ್ರಯತ್ನಿಸುತ್ತದೆ.

## ಆಡಳಿತ ವರ್ಗ ಮತ್ತು ಸಾರ್ವಜನಿಕರ ಸಮಸ್ಯೆ

ಸ್ಥಳೀಯ ಸರಕಾರದ ನಿತ್ಯಜೀವನದ ಆಡಳಿತವನ್ನು ನಡೆಸುವವರು ಈ ಆಡಳಿತ ವರ್ಗದ ಸಿಬ್ಬಂದಿ ಇದರಲ್ಲಿ ಹಿರಿಯ ಉನ್ನತಾಧಿಕಾರಿಯಿಂದ ಅತಿ ಕೆಳವರ್ಗದ ಕಾರ್ಮಿಕರು ಅತ್ಯಂತ ಪ್ರಮುಖ ಪಾತ್ರ ವಹಿಸುತ್ತಾರೆ.ಇಲ್ಲಿ ಸಾರ್ವಜನಿಕರು ತಮ್ಮ ದಿನನಿತ್ಯದ ಸಮಸ್ಯೆಗಳನ್ನು ಕುರಿತು ನೇರವಾಗಿ ಈ ಆಡಳಿತ ವರ್ಗದ ಸಿಬ್ಬಂದಿಗಳೊಂದಿಗೆ ವ್ಯವಹಸುತ್ತಾರೆ. ಇವರು ಆ ಸಮಸ್ಯೆಗೆ ಯಾವ ರೀತಿ ಪ್ರತಿಕ್ರಿಯಿಸುತ್ತಾರೆ ಹಾಗೂ ಸ್ಥಳೀಯ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಹೇಗೆ ನೆರವಾಗುತ್ತಾರೆ ಎಂಬುದು ತುಂಬಾ ಮಹತ್ವದ್ದಾಗಿದೆ. ಸಾರ್ವಜನಿಕರಿಗೆ ಆಗುತ್ತಿರುವ ಸಮುಸ್ಯೆಗಳನ್ನು ಕುರಿತುಅದಕ್ಕೆ ಪೂರಕವಾಗಿರುವ ನೀತಿರೂಪಿಸಲು ನೆರವಾಗಬೇಕು ಅಂದಾಗ ಮಾತ್ರ ಸ್ಥಳೀಯ ನೀತಿಗಳು ಸಾರ್ವಜನಿಕರಿಗೆ ಪೂರಕವಾಗಿರಲು ಸಾಧ್ಯ. ಸಾರ್ವಜನಿಕರ ಅಹವಾಲುಗಳನ್ನು ಕೇಳಿ ಅವುಗಳನ್ನು ಪರಿಹರಿಸುವಲ್ಲಿ ಇರುವ ಕಾನೂನು, ನಿಯಮಗಳನ್ನು ತಿಳಿದು ಆ ಮೂಲಕ ಸಾರ್ವಜನಿಕರಿಗೆ ಸಹಕರಿಸಬಹುದು ಹೊಸದಾಗಿ ಕಂಡುಬರುವ ಸಮಸ್ಯೆಗಳನ್ನು ಕುರಿತು ಹೊಸ ನೀತಿರೂಪಿಸಲು ಸಹಕರಿಸಬಹುದು. ಕಾನೂನಿನಲ್ಲಿ ಇರುವ ಅವಕಾಶಗಳನ್ನು ತಿಳಿದು ತಮ್ಮ ಸ್ಥಳೀಯ ಸಮಸ್ಯೆ ಪರಿಹಾರಕ್ಕೆ ಪ್ರಯತ್ನಿಸಬಹುದು ಈ ನಿಟ್ಟಿನಲ್ಲಿ ಆಡಳಿತ ವರ್ಗ ಹಾಗೂ ಸಾರ್ವಜನಿಕರ ಸಂಬಂಧ ತುಂಬಾ ಮಹತ್ವದ್ದಾಗಿದೆ. ಸಾರ್ವಜನಿಕರ ಹಾಗೂ ಆಡಳಿತ ವರ್ಗದವರ ಉತ್ತಮ ಸಂಬಂಧ ಸ್ಥಳೀಯ ನೀತಿರೂಪಿಸಲು ಸಹಕಾರಿಯಾಗಿದೆ.

## ಉಪಸಂಹಾರ

ಸ್ಥಳೀಯ ನೀತಿರೂಪಿಸುವಲ್ಲಿ ಸಾರ್ವಜನಿಕ ಪಾತ್ರ ಕುರಿತು ವಿವರವಾಗಿ ನೋಡಿದಾಗಇಲ್ಲಿ ನಮಗೆ ಮುಖ್ಯವಾಗಿ ಸಾರ್ವಜನಿಕರಿಗೆ ತಮ್ಮ ಅಧಿಕಾರ, ಸ್ಥಾನಮಾನ ಹಾಗೂ ಜವಾಬ್ದಾರಿಗಳ ಮಾಹಿತಿ ಕೊರತೆ ಕಂಡು ಬರುತ್ತದೆ. ಏಕೆಂದರೆ ಸ್ಥಳೀಯ ನೀತಿ ತಮಗೆ ಸಂಬಂಧಿಸಿದ್ದು ಎಂಬುದರ ಅರಿವು ಹೆಚ್ಚಿನ ಜನರಿಗೆ ಇಲ್ಲ ಹಾಗಾಗಿ ಆವಿಷಯದ ಮಾಹಿತಿಯ ಕೊರತೆ ಕಂಡುಬರುತ್ತದೆ. ಆದ್ದರಿಂದ ಎಷ್ಟೋ ಜನರುತಮ್ಮ ಸ್ಥಳೀಯ ಸಮಸ್ಯೆ ಕುರಿತಂತೆ ಯಾರೊಬ್ಬರ ಬಗ್ಗೆ ಚರ್ಚಿಸುವದೇ ಇಲ್ಲ ತಮ್ಮ ಜನಪ್ರತಿನಿಧಿಗಳೊಂದಿಗೆ ಚರ್ಚಿಸುವ ಅಥವಾ ಅಧಿಕಾರಿ ವರ್ಗದವರಿಗೆ ತಿಳಿಸುವ ಹಾಗೂ ತಿಳಿಯುವ ಪ್ರಯತ್ನ ಮಾಡುವದಿಲ್ಲ ಇದರಿಂದ ಅವರೂ ಸಹ ಸಾರ್ವಜನಿಕರನ್ನು ಸ್ಥಳೀಯ ನೀತಿರೂಪಿಸಲು ವಿಷಯದಲ್ಲಿ ದೂರವಿರಿಸಿದ್ದು ಕಂಡುಬರುತ್ತದೆ. ಸಾರ್ವಜನಿಕರು ಸ್ಥಳೀಯ ಸಮಸ್ಯೆಗಳನ್ನು ಕುರಿತು ಒಗ್ಗಟ್ಟಾಗಿ ನಿಂತು ಎಲ್ಲರೂ ಎಲ್ಲರಿಗಾಗಿ ನೀತಿ ನಿರೂಪಣೆ ಮಾಡಲು ಇಚ್ಚಿಸಿದಲ್ಲಿ ಸ್ಥಳೀಯ ಸಮಸ್ಯೆಗಳು ಇಲ್ಲವಾಗುತ್ತವೆ. ಆದರೆ ಇಂದು ಸಾರ್ವಜನಿಕರಿಗೆ ಮಾಹಿತಿ ಕೊರತೆ ಹಾಗೂ ಅದರ ಮಹತ್ವ ಅರಿಯದೆ ಇರುವದರಿಂದ ಸ್ಥಳೀಯ ನೀತಿ ನಿರೂಪಣೆಯಲ್ಲಿ ಸಾರ್ವಜನಿಕರ ಭಾಗವಹಿಸುವಿಕೆ ಪರಿಣಾಮಕಾರಿ ಆಗಿಲ್ಲಎಂದು ಹೇಳಬಹುದು.

## ಆಕರ ಗ್ರಂಥಗಳು


- **Brenner N.** (2004), Newstate Spaces : Urban Government and the rescaling of Statehood, Oxford University Press, Oxford.
- **Khanna R.L.** (1967) Mumcipal Government And Administration in India. ChandigharMahendra Capital Publishars.
- **Betgar V. R.** (1999) Dynamics of Urban leadeship.in Karnataka - A Case Study of Hubli Dharwad Muncipal Corporation.
- **Talwar S. P.** (2001) MuncipalAdministration in Karnataka - A Case Stady of Hubli Dharwad Municipal Corporation.
- **ಪ್ರೊ. ಎನ್. ಹಾಲಪ್ಪ** (2007) ಭಾರತೀಯ ಆಡಳಿತ ಗದಗ ವಿದ್ಯಾನಿಧಿ ಪ್ರಕಾಶನ.
- **ಪ್ರೊ. ಎನ್. ಬಿ. ಪಾಟೀಲ** (1999) ಸಾರ್ವಜನಿಕ ಆಡಳಿತ ಬಾಗಲಕೋಟ ಅರುಣ ಪ್ರಕಾಶನ.


■■

*ಮಾನ್ಯ ಶಿಕ್ಷಣ ಪ್ರೇಮಿಗಳೇ,*

**ಪ್ರಶಿಕ್ಷಣಾರ್ಥಿ, ಶಿಕ್ಷಕರಲ್ಲಿ , ಶಿಕ್ಷಣಾಸಕ್ತರಲ್ಲಿ ವಿಜ್ಞಾಪನೆ, ನಮ್ಮ ಪತ್ರಿಕೆಯು ರಾಜ್ಯದಲ್ಲಿ ಒಂಬತ್ತನೆಯ ವಸಂತಕ್ಕೆ ಕಾಲಿಡುತ್ತ ಕನ್ನಡ ಮತ್ತು ಇಂಗ್ಲಿಷನಲ್ಲಿ ತ್ರೈಮಾಸಿಕ ರೂಪದಲ್ಲಿ ಹೊರಬರುತ್ತಿದೆ. ತಮ್ಮೆಲ್ಲರ ಪ್ರೋತ್ಸಾಹವೇ ಅದಕ್ಕೆ ಕಾರಣ. ತಾವುಗಳು ಪತ್ರಿಕೆಯನ್ನು ಪ್ರೋತ್ಸಾಹಿಸಿ ಬೆಳೆಸಬೇಕಾದರೆ ಒಳ್ಳೆಯ ಪ್ರಬಂಧ ಹಾಗೂ ಲೇಖನಗಳನ್ನು ಕಳಿಸಬೇಕು ಮತ್ತು ಚಂದಾದಾರರಾಗಿ ಪತ್ರಿಕೆಯನ್ನು ಬೆಳೆಸಬೇಕು. ತಮ್ಮ ಪ್ರೋತ್ಸಾಹವೇ ಪತ್ರಿಕೆ.**

**- ಸಂಪಾದಕರು**

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ವಾಯಲಿನ್ ನಿರ್ಮಾಣ (ರಚನೆ) ಹಾಗೂ ತಯಾರಿಕೆ

✍ **ನಾರಾಯಣ ವಿ. ಅಕ್ಕಸಾಲಿ,** ಸಂಶೋಧನಾ ವಿದ್ಯಾರ್ಥಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
✍ **ಡಾ. ಶಾಂತಾರಾಂ ಹೆಗಡೆ,** ಮಾರ್ಗದರ್ಶಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಭರತ ಮುನಿಯ ಕಾಲದಲ್ಲಿ ಹೇಳಲ್ಪಡುವ ವಾದ್ಯಗಳ 4 ವರ್ಗೀಕರಣಗಳಾದ ತತವಾದ್ಯ, ಸುಷಿರವಾದ್ಯ, ಅವನದ್ಧ ವಾದ್ಯ ಮತ್ತು ಘನವಾದ್ಯ, ಇವುಗಳನ್ನು ನಮ್ಮ ಕನ್ನಡದ ಕವಿಗಳೂ ಸಹ ಒಪ್ಪಿಕೊಂಡಿದ್ದಾರೆ. ಕಾವ್ಯ ರಚನೆಯಲ್ಲಿ ಕಂಡುಬರುವ ಕೆಲ ಸಾಮಾನ್ಯ ಅಂಶ, ಆಸ್ಥಾನದ ವರ್ಣನೆಗಳಲ್ಲಿ 'ತಂತಿ' ವಾದ್ಯಗಳನ್ನು ಹೆಸರಿಸುವುದು ಸೂಕ್ತವೆಂದೆನಿಸುತ್ತದೆ. ಯುದ್ದ ಸಮಯದಲ್ಲಿ ಉಪಯೋಗಿಸುತ್ತಿದ್ದ ರಣವಾದ್ಯಗಳು, ಮದುವೆ ಆಸ್ಥಾನಗಳಲ್ಲಿ ಶೋಭಿಸುತ್ತಿದ್ದ ವಾದ್ಯಗಳು, ಸ್ವಯಂವರಗಳಲ್ಲಿ, ಶೃಂಗಾರ ಸನ್ನಿವೇಶಗಳಲ್ಲಿ ಬಳಸಿರುವ ವಾದ್ಯಗಳು ಸಾಮಾನ್ಯವಾಗಿರುವುದನ್ನು ಕಾಣಬಹುದು. ರಾವಣಹಸ್ತ,ವಲ್ಲಕಿ,ವಿಪಂಚಿ,ಚಿತ್ರವೀಣೆ, ಘೋಷಾವತಿ, ಗೌರಿವೀಣೆ, ತುಂಬುರ ವೀಣೆ, ಪದ್ಮಜ ವೀಣೆ, ಸಾರಂಗ ವೀಣೆ, ಪಿನಾಕ ವೀಣೆ, ಸ್ವಾಯಂಭು ವೀಣೆ, ಕಚ್ಛಪ ವೀಣೆ, ಶತತಂತ್ರಿ ವೀಣೆ, ವಿಜಯ,ಗಜ ವೀಣೆ, ಕಿನ್ನರ ವೀಣೆ, ರುದ್ರ ವೀಣೆ, ಅರ್ಧ ನಾರಿ ವೀಣೆ ಮುಂತಾದ ತಂತಿ–ತತ್ ವಾದ್ಯಗಳು.

ಭೇರಿ, ಪಟಾಹ, ತಮಟೆ, ಡೋಲು, ತ್ರಿವಳಿ, ಮದ್ದಳೆ, ಮಂಡಿಢಕ್ಕೆ ಮೃದಂಗ ಮೊದಲಾದವು ಅವನದ್ಧ ವಾದ್ಯಗಳು. ಶಂಕ, ಕೊಳಲು ಕಹಳೆ, ಶೃಂಗ ಮುಂತಾದವು ಶುಶಿರ ವಾದ್ಯಗಳು ಮತ್ತು ತಾಳ ಜಯಘಂಟೆ, ಮಣಿಘಂಟೆ ಮುಂತಾದವು ಘನ ವಾದ್ಯಗಳಾಗಿವೆ.

## ವಾಯಿಲಿನ್ ನಿರ್ಮಾಣ–ರಚನೆ ಹಾಗೂ ತಯಾರಿಕೆ

ನಮ್ಮ ಭಾರತೀಯ ಸಂಗೀತ ಪ್ರಪಂಚದಲಿ ವಾಯಿಲಿನ್ ವಾದ್ಯವು ಪ್ರವೇಶ ಮಾಡಿ 200 ವರ್ಷಗಳಾಗಿರಬಹುದು. ನಮ್ಮ ದೇಶದ ಪ್ರತಿಭಾವಂತ ಹಿರಿಯ ಸಂಗೀತ ವಿದ್ವಾಂಸರ ಸಾಧನೆ ಸಿದ್ದಿಗಳ ಫಲವಾಗಿ ಇಂದು ವಾಯಿಲಿನ್ ವಾದ್ಯ ಭಾರತೀಯ ಸಂಗೀತ ಧಕ್ಷಿಣಾದಿ ಉತ್ತರಾಧಿ ಚಲನಚಿತ್ರ ಸಂಗೀತ, ಸುಗಮ ಸಂಗೀತ ಜನಪದ ಸಂಗೀತ, ಠುಮ್ರಿ, ನಾಟಕ ರಂಗ, ವಾದ್ಯ ವೃಂಧ ಇನ್ನು ಅನೇಕ ಸಂಗೀತ ಕಛೇರಿಗಳಲ್ಲಿ ಒಂದು ಅವಿಭಾಜ್ಯ ಅಂಗವಾಗಿ ವಿಜೃಂಭಿಸುತ್ತಿದೆ. ಹಾಗೂ ವಾದ್ಯ ನುಡಿಸುವ ಪಂಡಿತರು ಅಭ್ಯಾಸ ಮಾಡುವ ವಿದ್ಯಾರ್ಥಿಗಳೂ ದಿನ ದಿನಕ್ಕೆ ಸಂಖ್ಯೆ ಹೆಚ್ಚುತ್ತಿದೆ. ಅಂತೆಯೇ ವಾಯಿಲಿನ್ ವಾದ್ಯಕ್ಕೆ ಬೇಡಿಕೆಯೂ ಹೆಚ್ಚುತ್ತಿದೆ. ಆದ್ದರಿಂದ ವಾಯಿಲಿನ್ ವಾದ್ಯದ ನಿರ್ಮಾಣ–ರಚನೆ ಮತ್ತು ತಯಾರಿಕೆ ಅವಶ್ಯಕತೆ ಇದೆ. ಮತ್ತು ವಾದ್ಯವನ್ನು ತಯಾರಿಸುತ್ತಿದ್ದ ಹಿಂದಿನ ಕಾಲದ ತಜ್ಞರ ಜೊತೆಗೆ ನುಡಿಸುವ ವಿದ್ವಾಂಸರ ಪರಿಚಯ ತಿಳಿದುಕೊಳ್ಳುವುದು ಅವಶ್ಯಕವಾಗಿದೆ.

## ವಾಯಿಲಿನ್ ರಚನೆ–ನಿರ್ಮಾಣ ಮತ್ತು ಭಾಗಗಳು

1. ಕತ್ತಿನ ಸುರುಳಿ
2. ಬಿರಟೆಗಳಿರುವ ಸ್ಥಳ
3. ಬಿರಟೆಗಳು
4. ಬೆರಳಾಡಿಸುವ ಕತ್ತಿನ ಹಲಿಗೆ
5. ತಂತಿಗಳು
6. ಎದೆಯ ಹಲಿಗೆ
7. ಕುದುರೆ
8. ನಾದದ ರಂಧ್ರ
9. ತಂತಿ ಶೃತಿ ಮಾಡಲು ಬಳಸುವ ಅಡ್ಜಸ್ಟರ್‌ಗಳು
10. ಟೈಲ್ ಪೀಸ್
11. ಕತ್ತಿನ ಆಧಾರ–ಚಿನ್ ರೆಸ್ಟ್
12. ಟೈಲ್ ಪೀಸಿನ ಹಿಡಿತದ ಭಾಗ–ಎಂಡ್ ಪಿನ್
13. ಕಮಾನು–ಬೋ, ಕಮಾನಿನ ತುದಿ, ಕಮಾನಿನ ಕಡ್ಡಿ, ಕಮಾನಿನ ಫ್ರಾಗ್, ಕಮಾನಿನ ತಿರುಪು
14. ಕಮಾನಿಗೆ ಉಪಯೋಗಿಸುವ ಕುದುರೆ ಬಾಲದ ಕೂದಲು ಮತ್ತು ಇತ್ತೀಚಿನ ನೈಲನ್ ವಾಯರ್
15. ಎದೆಯ ಹಲಿಗೆ

16 ಜೋಡಿಸಲ್ಪಟ್ಟಿರುವ ಪಕ್ಕದ ಪಟ್ಟಿಗಳು

17. ಬೆನ್ನು ಹಲಿಗೆ

ವಾಯಿಲಿನ್ ವಾದ್ಯದ ತಯಾರಿಕೆಯಲ್ಲಿ ಮೊದಲನೆ ಹಂತ ಎದೆ ಹಲಿಗೆ ಮತ್ತು ಬೆನ್ನು ಹಲಿಗೆಗಳ ತಯಾರಿಕೆ ಈ ಹಲಿಗೆಗಳನ್ನು ಕುಯ್ಯುವುದರಲ್ಲಿ ವಿಶೇಷತೆ ಇದೆ. ವಾಯಿಲಿನ್ ಎದೆ ಹಲಿಗೆ ಮತ್ತು ಬೆನ್ನು ಹಲಿಗೆಗಳಿಗೆ ಬೇಕಾಗುವ ಮರದ ಕಟ್ಟಿಗೆಗೆ ಆಕಾರದ ಬ್ಲಾಕ್‌ಗಳಾಗಿ ವಿಂಗಡಣೆ ಮಾಡಲಾಗುತ್ತದೆ ತದ ನಂತರ ಎರಡು ತ ಆಕಾರದ ಬ್ಲಾಕ್ ಗಳನ್ನು ಸೇರಿಸಿ ಒಂದೆ ಹಲಿಗೆಯಂತೆ ಮಾಡಬೇಕು. ಮರದಲ್ಲಿರುವ ಗೆರೆಗಳು ಒಂದಕ್ಕೊಂದು ಸಮಾನಾಂತರವಾಗಿದ್ದು ಎಡ ಮತ್ತು ಬಲ ಈ ಎರಡು ಭಾಗಕ್ಕೂ ಗೆರೆಗಳಲ್ಲಿ ಸಾಮರಸ್ಯ ಕಂಡುಬರುತ್ತದೆ.

## ಬೆನ್ನು ಹಲಿಗೆ

ಬೆನ್ನು ಹಲಿಗೆಯ ಮದ್ಯದ–ನಡುವಿನ ಭಾಗ ಹೊರ ಉಬ್ಬಿರುವಂತೆ ಆಕಾರ – ರೂಪ, ಆಕೃತಿ ಬರುವಂತೆ ತೋಡಬೇಕು ಉತ್ತಮ ಮಟ್ಟದ ಬೆನ್ನು ಹಲಿಗೆಯನ್ನು ಮಾಪಲ್ ಮರದ ಕಟ್ಟಿಗೆಯಿಂದ ತಯಾರಿ ಸಲ್ಪಟ್ಟಿರುತ್ತದೆ.

## ಎದೆ ಹಲಿಗೆ

ಎದೆ ಹಲಿಗೆ ಇದಕ್ಕೆ ಇನ್ನೊಂದು ಹೆಸರಿನಿಂದ ಕರೆಯುವುದುಂಟು ಅದು ನಾದದ ಹಲಿಗೆ ಎಂದು. ಎದೆ ಹಲಿಗೆ–ನಾದದ ಹಲಿಗೆ ಎಂದು ಇದನ್ನು ಉತ್ತಮ ಪೈನ್ ಮರದ ಕಟ್ಟಿಗೆಯಿಂದ ಸಿದ್ಧಪಡಿಸಲಾಗಿರುತ್ತದೆ ಇದಕ್ಕೂ ಸಹ ಬೆನ್ನು ಹಲಿಗೆಯ ರೀತಿಯಲ್ಲಿ ಉಬ್ಬು ಬರುವಂತೆ ತೋಡಬೇಕು ಎದೆ ಹಲಿಗೆ ಮತ್ತು ಬೆನ್ನು ಹಲಿಗೆಯ ದಪ್ಪ ಎಲ್ಲಾ ಭಾಗಗಳಲ್ಲೂ ಒಂದೇ ಸಮಾನಾಗಿರುವುದು ಬಹಳ ಮುಖ್ಯವಾದುದು ಏಕೆಂದರೆ ವಾಯಿಲಿನ್‌ನಲ್ಲಿ ಉತ್ತಮ ಹಾಗೂ ಮಾಧುರ್ಯ ನಾದ

ಬರಲು ಇದೊಂದು ಸಾಧನವಾಗಿದೆ. ಎದೆ ಹಲಿಗೆಯ ಒಳಗಿನ ಎಡಭಾಗಕ್ಕೆ ಬಾಸ್‌ಬಾರ್ ಎಂದು ಕರೆಯಲ್ಪಡುವ ಸುಮಾರು 11 ಅಂಗುಲ ಉದ್ದದ, ಒಂದು ನಾಲ್ಕು ದಪ್ಪ ಇರುವ ಒಂದು ಅಂಗುಲದ ಎತ್ತರದ ಒಂದು ಮರದ ಕಟ್ಟಿಗೆ ತುಂಡನ್ನು ಅಳವಡಿಸಬೇಕು ನಾದ ಮಾಧುರ್ಯದ ಧೃಷ್ಠಿಯಲ್ಲಿ ಈ ಬಾಸ್‌ಬಾರ್ ಬಹಳ ಮುಖ್ಯ ಪಾತ್ರವಹಿಸುತ್ತದೆ. ನೀಳವಾದ ಕಪ್ಪಿನ ಗೆರೆಯಂತಿರುವ ಭಾಗದಲ್ಲಿ ನಿಶ್ಚಿತ ರೂಪದಲ್ಲಿ ರಂದ್ರಗಳನ್ನು ಕೊರೆಯಬೇಕು.

ಪಕ್ಕ ಪಟ್ಟಿಗಳನ್ನು ಮಾಪಲ್-ಮ್ಯಾಪಲ್ ಮರದ ಕಟ್ಟಿಗೆಯಿಂದ ಸುಮಾರು 15,16 ಅಂಗುಲ ಉದ್ದದ ಒಂದು, ಮೂರು, ಎಂಟು ಅಗಲದ 1/12 ದಪ್ಪದ ಮರದ ಪಟ್ಟಿಗಳಿಂದ ಈ ಪಕ್ಕ ಪಟ್ಟಿಗಳನ್ನು ಬೇಕಾದ ಆಕಾರದಲ್ಲಿ ಸಿದ್ದಪಡಿಸಬೇಕು. ಪಟ್ಟಿಗಳು ಸಿದ್ದಪಡಿಸಿದ ನಂತರ ಚೆನ್ನಾಗಿ ನೀರಿನಲ್ಲಿ ನೆನೆಸಬೇಕು ನಂತರ ಬಿಸಿ ಮಾಡಲ್ಪಟ್ಟ 3/4 ಲೋಹದ ಪೈಪಿನ ಮೇಲಿಟ್ಟು ನಮಗೆ ಬೇಕಾದ ಆಕಾರಕ್ಕೆ ನಿಧಾನವಾಗಿ ಬಗ್ಗಿಸಬೇಕು ಹೀಗೆ ಬಗ್ಗಿಸಿದ ಪಟ್ಟಿ ಅದೇ ಆಕಾರದಲ್ಲಿ ಶಾಶ್ವತವಾಗಿ ನಿಲ್ಲುತ್ತದೆ. ಹೀಗೆ ಪಕ್ಕದ ಪಟ್ಟಿಗಳನ್ನು ತಯಾರಿಸಿ ಜೋಡಿಸಬೇಕು.

ಈ ಪಕ್ಕ ಪಟ್ಟಿಗಳ ಪಂಜರಕ್ಕೆ ಎದೆ ಹಲಿಗೆ ಮತ್ತು ಬೆನ್ನು ಹಲಿಗೆ ಇವೆರಡನ್ನು ಸೂಕ್ತವಾಗಿ ಜೋಡಿಸಿ ಅಂಟಿಸುವುದು ನಿಜಕ್ಕೂ ಬಹಳ ಅನುಭವವುಳ್ಳ ಕರಕುಶಲ ಕೆಲಸವಾಗಿದೆ. ಈ ಪಂಜರ-ಗೂಡು ಮೂಲೆಗಳಲ್ಲಿ ಪಟ್ಟಿಯ ಮೇಲೆ ಮತ್ತು ಕೆಳಗೆ ಅನೇಕ ಸಣ್ಣ ಸಣ್ಣ ಕಟ್ಟಿಗೆಯ ತುಂಡುಗಳನ್ನು ಇರಿಸಿ ಭದ್ರತೆ ಬರುವಂತೆ ಮಾಡಿರುತ್ತಾರೆ.

## ಪರ್‌ಫ್ಲಿಂಗ್

ಉತ್ತಮ ಗುಣಮಟ್ಟದ ವಾಯಿಲಿನ್‌ಗಳಲ್ಲಿ ಎದೆ ಮತ್ತು ಬೆನ್ನು ಹಲಿಗೆಗಳ ಅಂಚಿನ ಸುತ್ತಲೂ ಸಮಾನಾಂತರ ಕಪ್ಪು ಗೆರೆಗಳು ಕಂಡು ಬರುತ್ತವೆ. ಇದು ಬಣ್ಣದಲ್ಲಿ ಬರೆದ ಗೆರೆಗಳಲ್ಲ ಎದೆ ಹಲಿಗೆ ಮತ್ತು ಬೆನ್ನು ಹಲಿಗೆಗಳನ್ನು ಸೂಕ್ಷ್ಮವಾಗಿ ಕೊರೆದು ಅದರಲ್ಲಿ ಗೆರೆಯಂತೆ ಕಾಣುವ ಕಪ್ಪು ಬಣ್ಣದ ಮರದ ತುಂಡುಗಳನ್ನು ಜೋಡಿಸಿರುತ್ತಾರೆ ಇದನ್ನು ಅಲಂಕಾರಕ್ಕಾಗಿ ಮಾಡಿರುತ್ತಾರೆ ಇದಕ್ಕಿಂತ ಮುಖ್ಯವಾಗಿ ಅಂಚುಗಳನ್ನು ಬಲಪಡಿಸುವ ಸಾಧನವೂ ಹೌದು.

ಈ ಎಲ್ಲ ಹಂತದಲ್ಲಿ ನೆಕ್-ಕುತ್ತಿಗೆ ಭಾಗವನ್ನು ಜೋಡಿಸಿದಲ್ಲಿ ವಾಯಿಲಿನ್‌ನ ಮುಖ್ಯ ಭಾಗಗಳು ಸಿದ್ಧವಾದಂತೆ. ಇದನ್ನು ಸಹ ಸಾಕಷ್ಟೂ ಅನುಭವವುಳ್ಳ ಕುಶಲಕರ್ಮಿಗಳೇ ಮಾಡಬೇಕು ನೆಕ್ ಯಾವ ಕೋನದಲ್ಲಿ ನಿಲ್ಲಬೇಕೆಂಬುವುದು ಅನುಭವವೇದ್ಯವಾದದ್ದು. ನಂತರ ಫಿಂಗರ್ ಬೋರ್ಡ್-ಬೆರಳಾಡಿಸುವ ಪಟ್ಟಿ, ಬಿರಟೆಗಳ ಜೋಡಣೆ, ಟೈಲ್ ಪೀಸ್, ಬ್ರಿಡ್ಜ ಮತ್ತು ತಂತಿಗಳು ಪ್ರತಿಹಂತದಲ್ಲೂ ಬಹಳ ಸೂಕ್ಷ್ಮಮತಿಯಿಂದ ಕೆಲಸಗಳನ್ನು ನಿಭಾಯಿಸಬೇಕಾಗುತ್ತದೆ.

## ಸೌಂಡ್ ಪೋಸ್ಟ್

ವಾಯಿಲಿನ್ ವಾದ್ಯದಲ್ಲಿ ಉತ್ತಮ ಮತ್ತು ಮಧುರವಾದ ನಾದ ಹೊಮ್ಮಲು ಸೌಂಡ್ ಪೋಸ್ಟ್-ನಾದಸ್ತಂಭ ಮುಖ್ಯಭಾಗವಾಗಿದೆ ಮತ್ತು ಇದರ ಜೋಡಣೆಯು ಪ್ರಭಾವಕಾರಿಯಾಗಿದೆ. ಇದು ಸುಮಾರು ಎರಡುವರೆ ಅಂಗುಲ ಉದ್ದದ ಗುಂಡಾದ ಪೆನ್ಸಿಲ್ ಮಾದರಿಯ ಪೈನ್ ಮರದ ಕಟ್ಟಿಗೆ ಕುದುರೆಯ-ಬ್ರಿಡ್ಜ್ ಬಲಗಾಲಿನ ಹಿಂಭಾಗಕ್ಕೆ ಎದೆಹಲಿಗೆ ಮತ್ತು ಬೆನ್ನುಹಲಿಗೆಗಳ ಸಂಪರ್ಕ ಬರುವಂತೆ ಜೋಡಿಸಿರುವ ಮರದ ಭಾಗ, ಇದಕ್ಕೆ ಫ್ರೆಂಚ್ ಎಂದು ಹೆಸರು ಅಂದರೆ ವಾಯಿಲಿನ್‌ನ ಆತ್ಮ ಎಂದು. ಈ ನಾದ ಸ್ತಂಭ-ಸೌಂಡ್ ಪೋಸ್ಟನ್ನು ಜೋಡಿಸುವುದು ಬಹು ಸೂಕ್ಷ್ಮ ಮತ್ತು ಬುದ್ದಿವಂತಿಕೆಯ ಕಾರ್ಯವಾಗಿದೆ ಸರಿಯಾದ ಜಾಗದಲ್ಲಿ ಸೌಂಡ್ ಪೋಸ್ಟ್ ಜೋಡಿಸುವ ಕಾರ್ಯ ವಾಯಿಲಿನ್ ವಾದ್ಯ ರಚಿಸುವವನ, ನುಡಿಸುವವನ ಪ್ರತಿಭೆಗೆ ಸೇರಿದ ವಿಷಯವಾಗಿದೆ.

## ವಾಯಿಲಿನ್‌ಗೆ ಉಪಯೋಗಿಸುವ ವಾರ್ನಿಶ್

ಹೆಸರಾಂತ ವಾಯಿಲಿನ್ ತಯಾರಕರು ವಾಯಿಲಿನ್ ವಾದ್ಯಗಳಿಗೆ ಹಾಕಿರುವ ವಾರ್ನಿಶ್ ಸಹ ವಾಯಿಲಿನ್‌ಗಳ ಅಪ್ರತಿಮ ನಾದಕ್ಕೆ ಪೂರಕವಾಗಿದೆ ಎಂದು ನಂಬಬೇಕಾಗುತ್ತದೆ. ವಾಯಿಲಿನ್‌ಗೆ ಉಪಯೋಗಿಸುವ ವಾರ್ನಿಶ್ ತಯಾರಿಸಲು ಅವರು ಉಪಯೋಗಿಸುತ್ತಿದ್ದ ಕಚ್ಚಾವಸ್ತುಗಳು, ಯಾವ ಪ್ರಮಾಣದಲ್ಲಿ ಎಷ್ಟೆಷ್ಟು ಉಪಯೋಗಿಸಬೇಕು ಎನ್ನುವ ಅಂಶ ತಯಾರಿಸುವ ಕುಶಲಕರ್ಮಿಗಳು ಗುಟ್ಟಾಗಿ ಇರಿಸುತ್ತಿದ್ದರು. ಆದರೆ ಆ ಗುಟ್ಟು ಅವರ ಹಿಂದೆ ಹೋಗಿದ್ದು ನಿಜಕ್ಕೂ ವಿಷಾದಕರ.

## ವಾಯಿಲಿನ್ ತಯಾರಿಕೆಯ ತಜ್ಞರು

ಸತ್ಯವಾದ ಮಾತು ಎಂದರೆ ವಾಯಿಲಿನ್ ಅತಿ ಸೂಕ್ಷ್ಮವಾದ ವಾದ್ಯವಾಗಿದೆ. ವಾಯಿಲಿನ್ ತಯಾರಿಕೆಯಲ್ಲಿ ಇಟಲಿಯ ಕ್ರೆಮೋನ ಪ್ರಸಿದ್ಧಿಗೆ ಬಂದ್ದಿದ್ದು ಅಮಟಿ ವಂಶಸ್ಥರಿಂದ, ಆಂಡ್ರಿಯ ಅಮಟಿ 1510-1557 ಈತನು ಒಬ್ಬ ಶ್ರೀಮಂತ ಹವ್ಯಾಸಿ ವಾಯಿಲಿನ್ ತಯಾರಕ, ವಾಯಿಲಿನ್ ತಯಾರಿಕೆಗೆ ಬೇಕಾದ ಉತ್ತಮ ಮ್ಯಾಪಲ್ ಮರ ಹುಡುಕಲು ಆಲ್ಪ್ಸ್ ಪರ್ವತದ ಅರಣ್ಯಗಳಲ್ಲಿ ಅಲೆದಾಡಿದನಂತೆ ಈತನು ಉತ್ತಮ ಮರದ ಲಕ್ಷಣಗಳನ್ನು ಕಂಡುಹಿಡಿಯುವುದರಲ್ಲಿ ಅಗ್ರಗಣ್ಯ ಈತನು ಸೃಷ್ಟಿಸಿದ ಕಾರ್ಯಗಾರ ಮುಂದಿನ ವಾಯಿಲಿನ್ ತಯಾರಿಕೆಯ ಪೀಳಿಗೆಗೆ ಮಾದರಿಯಾಯಿತು ಈತನಿಂದ ಸ್ಫೂರ್ತಿ ಪಡೆದವರಲ್ಲಿ ಅತಿ ಪ್ರಸಿದ್ಧಿ ಪಡೆದವರಲ್ಲಿ ಗಾಸ್ಪರ್‌ಡ ಸ್ಯಾಲೋ ಮತ್ತು ಮಾಗ್ಗಿನೀ.

ನಿಕೋಲಸ್ ಅಮಾಟಿ ಇವನು ಆಂಡ್ರಿ ಅಮಾಟಿಯ ಮೊಮ್ಮಗ 80 ವರ್ಷಗಳು ಬದುಕಿ ಆ ವ್ಯಕ್ತಿ ಸ್ವತಃ ತಾನೆ ಅತ್ಯುತ್ತಮ ವಾಯಿಲಿನ್ ತಯಾರಿಸುತ್ತಿದ್ದನು ಅದಲ್ಲದೆ ಕ್ರೆಮೋನಾದಲ್ಲಿ ಮುಂದೆ ವಾಯಿಲಿನ್ ತಯಾರಿಸಲು ಕೆಲವು ವ್ಯಕ್ತಿಗಳಿಗೆ ಮಾರ್ಗದರ್ಶನ ಕೊಟ್ಟನು. ವಾಯಿಲಿನ್ ತಯಾರಿಕೆಯ ಧೃವತಾರೆ ಎಂದು ಸುಪ್ರಸಿದ್ಧನಾದ ಆಂಟೋನೋ ಸ್ಟ್ರಾಡಿವರೀಯೂ ಕೂಡ ಈತನ ಶಿಷ್ಯನು ಮತ್ತು ಸುಪ್ರಸಿದ್ದರಾದ ಆಂಡ್ರಿಯಾ ಗುರ್ನೇರಿ, ಫ್ರಾನ್ಸಿಸ್ಕೋರುಗೇರಿ ಇವರು ಸಹ ಇವನ ಶಿಷ್ಯರು.

## ಆಂಟೋನೋ ಸ್ಟ್ರಾಡಿವರೀ

ಆಂಟೋನೋ ಸ್ಟ್ರಾಡಿವರೀ ಕ್ರೆಮೋನಸ್ ಎಂಬ ಸ್ಥಳವನ್ನು ವಾಯಿಲಿನ್ ತಯಾರಿಕೆಯ ಕ್ಷೇತ್ರವನ್ನಾಗಿ ಮಾಡಲು ಕಾರಣನಾದನು. ಸ್ಟ್ರಾಡಿವರೀ ತಯಾರಿಸಿದ ವಾಯಿಲಿನ್ ವಾದ್ಯಗಳ ಸಂಖ್ಯೆ ಹೇರಳವಾದದ್ದು ಎಂದು ನಂಬಲಾಗಿದೆ ಆತನು ತಯಾರಿಸಿದ ವಾಯಿಲಿನ್ ಸುಮಾರು 2000 ಸಾವಿರ ಇರಬಹುದು ಅವುಗಳಲ್ಲಿ ಇಂದಿಗೂ ಇರಬಹುದಾದ ಸಂಖ್ಯೆ 1000 ವಾಯಿಲಿನ್, ಸೆಲ್ಲೋಗಳೂ ಸಹ ಒಳಗೊಂಡಿವೆ.

ಆಕಾಶಕ್ಕೇರಿದ ಸ್ಟ್ರಾಡಿವರೀ ಪ್ರಸಿದ್ದಿಗೆ ಮನಸೋತ ಅನೇಕ ರಾಜ ಮಹಾರಾಜರು ಅವನಿಂದ ವಾಯಿಲಿನ್‌ನು ಕೊಳ್ಳಲು ವರ್ಷಗಳವರೆಗೆ ಕಾದಿರುವ ನಿದರ್ಶನಗಳುಂಟು. ಸ್ಟ್ರಾಡಿವರೀ ವಾಯಿಲಿನ್ ತಯಾರಿಸಲು ನಾಲ್ಕರಿಂದ ಐದು ವರ್ಷಗಳು ಅವನ ಕಾಲದಲ್ಲಿ ವಾಯಿಲಿನ್ ಬೆಲೆ ನಾಲ್ಕರಿಂದ ಐದು ಪೌಂಡ್‌ಗಳು ಮತ್ತು ಸೆಲ್ಲೊವಾದ್ಯಗಳನ್ನು ಹತ್ತು ಪೌಂಡ್ ಗಳಿಗೆ ಮಾರಾಟ ಮಾಡುತ್ತಿದ್ದನು. ಸ್ಟ್ರಾಡಿವರೀ ತಯಾರಿಸಿದ ವಾಯಿಲಿನ್ ಒಂದನ್ನು ಕೆಲವು ವರ್ಷಗಳ ಹಿಂದೆ ಅಮೆರಿಕದಲ್ಲಿ ಒಂದೂವರೆ ಬಿಲಿಯನ್ ಡಾಲರ್ ಗಳಿಗೆ ಹರಾಜಿನಲ್ಲಿ ಮಾರಾಟವಾಯಿತು ಕೆಲವರಿಗೆ ಇದನ್ನು ನಂಬಲು ಅಸಾಧ್ಯವೆನ್ನಿಸಬಹುದು ಇಂದಿಗೂ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಇರುವ ಅವನ ಕೆಲವು ವಾಯಿಲಿನ್‌ನ ಕರ ಕೌಶಲದ ಕೆಲಸ ಅದ್ವಿತೀಯವಾದುದು.

ಆಂಟೋನೋ ಸ್ಟ್ರಾಡಿವರೀಯ ಹಿರಿಮೆ ಏನೆಂದರೆ ಆತನು ಆರಿಸುತ್ತಿದ್ದ ಮರ, ಉಪಯೋಗಿಸುತ್ತಿದ್ದ ವಾರ್ನಿಶ್ ಬಳಕೆಯ ಗುಟ್ಟು ಅವನ ಮಕ್ಕಳಿಗೆ ಮಾತ್ರ ಗೊತ್ತಿರುವ ವಿಷಯವಾಗಿತ್ತಂತೆ. ಆತನ ಮಕ್ಕಳೂ ಸಹ ವಾಯಿಲಿನ್ ತಯಾರಿಕೆಯಲ್ಲಿ ನಿರತ ನಿಪುಣವಂತರಾಗಿದ್ದರು. ಆದರೆ ಕ್ರಮೇಣ ದಿನಕಳೆದಂತೆ ಆತನ ವಂಶಸ್ಥರಲ್ಲಿ ಆ ಕಲೆ ನಶಿಸಿ ಹೋಯಿತು ಅವನ ಮಕ್ಕಳು ಮೊಮ್ಮಕ್ಕಳೂ ವಾರ್ನಿಶ್ ಬಗ್ಗೆ ಬರೆದಿಟ್ಟಿದ್ದ ಕರುಡು ಪ್ರತಿಯನ್ನು ಯಾರೋ ಸುಟ್ಟು ಹಾಕಿದರು ಎಂಬ ಅಪವಾದವೂ ಇದೆ. ಅಥವಾ ಬೆಂಕಿ ಅನಾಹುತಕ್ಕೆ ತುತ್ತಾದ ಅವರ ಮನೆಯ ಭಾಗ ನಾಶವಾದಾಗ ವಾರ್ನಿಶ್ ಕರುಡು ಪ್ರತಿ ನಾಶವಾಗಿರಬಹುದು.

## ಈಗಿನ ವಾಯಿಲಿನ್ ತಯಾರಿಕೆ

ಇಂದಿನ ಈ ಶತಮಾನದಲ್ಲಿ ವಾಯಿಲಿನ್ ತಯಾರಿಕೆ ಜರ್ಮನಿ, ಜೆಕೋಸ್ಲವಾಕಿಯಾ ಈ ರಾಷ್ಟ್ರಗಳಲ್ಲಿ ವಾಯಿಲಿನ್ ತಯಾರಿಕೆ ಭರದಿಂದ ಸಾಗಿದೆ. ಜಪಾನಿನಲ್ಲಿ ಸುಜೂಕಿ ಪಾಠಕ್ರಮ ಪ್ರಸಿದ್ದಿಯಾದಮೇಲೆ ಹಿಂದೆ ಇಲ್ಲದಿದ್ದ, ವಾಯಿಲಿನ್ ತಯಾರಿಕ ಉದ್ಯಮ ಅತಿ ಭರದಿಂದ ಸಾಗುತ್ತಿದ್ದು ಹಾಗೆ ಕೆಲವು ಸುಜೂಕಿ ವಾಯಿಲಿನ್‌ಗಳು ಗುಣ ಮಟ್ಟದಲ್ಲಿ ಪ್ರಸಿದ್ಧಿಯಾಗುತ್ತಿವೆ. ಈಗ ಎಷ್ಟೇ ಅತ್ಯುತ್ತಮ ವಾಯಿಲಿನ್‌ಗಳು ತಯಾರಾದರು ಅಂದಿನ ಕಾಲದ ನಿಪುಣರ ವಾಯಿಲಿನ್‌ನ ಗುಣ ಬರಲಾರದು ಎಂದು ಹೇಳಲಾಗಿದೆ. ಈಗ ಕೇವಲ ಕರಕುಶಲ ಉದ್ಯಮದಿಂದ ತಯಾರಾಗುವ ವಾಯಿಲಿನ್‌ಗಳ ಸಂಖ್ಯೆ ಕಡಿಮೆ ಹಾಗೂ ಬಹಳ ದುಬಾರಿ. ಈ ಕಾರಣದಿಂದ ಈಗ ಯಂತ್ರಗಳ ಸಹಾಯದಿಂದ ಅತಿ ದುಬಾರಿ ಇಲ್ಲದ ವಾಯಿಲಿನ್‌ಗಳು ಹೇರಳವಾದ ಸಂಖ್ಯೆಯಲ್ಲಿ ತಯಾರಾಗುತ್ತಿವೆ. ಆದರೆ ಈ ವಾಯಿಲಿನ್‌ಗಳ ಗುಣಮಟ್ಟ ಕರಕುಶಲದ ವಾಯಿಲಿನ್ ಗುಣಮಟ್ಟಕ್ಕೆ ಬರಲಾರದು ಆದರೆ ಅಭ್ಯಾಸ ಮಾಡಲಿಕ್ಕೆ ಯೋಗ್ಯವಾಗಿವೆ.

## ಭಾರತ ದೇಶದಲ್ಲಿ ವಾಯಿಲಿನ್ ತಯಾರಿಕೆ ಹಾಗೂ ಸಮಸ್ಯೆ

ನಮ್ಮ ದೇಶದಲ್ಲಿ ಸುಮಾರು ಮುವತ್ತು ನಲವತ್ತು ವರ್ಷಗಳಿಂದ ಆಯತ ಆಮದು ನಿರ್ಯಾತ (ಇಂಪೋರ್ಟ ಅಂಡ್ ಎಕ್ಸ್ ಪೋರ್ಟ್) ನಿಭಂದನೆಗಳಿಂದಾಗಿ ವಾಯಿಲಿನ್ ವಾದ್ಯಗಳನ್ನಾಗಲಿ ಅದರ ಸಲಕರಣೆಗಳನ್ನಾಗಲಿ (ಸ್ಪೇರ್ ಪಾರ್ಟ್ಸ) ವಿದೇಶದಿಂದ ಆಮದು ಮಾಡಿಕೊಳ್ಳುವುದು ಸಾಧ್ಯವಾಗಲಾರದು. ಅಮದು ಮಾಡಿಕೊಳ್ಳಲು ಅವಕಾಶ ಮಾಡಿಕೊಟ್ಟರು ಅದರ ಬೆಲೆ ಗಗನಕ್ಕೇರಿದ ಸಾವಿರಗಳಾಗ ಬಹುದು. ಈ ಎಲ್ಲ ತೊಂದರೆಗೆ ಕಾರಣ ರೂಪಾಯಿಯ ಅಪ ಮೌಲ್ಯ ಇದರಿಂದ ವಾಯಿಲಿನ್ ಅಮದು ಕೇವಲ ಶ್ರೀಮಂತರಿಗೆ ಅವರ ಕೋರಿಕೆ ಸಾಧ್ಯವಾಗಬಹುದು.

ನಮ್ಮ ಭಾರತ ದೇಶದಲ್ಲಿ ಐವತ್ತು ಅರವತ್ತು ವರ್ಷಗಳಿಂದ ವಾಯಿಲಿನ್ ತಯಾರಿಕೆ ಪ್ರಯತ್ನ ನಡೆದಿದೆ. ಮೊದಲಿಗೆ ನೋಟ, ನಾದ ಇವೆರಡರಲ್ಲೂ ಅತಿ ಶೋಚನೀಯವಾಗಿದ್ದ ಪರಿಸ್ಥಿತಿ, ಇತ್ತೀಚೆಗೆ ಬದಲಾಗಿ ನೋಟ, ನಾದ ಎರಡರಲ್ಲೂ ಉತ್ತಮಗೊಳ್ಳುತ್ತಿರುವುದು ಸಂತಸ ತರುವ ಅಂಶ ಈ ಒಂದು ಉದ್ಯಮಿಯಲ್ಲಿ ಪ್ರಗತಿ ಇಲ್ಲದಿರುವುದಕ್ಕೆ ಕಾರಣಗಗಳು.

1. ವಾಯಿಲಿನ್‌ಗೆ ಇದ್ದ ಬೇಡಿಕೆ.
2. ವಾದ್ಯಕ್ಕೆ ಬೇಕಾಗುವ ಮರ ಮತ್ತು ಇತರ ಸಲಕರಣೆಗಳ ವಸ್ತುಗಳು.
3. ಈಗ ವಾಯಿಲಿನ್ ಬೇಡಿಕೆಯಂತು ಹೆಚ್ಚುತ್ತಿರುವುದು ಸತ್ಯ. ಆದರೆ ಅದಕ್ಕೆ ಬೇಕಾಗುವ ಮರ ಮತ್ತು ಕಚ್ಚಾವಸ್ತುಗಳ ಸಮಸ್ಸೆಗಳಿಗೆ ಪರಿಹಾರ ಕಂಡುಕೊಳ್ಳಬೇಕಾಗಿದೆ.

ವಾಯಿಲಿನ್ ವಾದ್ಯ ತಯಾರಿಕೆಗೆ ಬೇಕಾಗುವ ಮರ ಪೈನ್, ಮಾಪಲ್ ಮತ್ತು ಸೈಕೋಮೋರ್‌ಗಳು ಈ ಮರಗಳು ಕೋನಿಪೊರಸ್ ಕುಟುಂಬಕ್ಕೆ ಸೇರಿದವು. ಈ ಮರಗಳು ಯುರೋಪಿನಲ್ಲಿ ಹೇರಳವಾಗಿ ಬೆಳೆಯುವ ಸಸ್ಯಗಳು ಮತ್ತು ಹಿಮಾಲಯ ತಪ್ಪಲಿನಲ್ಲಿ ಬೆಳೆಯುತ್ತಿವೆ ಎಂದು ಹೇಳುತ್ತಾರೆ ಇದರ ಸತ್ಯಾಂಶವನ್ನು ತಿಳಿಯಬೇಕಾಗುತ್ತದೆ. ಅವುಗಳನ್ನು ವಾಯಿಲಿನ್ ಉದ್ಯಮಿಗೆ ಒದಗಿಸಲು ಅರಣ್ಯ ಇಲಾಖೆಯಿಂದ ಅನುಮತಿ ಪಡೆದು ಕೊಳ್ಳುವದು ಅತಿ ಅವಶ್ಯಕ. ಇದರ ಜೊತೆಗೆ ಕಚ್ಚಾ ವಸ್ತುಗಳು ವಾರ್ನಿಶ್ ಈ ಎಲ್ಲಾ ಸಿಗುವ ಸಾಧ್ಯತೆ ಮತ್ತು ಅದರ ತಯಾರಿಕ ಸಮಸ್ಸೆಗಳನ್ನು ಪರಿಹರಿಸಲು ಸಂಶೋಧನ ಕಾರ್ಯ ಅನಿವಾರ್ಯವಾಗಿದೆ ಇಂತಹ ಸಂಶೋಧನ ಕೇಂದ್ರಗಳ ಕೆಲಸಕ್ಕೆ ಸರ್ಕಾರದ ಸಹಾಯವಂತೂ ಬೇಕೆ ಬೇಕು. ಇದರ ಜೊತೆಗೆ ಸಂಘ ಸಂಸ್ಥೆಗಳ ನೆರವು ಸಕ್ರೀಯವಾದ ಪಾತ್ರ ಅವಶ್ಯಕವಾಗಿದೆ. ಮತ್ತು ವಾಯಿಲಿನ್ ವಾದ್ಯದ ತಯಾರಿಕೆಯಲ್ಲಿ ನಿರತವಾಗಿರುವ ಉದ್ಯಮ ಕೇಂದ್ರಗಳಿಗೆ ಸಹಕಾರ ನೀಡಿ ಕಾರ್ಯವನ್ನು ಸಫಲಗೊಳಿಸುವುದು ಅಪೇಕ್ಷಣೀಯ.

## ಅಡಿ ಟಿಪ್ಪಣೆಗಳು


- **ಗಾನ ಕಲಾಮಂಜರಿ ವಾದ್ಯ ವಿಭಾಗ,** ಸಂಪುಟ-2, ಬಿ. ವಿ. ಕೆ ಶಾಸ್ತ್ರಿ ಪುಟ-211
- **ಗಾನ ಕಲಾಮಂಜರಿ** ಪುಟ – 266, 267, 268 ಎ.ವೀರಭದ್ರಯ್ಯ
- **ಗಾನ ಕಲಾಮಂಜರಿ** ವಿ.ವಿ.ಕೆ ಎಸ್. ಪುಟ – 268, 269
- **ಗಾನಮಂಜರಿ** ಪುಟ 270, 271
- **ಗಾನಮಂಜರಿ** ಸಂಪುಟ 2. ಪುಟ – 271, 272
- **ಗಾನ ಕಲಾಮಂಜರಿ** ಬಿ. ವಿ. ಕೆ. ಎಸ್ ಪಿಟೀಲು ರಚನೆ, ತಯಾರಿಕೆ – ಎ. ವೀರಭದ್ರಯ್ಯ ಪುಟ 273



ವಿದ್ಯಾನಿಧಿ VPG ಪ್ರಕಾಶನ ®
ಶ್ರೀ ಶಿವಕುಮಾರ ಏಜನ್ಸಿ®

ಶೈಕ್ಷಣಿಕ ಪುಸ್ತಕಗಳ ಪ್ರಕಾಶಕರು ಮತ್ತು ಮಾರಾಟಗಾರರು

ಸ್ಟೇಶನ್ ರೋಡ ಮತ್ತು 'ನನಸು' ಜೆ. ಟಿ. ಮಠ ರೋಡ,
ಗದಗ-582 101

ದೂರವಾಣಿ : 08372-237527, 277527

e-mail : vidyanidhiprakashana@gmail.com. www. vidyanidhionline.com

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ವಚನಗಳಲ್ಲಿ ಪಶು-ಪಕ್ಷಿ ಪರಿಕಲ್ಪನೆ

✍ **ಶ್ರೀನಿವಾಸ ಎನ್. ಹೆಚ್.,** ಪಿಎಚ್.ಡಿ., ಸಂಶೋಧನಾರ್ಥಿ, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಹಂಪಿ.
✍ **ಡಾ. ದಾಕ್ಷಾಯಣಮ್ಮ ಎಂ.,** ಸಹ ಪ್ರಾಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ನ್ಯಾಮತಿ.

ಹನ್ನೆರಡನೆಯ ಶತಮಾನದ ಬಸವಾದಿ ಶಿವಶರಣರು ನಡೆಸಿದ ವಚನ ಚಳುವಳಿಯು ಸಾಮಾಜಿಕ, ರಾಜಕೀಯ, ಆರ್ಥಿಕ – ಇನ್ನೂ ಮುಂತಾದ ದೃಷ್ಟಿಕೋನಗಳಿಂದ ಮಹತ್ವಪೂರ್ಣವಾದುದು. ಕೇವಲ ಏಕದೃಷ್ಟಿಕೋನವನ್ನಿಟ್ಟುಕೊಳ್ಳದೆ ಅತ್ಯಂತ ವೈಚಾರಿಕ ಅಂಶಗಳನ್ನು ಒಳಗೊಂಡಂತೆ ತಮ್ಮ ಭಾವಾಭಿವ್ಯಕ್ತಿಗೆ ಭಾಷೆಯನ್ನು ಸಮರ್ಥವಾಗಿ ದುಡಿಸಿಕೊಂಡಿರುವುದು ಗಮನಾರ್ಹವಾದ ವಿಚಾರವಾಗಿದೆ. ತಮ್ಮ ಅಂತರಾಳದ ತುಡಿತಗಳನ್ನು ಜನರಿಗೆ ತಲುಪಿಸುವಲ್ಲಿ ಅವರು ಬಳಸಿಕೊಂಡಿರುವ ರೂಪಕ, ಉಪಮೆ ಪ್ರತಿಮೆಗಳು ಯಾರಾನ್ನಾದರೂ ಬೆರಗು ಗೊಳಿಸುವಂತಿವೆ. ಹೀಗೆ ಅವರು ಬಳಸುವ ವೈವಿಧ್ಯತೆಯಲ್ಲಿ ಉಚ್ಚ-ನೀಚವೆನ್ನದೆ ಪಶು-ಪಕ್ಷಿಗಳನ್ನು ಬಳಸಿಕೊಂಡಿರುವುದು ಓದುಗನನ್ನು ಚಕಿತಗೊಳಿಸುವಂತಹದು. ನಮ್ಮ ಜನಪದಿಯರು ತಮ್ಮ ಕಥೆ ಮತ್ತು ಕಾವ್ಯಗಳಲ್ಲಿ ಪಶು-ಪಕ್ಷಿಗಳನ್ನು ಬಳಸಿಕೊಂಡು ಮನುಷ್ಯನ ಗುಣ ಸ್ವಭಾವಗಳನ್ನು ವಿಶ್ಲೇಷಣೆ ಮಾಡಿರುವುದು ಒಂದು ಉತ್ತಮ ನಿದರ್ಶನವಾಗಿದೆ. ಹಾಗೆಯೆ ವಚನಗಳಲ್ಲಿಯೂ ಸಹ ಪಶು-ಪಕ್ಷಿಗಳನ್ನು ಹೇಗೆ ಬಳಸಿಕೊಂಡಿದ್ದಾರೆ ಎಂದು ಹೇಳುವುದು ಈ ಲೇಖನದ ಮುಖ್ಯ ಗುರಿಯಾಗಿದೆ.

ಶೂನ್ಯ ಸಿಂಹಾಸನದ ದೊರೆಯಾದ ಅಲ್ಲಮಪ್ರಭು ತನ್ನ ಬೆಡಗಿನ ವಚನಗಳ ಮೂಲಕ ಇಷ್ಟಲಿಂಗದ ಪ್ರಕರತೆಯನ್ನು ತಿಳಿಯಲು ಮಾಮರ ಮತ್ತು ಕೋಗಿಲೆಗಳನ್ನು ಈ ಕೆಳಗಿನಂತೆ ಅನ್ಯೂನ್ಯಕರಿಸಲು ಪ್ರಯತ್ನಸಿದ್ದಾರೆ.

**"ಎತ್ತಣ ಮಾಮರ ಎತ್ತಣ ಕೋಗಿಲೆ**
**ಎತ್ತಣಿಂದೆತ್ತ ಸಂಬಂಧವಯ್ಯ**
**ಬೆಟ್ಟದ ನೆಲ್ಲಿಕಾಯಿ ಸಮುದ್ರದ ಉಪ್ಪು**
**ಎತ್ತಣಿಂದೆತ್ತ ಸಂಬಂಧವಯ್ಯ**
**ಗುಹೇಶ್ವರಲಿಂಗಕ್ಕೆಯು ಎನಗೆಯೂ**
**ಎತ್ತಣಿಂದೆತ್ತ ಸಂಬಂಧವಯ್ಯ"**

**(ವ.ಸಾ ಪು.70 ವ.245)**

ಸಂಬಂಧದ ಪಾರಕಾಷ್ಠತೆಯನ್ನು, ಇಷ್ಟಲಿಂಗದ ಪ್ರಾಪ್ತಿಯನ್ನು ಗುರುತಿಸುವ ಶೂನ್ಯ ಸಂಪಾದನೆಯ ವಚನವಿದು. ತೀರ ಸಾಮಾನ್ಯವಾದ ತಾನೆಲ್ಲಿ? ಕನಸಿನಲ್ಲಿಯೂ ಪಡೆಯಲು ಸಾಧ್ಯವಾಗದ ಇಷ್ಟಲಿಂಗವೆಲ್ಲಿ? ಎನ್ನುವ ಬಹುದೊಡ್ಡ ಆತ್ಮಪ್ರಶ್ನಾರ್ಥಕವಿದೆ. ಈ ಎರಡಕ್ಕೂ ಅರ್ಥಾತ್ ತಾರ್ಕಿಕ ಸಂಬಂಧವಿಲ್ಲ, ಆದರೆ ಇದು ಮಾನವ ನಿರ್ಮಿತವಾದುದೆಂದು ಗೋಚರವಾಗುತ್ತದೆ. ಧಾರ್ಮಿಕ ವ್ಯವಸ್ಥೆಯಲ್ಲಿಯಂತೂ ತೀರಾ ಅಸಂಭವವಾದುದೆನೊ ಎಂದು ತೋಚುತ್ತದೆ. ಆದರೆ ಭಗವಂತನೆ ನಿರ್ಮಿಸಿದಂತ ನಿಸರ್ಗದಲ್ಲಿ ಈ ರೀತಿಯ ಘಟನೆಗಳು ಕಣ್ಣ ಮುಂದೆಯೆ ಘಟಿಸುತ್ತವೆ. ನಿರ್ಜೀವವಾದ ಮಾವಿನ ಮರವನ್ನು ಹುಡುಕಿಕೊಂಡು ಕೋಗಿಲೆ ಬರುತ್ತದೆ, ಆದರೆ ಎರಡಕ್ಕೂ ಸಂಬಂಧವಿಲ್ಲ ಎಂದು ತೋಚಿದರೂ ಸಂಬಂಧ ಉಂಟಾಗಿ ಕೋಗಿಲೆಯಿಂದ ಮಾವಿನ ಮರ ಗೌರವವನ್ನು ಪಡೆದುಕೊಳ್ಳುತ್ತದೆ. ಒಂದರ್ಥದಲ್ಲಿ ಮಾಮರ-ಕೋಗಿಲೆ, ನೆಲ್ಲಿಕಾಯಿ-ಸಮುದ್ರದ ಉಪ್ಪು ಪ್ರತಿಮೆಗಳ ರೂಪದಲ್ಲಿ ಬಳಕೆಗೊಂಡಿವೆ. "ಕೊಟ್ಟ ಕುದುರೆಯನೇರಲರಿಯದೆ, ಮತ್ತೊಂದು ಕುದುರೆಯ ಬಯಸುವವರೂ ವೀರರೂ ಅಲ್ಲ, ಧೀರರೂ ಅಲ್ಲ, ಇದು ಕಾರಣ, ನೆರೆ ಮೂರುಲೋಕವೆಲ್ಲವು ಹಲ್ಲಣವ ಹೊತ್ತುಕೊಂಡು ಬಳಲುತ್ತಿದ್ದಾರೆ, ಗುಹೇಶ್ವರನೆಂಬ ಲಿಂಗವನರೆತ್ತ ಬಲ್ಲರೋ" ಸದಾವಕಾಶವನ್ನು ಕೈ ಚೆಲ್ಲುವವನ ಮನಸ್ಥಿತಿಯನ್ನು ಈ ವಚನದಲ್ಲಿ ಹೇಳಲಾಗಿದೆ. ಕೊಟ್ಟಿರುವ ಕುದುರೆಯನ್ನು ಹತ್ತುವ ಶಕ್ತಿಯಿಲ್ಲದೆ ಬೇರೊಂದು ಕುದುರೆ ಹುಡುಕಿಕೊಂಡು ಹೋಗುವವರನ್ನು ವೀರರೆಂದು ಕರೆಯಲು ಸಾಧ್ಯವಿಲ್ಲ. ಏಕೆಂದರೆ ಅವರು ತಾವೆ ಕುದುರೆಯ ಜೀನನ್ನನ್ನು ಹೊತ್ತುಕೊಂಡು ಹತ್ತಬೇಕೆಂದಿರುವ ಕುದುರೆಯನ್ನು ಜೀವನವೆಲ್ಲ ಹುಡುಕಿಕೊಂಡು ತಿರುಗುತ್ತಿರುತ್ತಾರೆ. ಅವರಿಗೆ ಬೇಕಾದ ಕುದುರೆ ಈ ಲೋಕದಲ್ಲಿ ಸಿಗುವುದೆ ಇಲ್ಲ, ಅವರಿಗೆ ಮೂಲತಃ ಕುದುರೆಯನ್ನು ಹತ್ತುವ ಸಾಮರ್ಥ್ಯವೆ ಇಲ್ಲವೆನೊ ಎನ್ನುವ ಅನುಮಾನವಿರುತ್ತದೆ. ಕುದುರೆ ಹೊರುವ ಜೀನಿಗೆ ತಾವೆ ಕುದುರೆಯಾಗಿರುತ್ತಾರೆ. ಇಲ್ಲಿ ಪಲಾಯನವಾದದ ವಿಡಂಬನೆಯನ್ನು ಕಾಣಬಹುದಾಗಿದೆ. ಮನುಷ್ಯನ ಎಲ್ಲ ಕ್ಷೇತ್ರಗಳಿಗೂ ಬಹಳ ಅದ್ಭುತ ರೀತಿಯಲ್ಲಿ ಅನ್ವಯವಾಗುವಂತಹ ವಚನವಿದು. ಕುದುರೆ-ಹಲ್ಲಣ-ಸವಾರ ಈ ಪ್ರತಿಮೆಗಳಲ್ಲಿ ಅಲ್ಲಮ ತನ್ನ ಆಲೋಚನೆಗಳನ್ನು ಹುದುಗಿಸಿರುವ ರೀತಿ ಅವನಿಂದಲೆ ಮಾತ್ರ ಸಾಧ್ಯ ಎನ್ನುವಂತಿದೆ.

**"ಹುಲಿಯ ಬೆನ್ನಲಿ ಒಂದು ಹುಲ್ಲೆ ಹೋಗಿ**
**ಮೇದು ಬಂದೆನೆಂದಡೆ, ಇದ ಕಂಡು ಬೆರಗಾದೆ**
**ರಕ್ಕಸಿಯ ಮನೆಗೆ ಹೋಗಿ**
**ನಿದ್ರೆಗೆಯ್ದು ಬಂದೆನೆಂದಡೆ, ಇದ ಕಂಡು ಬೆರಗಾದೆ**
**ಜವನ ಮನೆಗೆ ಹೋಗಿ ಸಾಯದೆ ಬದುಕಿದೆನೆಂದೆಡೆ**
**ಇದ ಕಂಡು ಬೆರಗಾದೆ ಗುಹೇಶ್ವರ"**

**(ವ.ಸಾ.ಸಂ ಪು.65 ವ.82)**

ಈ ವಚನದಲ್ಲಿ ಜಗತ್ತನ್ನು ನುಂಗುತ್ತಿರುವ ಕಾಲವನ್ನು ಹುಲಿ ಸಂಕೇತಿಸುವುದನ್ನು ಕಾಣಬಹುದು ಮತ್ತು ಜೀವವನ್ನು ಹುಲ್ಲೆ(ಜಿಂಕೆ)ಗೆ ಹೊಲಿಸಲಾಗಿದೆ. ಕಾಲವ್ಯಾಘ್ರನ ಬಳಿವಿಡಿದು ಸಂಸಾರ ವಿಷಯವನ್ನು ಸವಿಯುತ್ತಿರುವ ಸ್ಥಿತಿಯನ್ನು ವಚನ ಸ್ಪಷ್ಟಪಡಿಸುತ್ತದೆ. ಮಾಯಾಪಾಶ ಅಥವಾ ರಕ್ಕಸಿಯ ಮನೆ ಹಾಗೂ ಜನನ-ಮರಣ ಚಕ್ರವನ್ನು(ಜವನದ ಮನೆ) ಮೀರಿ ನಿಂತ ಸ್ಥಿತಿಯನ್ನು ವಿವರಿಸಲಾಗಿದೆ. "ಕೋಣನ ಕೊಂಬಿನ ತುದಿಯಲ್ಲಿ, ಏಳುನೂರೆಪ್ಪತ್ತು ಸೇದೆಯ ಬಾವಿ, ಬಾವಿಯೊಳಗೊಂದು ಬಗರಿಗೆ, ಬಗರಿಯೊಳಗೊಬ್ಬ ಸೂಳೆ ನೋಡಯ್ಯ! ಆ ಸೂಳೆಯ ಕೊರಳಲ್ಲಿ ಏಳುನೊರಿಪ್ಪತ್ತಾನೆ ನೇರಿತ್ತ ಕಂಡೆ ಗುಹೇಶ್ವರ" ಕೋಣ ಜೀವ ಪಶುವನ್ನು ಸೂಚಿಸುತ್ತದೆ. ಕೋಡುಗಳು ಜೀವಪಶುವಿನಲ್ಲಿರುವ ಅಹಂಕಾರ, ಮಮಕಾರಗಳನ್ನು ಸೂಚಿಸುತ್ತವೆ. ಈ ಅಹಂಕಾರ-ಮಮಕಾರಗಳು ದೇಹವನ್ನೆಲ್ಲಾ ವ್ಯಾಪಿಸಿಕೊಂಡಿವೆ. ಹೀಗೆ ವ್ಯಾಪ್ತಿಗೊಂಡ ನೆಲೆಯನ್ನು 'ಏಳನೂರ ಎಪ್ಪತ್ತೈದು ಸೇದೆಯ ಬಾವಿ' ಸೂಚಿಸುತ್ತದೆ. ಈ ಎಲ್ಲಕ್ಕೂ ಮಧ್ಯೆ ತನು ಅಥವಾ ದೇಹ ಇದೆ. ಅದನ್ನು ಮಾಯ ಅಥವಾ ಸೂಳೆ ಆವರಿಸಿಕೊಂಡಿದೆ. ಜೀವದ ಅಹಂಕಾರವೆ ಮೊದಲಾದ ವಿಕಾರ, ವಿಕೃತಿಗಳು ಮಾಯೆಯ ಕೊರಳಿಗೆ ಅಲಂಕಾರಗಳಾಗಿವೆ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

**"ಗಿಳಿಯ ಹಂಜರವಿಕ್ಕಿ**
**ಸೊಡರಿಂಗೆಣ್ಣೆಯನೆರೆದು ಬತ್ತಿಯನಿಕ್ಕಿ**
**ಬರವ ಹಾರುತ್ತಿದ್ದೆನೆಲಗವ್ವ**
**ತರುಗೆಲೆ ಗಿರುಕೆಂದಡೆ ಹೊರಗನಾಲಿಸುವೆ**
**ಅಗಲಿದೆನೆಂದೆನ್ನ ಮನ ಧಿಗೆಲೆಂದಿತ್ತೆಲೆಗವ್ವಾ**
**ಕೂಡಲ ಸಂಗನ ಶರಣರು ಬಂದು**
**ಬಾಗಿಲ ಮುಂದೆ ನಿಂದು**
**ಶಿವಾ ಎಂದರೆ ಸಂತೋಷಬಟ್ಟೆನೆಲಗವ್ವಾ"**

**(ವ.ಸಾ ಪು.146 ವ.496)**

ಬಸವಣ್ಣನವರು ತಮ್ಮ ಚಿಕ್ಕ ಅಪೂರ್ವ ಅನುಭವವನ್ನು ತುಂಬಾ ಅದ್ಭುತವಾದ ರೀತಿಯಲ್ಲಿ ಚಿತ್ರಿಸುವ ವಚನವಿದು. ಪ್ರೇಯಸಿಯು ಸಂಜೆ ಗಿಳಿಯನ್ನು ಪಂಜರಕ್ಕೆ ಸೇರಿಸಿ, ದೀಪಕ್ಕೆ ಎಣ್ಣೆ ಬತ್ತಿ ಹಾಕಿ, ಅದನ್ನು ಹಚ್ಚಿ ಸರಿಪಡಿಸಿ, ತಾನು ಅಲಂಕರಿಸಿಕೊಂಡು ಪ್ರಿಯನಿಗಾಗಿ ಕಾಯುತ್ತಿರುವ ಒಂದು ಅತ್ಯಂತ ಭಾವನಾ ಪ್ರಧಾನವಾದ ಸನ್ನಿವೇಶವಿದೆ. ಪ್ರಿಯ ಬರುವನೋ, ಇಲ್ಲವೋ ಎಂಬ ಕಾತರ ಮತ್ತು ಕಳವಳಗಳು ಬೇರೆ; ಒಂದು ರೀತಿಯ ಮೌನವು ಎಲ್ಲ ಕಡೆಗೂ ಆವರಿಸಿದೆ. ಹೊರಗೆ ತರಗೆಲೆ ಗಿರಕೆಂದರೂ ಪ್ರಿಯಕರ ಬಂದನೆನೋ ಎಂದು ಅವಳು ಮೈಯಲ್ಲ ಕಿವಿಯಾಗಿ, ಕಣ್ಣಾಗಿ ಕಾಯುತ್ತಾಳೆ. ಅವನು ನನ್ನನ್ನು ಎಲ್ಲಿ ಕೈಬಿಟ್ಟನೋ ಎಂಬ ಭಯವಂತೂ ಅವಳನ್ನು ಕಾಡದೆ ಬಿಡಲಾರದು. ಒಂದು ರೀತಿಯ ಅನೈತಿಕ ಸಂಬಂಧವಾದರೂ, ಸುಕುಮಾರವಾದ ಸಂದರ್ಭ ಭಾವವಾಗಿದೆ. ಇದನ್ನು ಬಸವಣ್ಣನವರು ಉಪಯೋಗಿಸಿದ ರೀತಿ ಭಿನ್ನವಾದುದು. ತಾನೇ ಆ ಪ್ರೇಯಸಿ, ಬರಲಿರುವ ಪ್ರಿಯ ಭಗವಂತನಲ್ಲ, ಶಿವಶರಣರು. ಅವರ ಬರುವಿಕೆಗಾಗಿ ಬಸವಣ್ಣ ಕಾಯುತ್ತ ನಿರೀಕ್ಷೆಯ ಮೊನೆಯ ಮೇಲೆ ನಿಂತಿರುವ ಅಂತಹ ಕ್ಷಣಗಳನ್ನು ಮೇಲಿನ ರೀತಿಗಿಂತ ಸುಂದರವಾಗಿ, ಸೂಕ್ಷ್ಮವಾಗಿ ಚಿತ್ರಿಸುವುದು ಅಸಾಧ್ಯವೋ ಎನ್ನುವಷ್ಟು ಈ ವಚನ ಪೂರ್ಣವಾಗಿದೆ. "ಆನೆ ಅಂಕುಶಕ್ಕಂಜುವುದೆ, ಅಯ್ಯಾ ಮಾಣದೆ ಸಿಂಹದ ನಖವೆಂದು ಅಂಜುವುದಲ್ಲದೆ......." ಮದೋನ್ಮತ್ತವಾದ ಆನೆಯು ಮಾವುತನ ಕೈಯಲ್ಲಿನ ಅಂಕುಶವನ್ನು ಸಿಂಹದ ಚೂಪಾದ ಉಗುರೆಂದಂಜುದಲ್ಲದೆ ಅದು ಅಂಕುಶಕ್ಕಂಜುವುದೆ? ಅದರಂತೆಯೆ ನಾನು ಕೂಡ ಸಕಲ ಜೀವಿಗಳಲ್ಲಿ ದಯಾ ಭರಿತವಾದ ಕಾರಣ ಶಿವನೆ ನಿಜಗಂಜುವೆಲ್ಲದೆ, ರಾಜಮದದಿಂದ ಕೂಡಿದ ಭೂಪತಿಯಾದ ಈ ಬಿಜ್ಜಳನಿಗಂಜುವುದೇ? ಎಂದು ಬಸವಣ್ಣನವರು ಈ ವಚನದಲ್ಲಿ ಪ್ರಶ್ನಾರ್ಥಕವಾಗಿಯೆ ರಾಜಪ್ರಭುತ್ವವನ್ನು ಪ್ರಶ್ನಿಸುತ್ತಾರೆ. ಅಂತೆಯೆ ಮುಂದುವರೆದು.. 'ವಾಧ್ಯನೊಂದು ಮೊಲನ ತಂದಡೆ ಸಲುವ ಹಾಗಕ್ಕೆ ಬಿಲಿವರಯ್ಯ, ನೆಲನಾಳ್ವನ ಹೆಣನೆಂದಡೆ ಒಂದಡಕೆಗೆ ಕೊಂಬವರಿಲ್ಲ ನೋಡಯ್ಯ' ಎಂದೂ ರಾಜತ್ವದ ಕನಿಷ್ಟತೆಯ ಬಗ್ಗೆ ಮಾತಾನಾಡುತ್ತಾರೆ. ಬಹುತೇಕ ವಚನಕಾರರು ರಾಜರನ್ನು ಆಶ್ರಯಿಸಿರಲಿಲ್ಲ. ಅವರು ರಾಜತ್ವವನ್ನು ತೆಗಳಿದರೂ ಅದು ಅವರ ರಾಜಕೀಯ ಧೋರಣೆಯಾಗದೆ ರಾಜನನ್ನು ಮಾನವನಂತೆ ನೋಡುವ ಭಾವನೆಯಾಗಿತ್ತು ಎಂದು ಪರಿಭಾವಿಸಬೇಕಾಗುತ್ತದೆ.

**"ಹಬ್ಬಕ್ಕೆ ತಂದ ಹರಕೆಯ ಕುರಿ**
**ತೋರಣಕ್ಕೆ ತಂದ ತಳಿರ ಮೆಯಿತ್ತು**
**ಕೊಂದಹರೆಂಬುದನರಿಯದೆ**
**ಬೆಂದೊಡಲ ಹರೆಯ ಹೋಯಿತ್ತು**
**ಅಂದಂದೆ ಹುಟ್ಟತ್ತು, ಅಂದಂದೆ ಹೊಂದಿತ್ತು**
**ಕೊಂದವರುಳಿದರೆ ಕೂಡಲ ಸಂಗಮದೇವಾ?"**

**(ವ.ಸಾ ಪು.296 ವ.996)**

ಈ ವಚನದಲ್ಲಿ ಊರ ಕ್ಷುದ್ರ ದೇವತೆಗೆ ಹರಕೆ ಹೊತ್ತು ಬಲಿ ಕೊಡಲು ತಂದ ಹರಕೆಯ ಕುರಿಯು ತನ್ನನು ಬಲಿ ಕೊಡುವ ಸಮಾರಂಭಕ್ಕೆ ಅಲಂಕಾರಕ್ಕಾಗಿ ಕಟ್ಟಿದ ತೋರಣದ ತಳಿರಿನ ಹಸಿರು ತಿನ್ನುತ್ತಲಿದೆ, ಕೇವಲ ಒಂದಿಷ್ಟು ಸಮಯದಲ್ಲಿ ತನ್ನನು ಕೊಂದು ಬಿಡುವರೆಂಬುದನ್ನು ಅರಿಯದೆ ಹಸಿವಿನಿಂದ ಬೆಂದ ಹೊಟ್ಟೆಯನು ತುಂಬಿಸಲು ಹೊಯಿತ್ತಲ್ಲ. ಆದರೆ ಆ ಮುಗ್ಧ ಪ್ರಾಣಿ ಅಂದೊಂದು ದಿನ ಹುಟ್ಟಿತ್ತು, ಮತ್ತೊಂದು ದಿನ ಬಲಿಯಾಗಿ ಹೋಗಿತ್ತು. ಆದರೆ ಆ ಪ್ರಾಣಿಯನು ಕೊಂದ ಮಾನವರು ಉಳಿದಿರುವರೆ ದೇವಾ..? ಎಂದು ಬಸವಣ್ಣನವರು ಕೆಟ್ಟ ಸಾಮಾಜಿಕ ಸ್ಥಿತಿಯನ್ನು ಕಟ್ಟಿಕೊಟ್ಟಿದ್ದಾರೆ. "ಒಂದು ಮೊಲಕ್ಕೆ ನಾಯನೊಂಬತ್ತು ಬಿಟ್ಟಂತೆ, ಎನ್ನ ಬಿಡು ತನ್ನ ಬಿಡೆಂಬುದು ಕಾಯ ವಿಕಾರ.."(ವ.ಸಾ.304) ಬೇಟೆಗಾರನು ಒಂದು ಮೊಲವನ್ನು ಪಡೆಯಲು ಒಂಬತ್ತು ನಾಯಿಗಳನ್ನು ಅದರ ಹಿಂದೆ ಬಿಟ್ಟಂತೆ, ಮರವೆಯ ಮಾಯೆಯ ಜೀವ ಭಾವದ ಭ್ರಮೆಯಲ್ಲಿಪ್ಪ ನನ್ನನ್ನು ತನ್ನಧೀನ ಪಡಿಸಿಕೊಳ್ಳಲು ಮನ ವಿಕಾರವೆಂಬ ಅಂತಃಕರಣ ಚತುಷ್ಟಯಗಳ ವಿಕೃತಿ ಮತ್ತು ತನುವಿಕಾರವೆಂಬ ಪಂಚ ಜ್ಞಾನೇಂದ್ರಿಯಗಳೆಂಬ ಒಂಬತ್ತು ವಿಷಯಾಸಕ್ತ ನಾಯಿಗಳನ್ನು ಬಿಟ್ಟರೆ? ಈ ಕರುಣೇಂದ್ರಿಯಗಳೆಂಬ ಸೊಣಗ ನಾಯಿಗಳು ನಿನ್ನಂಶಿಕನಾದ ನನ್ನನ್ನು ವಿಷಯಾಸಕ್ತಿಯಿಂದ ಮುಚ್ಚಿ ಕಳಂಕಗೊಳಿಸುವ ಮುನ್ನವೆ ನನ್ನ ಮನವು ನಿಮ್ಮಲ್ಲೊ ಒಡವೆರೆಯಲಿ ದೇವಾ! ಎಂದು ಪ್ರಶ್ನಿಸುತ್ತಾರೆ. "ಕಾಗೆ ವಿಷ್ಟಿಸುವ ಹೊನ್ನ ಕಳಸವಹುದರಿಂದ, ಒಡೆಯರು ಜೋಗೈಸುವ.." ದೇಗುಲದ ಮೇಲಿನ ಬಂಗಾರದ ಕಳಸದ ಮೇಲೆ ಕುಳಿತು ಕಾಗೆ ಕಲುಸಿತಗೊಳಿಸುವಂತೆ, ಎನ್ನನ್ನು ಸರ್ವರಲ್ಲಿ ಶ್ರೇಷ್ಠನನ್ನಾಗಿ ಮಾಡದಿರು, ಅದಕ್ಕಿಂತಲೂ ಅಧಿಕವಾಗಿ ಶರಣರ ಚರಣಕ್ಕೆ ಚರ್ಮದ ಚರಜೋಡುಗಳನ್ನಾಗಿ ಮಾಡು ತಂದೆ, ನಿಮ್ಮನ್ನು ನಾನು ಸೆರಗೊಡ್ಡಿ ಬೇಡುಕೊಳ್ಳುವೆನು ಎಂಬ ವಿನಂತಿಯನ್ನು ಕಾಣಲಾಗುತ್ತದೆ.

**"ಕಾಗೆ ಒಂದಗುಳ ಕಂಡೆಡೆ**
**ಕರೆಯದೆ ತನ್ನ ಬಳಗವನು?**
**ಕೋಳಿ ಒಂದು ಕುಟುಕು ಕಂಡರೆ**
**ಕೂಗಿ ಕರೆಯದೆ ತನ್ನ ಕುಲವನೆಲ್ಲವ**
**ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದಡೆ**
**ಕಾಗೆ ಕೋಳಿಗಿಂತ ಕರಕಷ್ಟ**
**ಕೂಡಲಸಂಗಮದೇವಾ"**

**(ವ.ಸಾ ಪು.113 ವ.384)**

ಮಾನವನು ತನಗಿಂತ ಕನಿಷ್ಟನೆಂದು ಭಾವಿಸಿರುವ ಕಾಗೆಯೂ ಕೂಡ ಎಲ್ಲಾದರೂ ಒಂದಗುಳಿನಷ್ಟು ಆಹಾರ ಕಂಡೊಡನೆ ಕಾ..ಕಾ.. ಎಂದು ತನ್ನ ಬಳಗವನೆಲ್ಲ ಕರೆದು ಕೂಡಿ ಹಂಚಿ ತಿನ್ನುವುದಿಲ್ಲವೆ? ಅದೇ ತೆರನಾಗಿ ಕೋಳಿಯೂ ಕೂಡ ಒಂದು ಕುಟುಕಿನಷ್ಟು ಆಹಾರ ಕಂಡೊಡೆನೆ ಕೊಕೊಕ್ಕೋ... ಎಂದು ತನ್ನ ಕುಲವನ್ನೆಲ್ಲ ಕರೆದು ಹಂಚುಣ್ಣುವುದಿಲ್ಲವೆ? ಇದನರಿತ ಮಾನವನು ಶಿವತತ್ವದಿಂದ ಉದಯವಾದ ಮಾನವ ಮೊದಲುಗೊಂಡು ಸಕಲ ಜೀವಾತ್ಮರಲ್ಲಿ ಸಮಭಾವ ಕಂಡು, ಸರ್ವವೂ ಶಿವನ ಭಕ್ತಿಗಳೆಂದು ಭಾವಿಸಿ, ತನ್ನಲಿರುವುದನ್ನು ಹಂಚುಣ್ಣುವ ಪರಿಪಾಠವನ್ನು ಕಲಿಯುದಿದ್ದರೆ ಆ ಕಾಗೆ ಕೋಳಿಗಿಂತಲೂ ಕನಿಷ್ಟವೆನಿಸುವವೆಂಬುದು ತಿಳಿಯುತ್ತದೆ. "ಕುದುರೆ ಸತ್ತಿಗೆಯವರ ಕಂಡಡೆ ಹೊರಳಿ ಬಿದ್ದು ಕಾಲ ಹಿಡಿದರು, ಬಡಭಕ್ತರು ಬಂದಡೆ ಎಡೆಯಿಲ್ಲ ಅತ್ತ ಸಾಗಿರೆಂಬರು.." ಜಂಗಮವೆಂದು ದೊಡ್ಡ ಕುದುರೆಯನೆರಿಯೊ ಅಥವಾ ಪಲ್ಲಕ್ಕಿ ಏರಿಯೊ ಬಂದವರನು ಕಂಡೊಡನೆ ದೊಡ್ಡ ಜಂಗಮವೆಂದು ಹೊರಳಿ ಸಾಷ್ಟಾಂಗ ನಮಸ್ಕಾರದಿಂದ ಪಾದವ ಹಿಡಿಯುವರು. ಹಣವಿಲ್ಲದ ಬಡಭಕ್ತರು ಬಂದರೆ ಜಂಗಮವೆಂದು ಭಾವಿಸದೆ, ತಾತ್ಸಾರದಿಂದ ಇಲ್ಲಿ ಸ್ಥಳವಿಲ್ಲ ಆ ಕಡೆ ನಡೆರೆಂದು ಕಳಿಸುವರು. ಇಂಥಹ ಆಡಂಬರ ವೈಭವ ಪ್ರಿಯರಾದವರಿಗೆ ಜಗದೊಡೆಯನಾದ ಪರಶಿವನು ಅಧೋಗತಿಗೆ ತಳ್ಳಿ, ಆಚಾರವೆಂಬ ಮೂಗಕೊಯ್ಯದೆ ಬಿಡುವನೆ? ಎಂದು ಬಸವಣ್ಣನವರು ಪ್ರಶ್ನಿಸುತ್ತಾರೆ. "ನಶ್ವರ ದೇಹ ಮೋಹ ಸಂಸಾರ, ಹಂಜರ ಬಲ್ಲಿತ್ತೆಂದು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಅಂಜದೆ ಓದುವ ಗಿಳಿಯೇ.....?" ಪಂಚ ಮಹಾಭೂತಗಳಿಂದಾದ ನಶ್ವರವಾದ ದೇಹವೆಂಬ ಗೂಡು ಭದ್ರ ಮತ್ತು ಶಾಶ್ವತವಾಗಿದೆ ಎಂದು ಭ್ರಮಿಸಿ ಮುಪ್ಪು ಮರಣಾದಿಗಳಿಗೆ ಅಂಜದೆ, "ದೇಹೋಹಂ" ಎಂದು ಓದುವ ಜೀವಾತ್ಮನೆಂಬ ಗಿಳಿಯೆ ಎಂದೆಂದೂ ನಾನು ಕಾಲಕಾಮಾದಿ ಗಳಿಂದ ನಾಶವಾಗದೆ ದೇಹ ಸಂಬಂಧಿಯಾಗಿಯೆ ನಾನಿರುವೆಂದು ನಿನ್ನ ಮನದಲ್ಲಿ ಪ್ರಾಪಂಚಿಕ ವೈಭವದ ಆಸೆಯ ಗೋಪುರವನ್ನೆ ಕಟ್ಟಿಕೊಂಡಿದೆಯಲ್ಲ, ಅಳಿವ ದೇಹ ಕರಣೇಂದ್ರಿಯಗಳ ವಿಷಯ ಪ್ರಪಂಚವು ನಶ್ವರವಾಗಿದ್ದರೂ ಅದೆ ಶಾಶ್ವತವಾಗಿದೆ ಎಂಬಂತೆ ತೋರುವ ಮಾಯಾ ಮಂಜರವು(ಬೆಕ್ಕು) ನಿನ್ನ ನಿಜ ಸ್ವರೂಪವನ್ನೆ ಕೊಲ್ಲುವಾಗ ನಿನ್ನ ದೇಹವೆಂಬ ನಶ್ವರ ಗೂಡು ನಿನ್ನನ್ನು ಕಾಯುವುದಿಲ್ಲ. ಪರಶಿವಲಿಂಗ ದೇವನೆ ನಿನ್ನನ್ನು ತನ್ನಲ್ಲಿ ಸಮರಸಗೊಳಿಸಿಕೊಂಡು ತನ್ನಲ್ಲಿರಿಸಿಕೊಳ್ಳುವನೆಂಬುದು ಈ ವಚನದಲ್ಲಿನ ತಾತ್ಪರ್ಯವಾಗಿದೆ. ಅಕ್ಕಮಹಾದೇವಿ ತನ್ನ ಬಹುತೇಕ ವಚನಗಳಲ್ಲಿ ತನ್ನ ಆತ್ಮಸಂಗಾತಿಯನ್ನು ಹುಡುಕುವ ಪರಿಯನ್ನು ಕಾಣಬಹುದು.

**"ಅಳಿ ಸಂಕುಳವೆ ಮಾಮರವೆ ಬೆಳುದಿಂಗಳೆ ಕೋಗಿಲೆಯೆ**
**ನಿಮ್ಮನೆಲ್ಲರನೂ ಒಂದು ಬೇಡುವೆನು**
**ಎನ್ನೊಡೆಯ ಚೆನ್ನಮಲ್ಲಿಕಾರ್ಜುನದೇವ ಕಂಡಡೆ**
**ಕರೆದು ತೋರಿರೆ"**

**(ವ.ಸಾ ಪು.33 ವ.113)**

**"ಚಿಲಿಮಿಲಿ ಎಂದೋದುವ ಗಿಳಿಗಳಿರಾ**
**ನೀವು ಕಾಣಿರೆ ನೀವು ಕಾಣಿರೆ**
**ಸರವೆತ್ತಿ ಪಾಡುವ ಕೋಗಿಲೆಗಳಿರಾ**
**ನೀವು ಕಾಣಿರೆ ನೀವು ಕಾಣಿರೆ**
**ಎರಗಿ ಬಂದಾಡುವ ತುಂಬಿಗಳಿರಾ**
**ನೀವು ಕಾಣಿರೆ ನೀವು ಕಾಣಿರೆ**
**ಕೊಳನತಡಿಯೊಳಾಡುವ ಹಂಸಗಳಿರಾ**
**ನೀವು ಕಾಣಿರೆ ನೀವು ಕಾಣಿರೆ**
**ಗಿರಿ ಗಂಹ್ವರದೊಳಾಡುವ ನವಿಲುಗಳಿರಾ**
**ನೀವು ಕಾಣಿರೆ ನೀವು ಕಾಣಿರೆ**
**ಚೆನ್ನಮಲ್ಲಿಕಾರ್ಜುನನೆಲ್ಲಿರ್ದಿಹನೆಂದು ಹೇಳಿರೆ"**

**(ವ.ಸಾ ಪು.154 ವ.521)**

ಅಕ್ಕಮಹಾದೇವಿಯ ಈ ವಚನಗಳಲ್ಲಿ ಗಿಳಿ, ಕೋಗಿಲೆ, ಭೃಂಗ, ಹಂಸ, ನವಿಲುಗಳು ಸಂತೋಷದಿಂದ ಗೀತೆಗಳನ್ನು ಹಾಡುತ್ತ, ಕುಣಿಯುತ್ತ, ನಲಿಯುತ್ತ ಸಂಭ್ರಮಗೊಳ್ಳುತ್ತ ಆ ಭಗವಂತನನ್ನು ಕಾಣುತ್ತಿವೆಯಲ್ಲ..! ಅರಣ್ಯದ ಪಕ್ಷಿಗಳಿಗೆಲ್ಲ ಗೋಚರವಾಗಿ ನನಗೆ ಮಾತ್ರ ಆಗೋಚರವಾಗಿ ಕೋಟಲೆಗೊಳಿಸುತ್ತಿರುವುದು ನ್ಯಾಯವೆ ಚೆನ್ನಮಲ್ಲಿಕಾರ್ಜುನಾ..? ಎಂದು ತನ್ನ ಸಂಗಾತಿ ಹುಡುಕುವ ಮತ್ತು ಹುಡುಕಿಸುವುದನ್ನು ಕಾಣಬಹುದು. ಚೆನ್ನಬಸವಣ್ಣ ಬಸವಣ್ಣನವರ ಸೋದರಳಿಯ ಜನಸಾಮನ್ಯರ ಭಾಷೆ ತನ್ನ ವಚನಗಳ ಅಭಿವ್ಯಕ್ತಿ ಭಾಷೆಯನ್ನಾಗಿ ಮಾಡಿಕೊಂಡು ವಚನಗಳನ್ನು ರಚನೆ ಮಾಡಿದವನು. ತನ್ನ ಬಹುತೇಕ ವಚನಗಳಲ್ಲಿ ಸಾಮಾನ್ಯ ಜನರ ಜೀವನ ಕ್ರಮ, ಅವರ ಜೀವನ ದರ್ಶನ ಮತ್ತು ತನ್ನ ಭಾವಗ್ರಹಣವನ್ನು ಚಿತ್ರಿಸುತ್ತಾನೆ.

**"ಗುಬ್ಬಿ ಹೆರರ ಮನೆಯ ತನ್ನ ಮನೆ ಎಂಬಂತೆ**
**ಧರೆ ಧನ ವನಿತೆಯರು ಎನ್ನವರು ತನ್ನವರೆಂದು**
**ಹೋರಿ ಹೋರಿ ಸಾಯುತ್ತಿದೆ ಜೀವ!**
**ಸರ್ವಕರ್ತ ಕೂಡಲಸಂಗಯ್ಯನೊಬ್ಬನೆ**
**ಎಂದರಿಯದೆ ಕೆಟ್ಟರು"**

**(ವ.ಸಾ ಪು.41 ವ.66)**

ಈ ವಚನದಲ್ಲಿ ಸಾಂಸಾರಿಕ ತೊಳಲಾಟದ ಅರ್ಥರಾಹಿತ್ಯವನ್ನು ಕಣ್ಣಿಗೆ ಕಟ್ಟುವಂತೆ ಬರೆಯಲಾಗಿದೆ. ಶಿವಜ್ಞಾನವೆಂಬುದು ಸುಲಭವಾಗಿ ಸರ್ವರಿಗೂ ಸಿಗುವಂತಹದಲ್ಲ. ಹಾಗೊಂದು ವೇಳೆ ದೊರೆತರೆ ಪ್ರಪಂಚ ನಡೆಯುವುದಾದರೂ ಹೇಗೆಂಬ ಚಿಂತನೆ ಚೆನ್ನಬಸವಣ್ಣನದ್ದು. ಅನುಭವದ ಗಮ್ಯತೆಯನ್ನು, ಅರಿವಿನ ವಿಶ್ರಾಮವನ್ನು ಅರಸುವ ಚೆನ್ನಬಸವಣ್ಣ 'ಶಿವ ಲಿಂಗಾರ್ಚನೆ'ಯಲ್ಲಿ ಅಪರಿಮಿತ ಆನಂದವನ್ನು ಅನುಭವಿಸುವ ಶಿವಶರಣನಾಗಿ ಕಾಣುತ್ತಾನೆ. "ಒಂದು ಕೋಳಿ ಕೂಗುತ್ತದೆ ಇರುಳು ಹಗಲೆನ್ನದೆ, ಅದನರಿಯರಲ್ಲಾ ಮರ್ತ್ಯದ ಗಣಂಗಳು, ಅರಿದಡೆ ಭವ ಬಂಧವಿಲ್ಲ, ಮರೆದಡೆ ಜನನ ಮರಣಕ್ಕಳವಿಲ್ಲ, ಕಪಿಲಸಿದ್ಧ ಮಲ್ಲಿಕಾರ್ಜುನಾ" 'ಕೋಳಿ'ಯ ಕೂಗನ್ನು ಪ್ರಣಯಕ್ಕೆ ಸಂಕೇತ ಮಾಡಲಾಗಿದೆ. ಪ್ರಣಯವನ್ನು ತಿಳಿಯುವುದರ ಮೂಲಕ ಭವ ಬಂಧನದಿಂದ ಹೊರಗೆ ಬರಲು ಸಾಧ್ಯವಿದೆ. ಅದನ್ನು ತಿಳಿದರೆ ಹುಟ್ಟು, ಸಾವುಗಳ ಬಂಧನವಿಲ್ಲ. ಕೋಳಿಯ ಕೂಗು ಇವೆಲ್ಲವನ್ನೂ ಮೀರಿ ನಿರಂತರತೆಯನ್ನು ಹೊಂದಿದೆ. ಸಿದ್ಧರಾಮಯ್ಯನ ಈ ವಚನದಲ್ಲಿ ಆತ್ಮಸಾಕ್ಷಿಗೆ ಪರ್ಯಾಯವಾಗಿ ಕೋಳಿಯನ್ನು ಬಳಸಿದಂತಿದೆ.

**"ಬೇವಿನ ಮರದಲ್ಲಿ ಕಾಗೆ ಮನೆಯ ಮಾಡಿತ್ತು**
**ಕೋಗಿಲೆ ಮರಿಯ ಹಾಕಿತ್ತು**
**ಗೂಗೆ ಆರೈಕೆಯ ಮಾಡಿ ಸಾಕಿತ್ತು**
**ಹಂಸೆ ತಂಬೆಲರ ಕುಟುಕು ಕೊಟ್ಟು ಸಂಭ್ರಮವ ಮಾಡಿತ್ತು"**

**(ನೂ.ಶ.ಸಾ.ವ ಪು.59 ವ.161)**

ಸಂಸಾರ ಬದ್ಧ ಶರೀರವನ್ನು 'ಬೇವಿನ ಮರ' ಎಂದು ಈ ವಚನದಲ್ಲಿ ಕರೆಯಲಾಗಿದೆ. ಆ ಸಂಸಾರದಲ್ಲಿ ಮಾಯೆಯನ್ನು 'ಕಾಗೆ ಗೂಡು' ಎಂದು ಹೇಳಲಾಗಿದೆ. ಅದರಲ್ಲಿಯೆ ಏರ್ಪಡುವ ಜ್ಞಾನದ ನೆಲೆಯನ್ನು 'ಕೋಗಿಲೆಯ ಮರಿ' ಎಂದು ಸೂಚಿಸಲಾಗಿದೆ. ಗುರುತತ್ತ್ವವನ್ನು ಗೂಗೆಯ ಆರೈಕೆ ಎನ್ನಲಾಗಿದೆ. ಇಲ್ಲಿ ಹೋಲಿಕೆಯ ಪರಿಮಿತಿಯನ್ನು ಕಾಣಬಹುದು. ಭಕ್ತಿ ಜ್ಞಾನದ ಆಪೇಕ್ಷೆಯನ್ನು ದೇಹ ಮಾಧ್ಯಮದ ಮೂಲಕವೆ ಕೊಂಡುಕೊಳ್ಳಬೇಕಾಗಿರುವ ಅಗತ್ಯತೆಯನ್ನು ಪಡೆಯಲು ಮೂಲಭಿತ್ತಿ ಎಂಬ ಸೂಚನೆಯೂ ಇಲ್ಲಿದೆ.

**"ಪಂಜರದ ಕೋಳಿ ಮಾರ್ಜಾಲನ ಕೊಂದು ತಿಂದು**
**ಬಂಧುಗಳ ಹೊಂದದೆ, ತಾನೊಂದೆ ಹೊಂದಿತ್ತು**
**ಪಂಜರದ ಹೊರಗೆ**
**ಅರ್ಕೇಶ್ವರ ಲಿಂಗವನರಿದ ಕಾರಣ"**

**(ವ.ಸಾ.ಸಂ ಪು.480 ವ.12)**

ಮಧುವಯ್ಯನ ಈ ವಚನ ಅಂತರಂಗ ಮತ್ತು ಬಹಿರಂಗಗಳ ಸ್ವರೂಪವನ್ನು ಮತ್ತು ಅವುಗಳ ಪರಸ್ಪರ ಸಂಬಂಧವನ್ನು ವಿವರಿಸಿದೆ. 'ಪಂಜರದ ಕೋಳಿ' ಅಂತರಂಗದ ನೆಲೆಯನ್ನು ಸಂಕೇತಿಸುತ್ತದೆ. ಅಂತರಂಗ ಸತ್ತ್ವದ ಮೇಲೆ ಎರಗುವ ಮಾನಸಿಕ ಚಾಂಚಲ್ಯವೆನ್ನುವ ಮಾರ್ಜಾಲವನ್ನು ಪಂಜರದ ಕೋಳಿ ಕೊಂದು ತಿನ್ನುತ್ತದೆ. ಅಂತಸತ್ವ, ಅಂತರಂಗದ ಸ್ವರೂಪವನ್ನು ತಿಳಿಯುವುದರಿಂದ ಉಂಟಾಗುವ ಮುಕ್ತ ಸ್ಥಿತಿಯನ್ನು ಸೂಚಿಸುತ್ತದೆ. "ಕೋಲೊಂದರಲ್ಲಿ ಹಲವು ಕುಲದ ಗೋವುಗಳ ಚಲಿಸದೆ ನಿಲ್ಲಿಸುವಂತೆ ಏಕ ಚಿತ್ತವಾಗಿ ಸರ್ವ ವಿಕಾರಂಗಳ ಕಟ್ಟುವಡೆದು" ತುರುಗಾಯಿ ರಾಮಣ್ಣನು ತನ್ನ ವೃತ್ತಿಯ ಪರಿಭಾಷೆಯ ಅಭಿವ್ಯಕ್ತಿ ಬಳಕೆ ಮಾಡಿಕೊಂಡಿರುವ ವಚನವಾಗಿದೆ. ಈ ವಚನದಲ್ಲಿ ಶರಣರ ಮನೆಯ ಮುಂದೆ ನಿಂತು ಅವರವರ ಹಸುಗಳನ್ನು ಹೊಡೆದು ಕಳುಹಿ ಎಂದು ಕೂಗುತ್ತಾನೆ. ಅವನ ಮಾತುಗಳು ಈ ವಚನದಲ್ಲಿ ಆತ್ಮ ಚರಿತ್ರಾತ್ಮಕವಾಗಿವೆ. ಬಸವ, ಅಲ್ಲಮ ಮುಂತಾದರೆಲ್ಲ ತಮ್ಮ ಲಕ್ಷ್ಯಕ್ಕೆ ಹೋದರೆ, ತಾನು ತನ್ನ ತುರುವಿನ ಬೆಂಬಲಿನಲ್ಲಿ ತನ್ನ ದೈವದಲ್ಲಿ ಐಕ್ಯವಾಗುವುದಾಗಿ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಹೇಳಿಕೊಂಡಿದ್ದಾನೆ. 'ಕಲ್ಲು' ಎಂಬುದು ಕೂಡಲ ಸಂಗಮ ಎಂಬರ್ಥದಲ್ಲಿ ಅವನಲ್ಲಿ ಬಳಕೆ ಮಾಡಿಕೊಂಡಿರುವುದು ಗಮನಿಸಬೇಕಾದ ಸಂಗತಿಯಾಗಿದೆ.

**"ಅಲಗಿನ ಮೊನೆಯ ಸೇರಬಹುದು**
**ಹುಲಿಯ ಬಲೆಯ ಹುಗಬವುದು**
**ಸಿಂಹದ ಕೊರಳಿಗೆ ಹಾಯಬಹುದು**
**ಸಿದ್ಧ ಸೋಮನಾಥಾ,**
**ನಿಮ್ಮ ಮುಟ್ಟದೆ ನಿಮಿಷವಿರಬಾರದು"**

ತನ್ನ ಇಷ್ಟ ದೈವದಿಂದ ಅಗಲಿರುವ ನೋವು ಎಷ್ಟು ತೀವ್ರವಾದು ದೆಂಬುದನ್ನು ಬೇರೆ ಬೇರೆ ಶಬ್ದ ಚಿತ್ರಗಳಿಂದ ವಚನಕಾರ ಹೇಳಿರುವ ರೀತಿ ಸರಳವಾಗಿದೆ. ಆದರೆ ವಚನದ ತಿರುಳು ಬೇರೆ ಬಗೆಯ ಅರ್ಥವನ್ನು ಕೊಡುತ್ತದೆ. ಸದಾ ಪರಮಾತ್ಮನ ಧ್ಯಾನದಲ್ಲಿರುವ ಲಿಂಗ ನಿಷ್ಠಾಪರರು ಎಂತಹ ಅಪಾಯಗಳನ್ನಾದರೂ ಸುಲಭವಾಗಿ ಗೆಲ್ಲಬಲ್ಲರೆಂದು ಇಂತಹ ಅನೇಕ ಪ್ರತಿಮೆಗಳ ಮೂಲಕ ಚನ್ನ ವೀರಾಚಾರ್ಯನವರು ವರ್ಣಿಸಿದ್ದಾರೆ.

**"ಕೋತಿಗೆ ಕೊಂಬು ಹುಟ್ಟಬಲ್ಲುದೆ?**
**ನುಚ್ಚಕ್ಕಿ ಬಿತ್ತಿದರೆ ಮೊಳೆಯಬಲ್ಲುದೆ?**
**ಸತ್ತಮರ ಎಳಕಬಲ್ಲುದೆ?**
**ಅರೆಯ ಮೇಲೆ ತಾವರೆ ಬೆಳೆಯಬಲ್ಲುದೆ ಅಯ್ಯಾ?"....**
**(ವ.ಸಾ.ಸಂ ಪು.82 ವ.78)**

ಕೋತಿಗೆ ಕೊಂಬು ಹುಟ್ಟುವುದು, ನುಚ್ಚಕ್ಕಿಯನ್ನು ಬಿತ್ತಿದರೆ ಮೊಳೆತು ಬೆಳೆಯಾಗುವುದು ಸಾಧ್ಯವಿಲ್ಲ. ಒಣಗಿದ ಮರಕ್ಕೆ ನೀರೆರೆದರೆ ಚಿಗುರಿ ಫಲ ಕೊಡುವುದು ಸಾಧ್ಯವಿಲ್ಲ, ಬಂಡೆಗಲ್ಲ ಮೇಲೆ ತಾವರೆ ಗಿಡ ನೆಟ್ಟು ನೀರೆರೆದರೆ ಅದು ಬೆಳೆದು ಪುಷ್ಪ ನೀಡುವುದು ಸಾಧ್ಯವಿಲ್ಲ. ಅದರಂತೆ ದುರ್ಬುದ್ಧಿ-ದುರಾಚಾರಿಗಳಾದ ಮಾನವರಲ್ಲಿ ತನ್ನ ತಾನರಿದ ಶಿವ ಜ್ಞಾನವಂಕುರಿಸದು ಎಂದು ಸಿದ್ಧಲಿಂಗೇಶ್ವರರ ವಚನದಲ್ಲಿ ತಿಳಿಯುತ್ತದೆ. "ಹುಲಿಯ ಬಾಯಲ್ಲಿ ಸಿಲ್ಕಿದ ಹುಲ್ಲೆಯಂತೆ, ಸರ್ಪನ ಬಾಯಲ್ಲಿ ಸಿಲ್ಕಿದ ಕಪ್ಪೆಯಂತೆ.." ಹಸಿದ ಹುಲಿಯ ಬಾಯಲ್ಲಿ ಸಿಲಿಕಿದ ನಿಸ್ಸಹಾಯಕ ಜಿಗರಿಯಂತೆ, ಮತ್ತು ವಿಷ ಸರ್ಪನ ಬಾಯಲ್ಲಿ ಸಿಲಿಕಿದ ಮುಗ್ಧ ಕಪ್ಪೆಯಂತೆ, ಸ್ವರ್ಗ ಮರ್ತ್ಯಾದಿ ಸಕಲ ಲೋಕಗಳೆಲ್ಲವೂ ಮರವೆಯ ಮಾಯೆಯ ಬಲೆಯಲ್ಲಿ ಸಿಕ್ಕಿಕೊಂಡು ಬಂಧಿತವಾಗಿವೆ. ಅನುಭಾವಿಗಳ ಸಂಗದಿಂದ ಅರಿವಿನ ಅಕ್ಷಿಯನ್ನು ಅರಳಿಸಿಕೊಂಡ ನಾನು, ಮಾಯಾಪಾಶದಲ್ಲಿ ಬಿದ್ದು ಒದ್ದಾಡುತ್ತಲಿರುವ ಜೀವಿಗಳ ಭವ ಬಾಧೆಯನ್ನು ಕಣ್ಣಾರೆ ಕಂಡಿದ್ದೇನೆ. ಕಂಡು ಭಯ ಭೀತಿಯಿಂದ ಬಿಡಿಸಿ ರಕ್ಷಿಸೆಂದು ನಿಮಗೆ ಮೊರೆಹೊಕ್ಕಿದ್ದೆನೆ. ಕಾರುಣ್ಯ ನಿಧಿಯಾದ ಕರುಣಿ ಎನ್ನನು ಕಾಯಯ್ಯ ದೇವಾನುದೇವನಾದ ಪರಶಿವನೆ ಎಂಬುದು ಷಣ್ಮುಖ ಶಿವಯೋಗಿಯ ವಚನದಿಂದ ತಿಳಿದು ಬರುತ್ತದೆ.

**"ಆನೆಯನೇರುವಾತ ಮಹೇಶ್ವರನಲ್ಲ,**
**ಕುದುರೆಯನೇರುವಾತ ಮಹೇಶ್ವರನಲ್ಲ,**
**ಬಸವನನೇರುವಾತ ಮಹೇಶ್ವರನಲ್ಲ,**
**ಕೋಣವನೇರುವಾತ ಮಹೇಶ್ವರನಲ್ಲ"**

ನಾನು ವೀರ ಮಹೇಶ್ವರರೆಂದು ಮಣದಗತಿಗಳಿಂದ ಮೆರವಣಿಗೆ ಮಾಡಿಸಿಕೊಳ್ಳಲು ಅಂಬಾರಿಯ ಹೊತ್ತ ಆನೆಯನೇರುವಾತ ಬಸವಾದಿ ಶರಣರು ಬದುಕಿದ ನಿಜ ಮಹೇಶ್ವರನಲ್ಲ. ಸುಜ್ಞಾನ ಶಕ್ತಿಯ ಬೆಳಕನು ಸುಬುದ್ಧಿಯ ಹಸ್ತದಲ್ಲಿ ಹಿಡಿದು ಸುಜ್ಞಾನ ಸದಾಚಾರದ ಸಮರಸಗಳನ್ನು ಅಳವಡಿಸಿಕೊಂಡು ಇಷ್ಟಲಿಂಗ ನಿಷ್ಠಾಭಕ್ತಿಯಲ್ಲಿ ರಮಿಸುವಾತನೆ ಮಹೇಶ್ವರನೆಂದು ಕಾಡ ಸಿದ್ಧೇಶ್ವರರು ತಿಳಿಸುತ್ತಾರೆ. ಹೀಗೆ ಪ್ರಾಣಿ-ಪಕ್ಷಿಗಳನ್ನು ತಮ್ಮ ವಚನಗಳಲ್ಲಿ ಬಳಸಿಕೊಂಡಿರುವ ವಚನಕಾರರು ಅವುಗಳ ಗುಣ ಸ್ವಭಾವದ ಆಧಾರದ ಮೇಲೆ ಸಾಮಾಜಿಕ, ರಾಜಕೀಯ ಅಂಧಶ್ರದ್ಧೆ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಹಾಗೂ ಸಮಾಜದಲ್ಲಿನ ಎಲ್ಲಾ ರೀತಿಯ ಢಾಂಬಿಕತೆಯನ್ನು, ಕಂದಾಚಾರಗಳನ್ನು ಮತ್ತು ರೂಢಿ ಸಂಪ್ರಾದಾಯಗಳನ್ನು ಗುರುತಿಸುವ ಮತ್ತು ಪ್ರಶ್ನಿಸುವ ಕೆಲಸವನ್ನು ಮಾಡಿದ್ದಾರೆ.

## ಆಕರ ಗ್ರಂಥಗಳು


- **ಬಸವರಾಜು ಎಲ್. (ಸಂ.) :** 2008, ನೂರಾರು ಶರಣರ ಸಾವಿರ ವಚನಗಳು, ಬೆಂಗಳೂರು ಕೆ. ಎಸ್ ಮುದ್ದಪ್ಪ ಟ್ರಸ್ಟ್.
- **ಭೂಸನೂರಮಠ ಸಂ. ಶಿ. (ಸಂ.):** 2006, ವಚನ ಸಾಹಿತ್ಯ ಸಂಗ್ರಹ, ಕನ್ನಡ ಸಂಸ್ಕೃತಿ ಇಲಾಖೆ,
- **ಚಿದಾನಂದಮೂರ್ತಿ ಎಂ. : 2000,** ವಚನ ಸಾಹಿತ್ಯ(ಸಂ.5), ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ.
- **ಚಿದಾನಂದಮೂರ್ತಿ. ಎಂ :** 2005, ವಚನ ಸಾಹಿತ್ಯ ಬೆಂಗಳೂರು ಸಪ್ನ ಬುಕ್‌ಹೌಸ್.
- **ನಾಗಭೂಷಣಸ್ವಾಮಿ ಓ. ಎಲ್. (ಸಂ.) :** 2014, ವಚನ ಸಾವಿರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.
- **ಮರುಳಸಿದ್ಧಪ್ಪ ಕೆ. ಮತ್ತು ನಾಗರಾಜ ಕಿ. ರಂ. (ಸಂ.) :** 2016, ವಚನ ಕಮ್ಮಟ, ಬೆಂಗಳೂರು ಸಪ್ನ ಬುಕ್‌ಹೌಸ್.
- **ನಾರಾಯಣ ಪಿ. ವಿ :** 1994, ವಚನ ಪರಿಸರ, ಬೆಂಗಳೂರು ತಂಗಾಳಿ ಪ್ರಕಾಶನ.
- **ಶ್ರೀನಿವಾಸಮೂರ್ತಿ ಎಂ. ಆರ್. :** 2014, ವಚನ ಧರ್ಮಸಾರ. ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.


■■




ವಿದ್ಯಾನಿಧಿ ಪ್ರಕಾಶನ ®
ಶ್ರೀ ಶಿವಕುಮಾರ ಏಜನ್ಸಿ®

ಶೈಕ್ಷಣಿಕ ಪುಸ್ತಕಗಳ ಪ್ರಕಾಶಕರು ಮತ್ತು ಮಾರಾಟಗಾರರು

ಸ್ಟೇಶನ್ ರೋಡ ಮತ್ತು 'ನನಸು' ಜೆ. ಟಿ. ಮಠ ರೋಡ,
ಗದಗ-582 101

ದೂರವಾಣಿ : 08372-237527, 277527
e-mail : vidyanidhiprakashana@gmail.com. www. vidyanidhionline.com

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಕಸ್ತೂರಿ ಬಾಯರಿಯವರ 'ಪ್ರತಿಬಿಂಬ' ಒಂದು ಅವಲೋಕನ

✍ **ಅನುಪಮ ವೆಂ ಆದಾಪೂರ,** ಬಾಗಲಕೋಟ.

ಕಲಾಸಕ್ತಿಯುಳ್ಳ, ಕಾಳಜಿಯುಳ್ಳ ವ್ಯಕ್ತಿಗಳಿಗೆ ವ್ಯಾವಹಾರಿಕ ಸನ್ನಿವೇಶಗಳು ಅನಿವಾರ್ಯದರೂ ಅಂತಿಮವಾದ ಆಯ್ಕೆಯಾಗಲಾರದು. ಕಲೆಯೊಂದಿಗೆ ಹೊಂದಿರುವ ಸಾಮಾಜಿಕ ಪ್ರೀತಿ ಕಾಳಜಿಗಳಂತಹ ವ್ಯಕ್ತಿಗಳನ್ನು ವ್ಯಾವಹಾರಿಕ ಸನ್ನಿವೇಶಗಳು ಆಕರ್ಷಿಸಲಾರವು. ಇಂತಹ ವ್ಯಕ್ತಿತ್ವವನ್ನು ಹೊಂದಿದವರಲ್ಲಿ ಕಸ್ತೂರಿ ಬಾಯರಿಯವರು ಒಬ್ಬರು.

ಮೂಲತ ಸಂಪ್ರದಾಯಸ್ಥ ಕುಟುಂಬವಾಗಿದ್ದರೂ ಕಾಲ ಸಂದರ್ಭಕ್ಕೆ ತಕ್ಕಂತೆ ಅರಿವಿನ ಮೂಲಕ ಬದಲಾಗುವಂತಹ ಕುಟುಂಬ ಪರಿಸರದಲ್ಲಿ ಬೆಳೆದ ಬಾಯರಿಯವರು ಮೂಲ ಉಡುಪಿ ಜಿಲ್ಲೆಯ ಸಾಸ್ತಾನದವರಾದರೂ ಬೆಳೆದದ್ದು ಬಾಗಲೋಟೆ ಜಿಲ್ಲೆಯ ಬಾದಾಮಿಯಲ್ಲಿ. ಕಾನೂನು ಸ್ನಾತಕ ಪದವೀಧರಾದರೂ ವಕೀಲ ವೃತ್ತಿಯನ್ನು ಪ್ರವೇಶಿಸಿ, ಬಹುಕಾಲ ಆ ವೃತ್ತಿಯಲ್ಲಿಯೇ ಮುಂದುವರೆಯಲು ಅವರ ಮನಸ್ಥಿತಿಗೆ ಒಗ್ಗದಂತಾಯಿತು. ಆಗ ಸಮಾಜ ಸೇವೆಗೆ ತಮ್ಮನ್ನು ಅರ್ಪಿಸಿಕೊಂಡರು. ಸಮಾಜಸೇವೆ ನೆಮ್ಮದಿ ಕಾಣುತ್ತಿರುವ ಅವರಿಗೆ ತಮ್ಮ ಈ ಆಸಕ್ತಿಯ ಕಾರ್ಯವನ್ನು ವ್ಯವಸ್ಥಿತವಾಗಿ ಕೈಗೊಳ್ಳಲು ಪಾಠಶಾಲೆಯ ಅಧ್ಯಾಪಕಿ ವೃತ್ತಿಯನ್ನು ಕೈಗೊಂಡರು. ತಮ್ಮ ಅರಿವಿನ ಆಲೋಚನೆಯ ಫಸಲನ್ನು ಬೆಳೆಸಲು, ವಾತಾವರಣವನ್ನು ಕಟ್ಟಲು ಮುಂದಾದರು. ಶಿಕ್ಷಣ ಸಂಸ್ಥೆಗಳ ವ್ಯವಹಾರಿಕತನವು ಅವರಿಗೆ ಹಲವು ದಿನಗಳಲ್ಲಿ ಬೇಸರತಂದವು. ಹೊತ್ತ ಕನಸುಗಳಿಗೆ ಅಡ್ಡಿಗಳು ದೊಡ್ಡವಾದಾಗ, ಹೋರಾಟಗಾರ ಆರೋಗ್ಯಕ್ಕೆ ಘಾಸಿಯುಂಟಾಗುವುದು ಸಹಜ. ಇಂತಹ ಅನಾರೋಗ್ಯದಲ್ಲಿ ಮೊದಲಿನಿಂದ ಕಾಯ್ದುಕೊಂಡು ಬಂದ ಆಂಗ್ಲ ಹಾಗೂ ಕನ್ನಡ ಸಾಹಿತ್ಯದ ಓದು ಬರೆಹಕ್ಕೆ ಒತ್ತಾಯ ಮಾಡಿದ್ದುಂಟು.

ಐವತ್ತು ಪ್ರಾಯದಲ್ಲಿ ಬರೆಹಕ್ಕೆ ಮುಂದಾಗಿ ಕೇವಲ ಆರು ವರ್ಷಗಳಲ್ಲಿ ಸಾರಸ್ವತ ಲೋಕದಲ್ಲಿ ಮಹಿಳಾ ಮತ್ತು ಸಮಕಾಲೀನ ಬಿಕ್ಕಟ್ಟುಗಳನ್ನು ವಸ್ತುವಾಗಿಸಿಕೊಂಡು ಕವನಕಥೆ ಲೇಖನ ಪ್ರಕಾರಗಳಲ್ಲಿ ಕೃಷಿ ಗೈದಿದ್ದಾರೆ. ಯಾಕೋ ಸಾಹಿತ್ಯ ಲೋಕವು ಅವರನ್ನು ಕಥೆಗಾರ್ತಿಯೆಂದೇ ಹೆಚ್ಚು ಗುರಿತಿಸುತ್ತಿದೆ. ಅವರ ಮೊದಲ ಪ್ರಕಟಣೆಯಾಗಿ ಒಂದು ಕವನ ಮತ್ತು ಕಥಾ ಸಂಕಲನವನ್ನು ಏಕಕಾಲದಲ್ಲಿ ಪ್ರಕಟಿಸಿದ್ದರೂ, ಅವರ ಕಥೆಗಳು ಬಹುಮಾನ ಪ್ರಬುದ್ಧ ಸೃಜನಶೀಲ ಗದ್ಯ ಭಾಷೆ ಲಘವಾಗಿ ಆಕರ್ಷಿಸಿರಬಹುದು. ಸಾಹಿತ್ಯವನ್ನು ಸಾಮಾಜ ಸೇವೆಯ ಭಾಗವಾಗಿ ಓದಿ ಬರೆಯುತ್ತಿರುವ ಇವರ ಬರಹಗಳ ವಾದ ಪಂಥಗಳನ್ನು ಯಾವುದೇ ರೀತಿಯಲ್ಲಿ ಪ್ರಭಾವಿಸಿಕೊಂಡಿಲ್ಲ. ಅವರು ಬರಹಕ್ಕೆ ಪ್ರವೇಶವಾದಾಗ ಕನ್ನಡ ಸಾಹಿತ್ಯದಲ್ಲಿ ಮಹಿಳಾವಾದವೂ ಸಹ ಪ್ರಾಯಕ್ಕೆ ಬಂದು ಕವಲನ್ನು ಚಾಚಿಕೊಂಡಿತ್ತು. ಇವರ ಬರಹಗಳಲ್ಲಿ ಸಮಾಜ ಪರವಾದ ವಾದಗಳ ಆಚೆಯ ಚಾಚುಗಳು ಸೂಕ್ಷ್ಮವಾದ ರೀತಿಯಲ್ಲಿ ಗೋಚರಿಸುತ್ತವೆ ಎಂದರೆ ತಪ್ಪಾಗಲಾರದು.

ಕಸ್ತೂರಿ ಬಾಯರಿಯವರು ಈವರೆಗೆ ಒಂದುಕವನ ಸಂಕಲನ, ನಾಲ್ಕು ಕಥಾ ಸಂಕಲನಗಳು ಓದುಗರ ಕೈಗಿಟ್ಟು ವಿಮರ್ಶೆಗೆ ಒಳಪಟ್ಟದ್ದಾರೆ. ಅವರ ಸಾಹಿತ್ಯ ಕೃಷಿಗೆ ಪುರಸ್ಕಾರ ಹಾಗೂ ಬಹುಮಾನಗಳು ಸಂದಿವೆ. ಇವರ ಕಥಾ ಸಂಕಲನಗಳಲ್ಲಿ 'ದಿಂಡೀ' ಒಂದಾಗಿದ್ದು ಅದರ ಅವಲೋಕ ಪ್ರಸ್ತುತ ಬರೆಹದ ಉದ್ದೇಶವಾಗಿದೆ.

ಕಸ್ತೂರಿ ಬಾಯರಿಯವರ 'ದಿಂಡೀ' ಕಥಾಸಂಕಲನದ ಒಂಬತ್ತು ಕಥೆಗಳು ಓದುಗರಿಗೆ ವಿಶಿಷ್ಟವೆನಿಸುತ್ತವೆ. ಕೌಟುಂಬಿಕ, ಸಾಮಾಜಿಕ, ಮನೋಸಂಘರ್ಷಾತ್ಮಕ ನೆಲೆಗಳಲ್ಲಿ ಈ ಕಥೆಗಳು ಗಮನಾರ್ಹವಾಗಿವೆ. ಈ ಕಥೆಗಳಲ್ಲಿ ಒಂದಾದ 'ಪ್ರತಿಬಿಂಬ' ಕಥೆಯು ಮಹಿಳಾ ಶೋಷಣೆಯ ವೈರುಧ್ಯಗಳಲ್ಲೂ ಹೊಸ ಬದುಕನ್ನು ಕಾಣುವದರ ತಂತ್ರಗಾರಿಕೆಯ ಹೊಸತನವಿರುವುದರ ಹಿನ್ನೆಲೆಯು ಅವಲೋಕನ ಪ್ರೇರಣೆಯಾಗಿದೆ.

ಮಹಿಳೆ ಹುಟ್ಟಿದಾರಭ್ಯದಿಂದ ಸಮಸ್ಯೆಗಳ ಸುಳಿಯಲ್ಲಿ ಸುತ್ತುತ್ತಾ ಇರುವವಳು. ಮನೆಯ ಒಳಗೂ, ಹೊರಗೂ ಒಂದಿಲ್ಲಾ ಒಂದು ರೀತಿಯಲ್ಲಿ ಮಾನಸಿಕವಾಗಿ, ದೈಹಿಕವಾಗಿ ಹಿಂಸೆಯನ್ನು ಅನುಭವಿಸುತ್ತಲೇ ಬಂದವಳು. ಮಾನವೀಯ ಸಮಸ್ಯೆಗಳನ್ನು ಬಗೆಹರಿಸುವುದು ಆಕೆಯ ಪಾಲಿಗೆ ಇನ್ನೂ ಕಷ್ಟ. ಆದರೂ ಈ ಕಥೆಯ ನಾಯಕಿ ಜಯಾ ತನ್ನ ತ್ಯಾಗ, ತಾಳ್ಮೆ, ಸಹನೆಗಳಿಂದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ಆತ್ಮವಿಶ್ವಾಸ ಹೊಂದುವುದು ಈ ಕಥೆಯಜೀವಾಳ.

'ಪ್ರತಿಬಿಂಬ' ಕಥೆಯ ವಸ್ತು 'ಕನಸು'. ಕನಸುಗಳಲ್ಲಿ ಆಸೆಯ ಗೋಪುರದ ಕನಸು, ಭಗ್ನ ಕನಸು, ಜುಗುಪ್ಸೆಯ ಕನಸು, ಭಯದ ಕನಸು, ಎಂದು ವರ್ಗೀಕರಿಸಬಹುದು. ಈ ಎಲ್ಲ ಕನಸುಗಳು ನಾಯಕಿ ಒಬ್ಬಳಲ್ಲಿಯೇ ತುಂಬಿಹೋದರೆ ಬದುಕು ಹೇಗೆ ತತ್ತರಿಸಿ ಹೋಗಬಹುದೆಂಬುದರ ಜಿಜ್ಞಾಸೆ ಇಲ್ಲಿದೆ. ಜಯಾ ವಿದ್ಯಾವಂತೆಯಾದರೂ ಬಡತನದ ಬೇಗೆಯಲ್ಲಿ ಪೂರ್ತಿ ಬೆಂದವಳು. ಮನೆ ಮನೆ ಅಲೆದು ಮನೆಪಾಠಮಾಡಿ ಇಡೀ ಸಂಸಾರದ ಭಾರವನ್ನು ನಿಭಾಯಿಸುವಳು. ಈಕೆ ತನ್ನ ವಿದ್ವತ್ತಿನ ಮೇಲೆಯೇ ನೌಕರಿ ಪಡೆದವಳು. ಆದರೆ, ಅನಾರೋಗ್ಯವು ಆಕೆಯನ್ನು ಅಧೀರಗೊಳಿಸಿ, ದೇಹದ ಪ್ರಮುಖವಾದ ಎರಡು ಅಂಡಾಶಯಗಳ ಆಪರೇಷನ್, ಥೈರಾಯಿಡ್ ಆಪರೇಷನ್‌ಗಳು ಆಕೆಯ ಕನಸನ್ನು ನುಚ್ಚುನೂರುಗೊಳಿಸಿದವು.

ಹಕ್ಕಿಯಂತೆ ಹಾರುವ, ಗಾಳಿಪಟದಂತೆ ತೇಲಾಡುವ, ನಕ್ಷತ್ರದಂತೆ ಮಿನುಗುವ ಕಟ್ಟಿಕೊಂಡಿದ್ದ ಕನಸುಗಳು ನನಸಾಗದೆ ಇದ್ದ ಜಯಾ ಬದುಕಿನಲ್ಲಿ ಎಲ್ಲವನ್ನು ಮಿಸ್ ಮಾಡಿಕೊಳ್ಳಬೇಕಾಗುತ್ತದೆ. ಅವಿವಾಹಿತಳಾದ ಜಯಾಳಿಗೆ ಸಾಲುಗಟ್ಟಿ ಕಷ್ಟಗಳು ಬರುತ್ತವೆ. ಭೂಮಿಯ ಮೇಲಿರುವ ಪ್ರತಿಯೊಂದು ಜೀವಿಗಳಿಗೂ ಒಂದಲ್ಲ ಒಂದು ರೀತಿಯಲ್ಲಿ ಕಷ್ಟಗಳು ಬಂದೇ ಬರುತ್ತವೆ ಎಂದುಕೊಂಡು ಹೊಟ್ಟೆ ನೋವನ್ನು ತಾಳಲಾರದೆ ಗರ್ಭಕೋಶವನ್ನು ತೆಗೆಸಿ ಹಾಕುವ ಜಯಾ ಹೆಣ್ಣಿನ ಬದುಕಿನ ಅತ್ಯಮೂಲ್ಯವಾದ ಅಂಗವನ್ನು ಕಳೆದುಕೊಂಡಂತೆ ಅನುಭವಿಸಿ, ರೋಧಿಸುವಳು.

ಜವಾಬ್ದಾರಿ ಇಲ್ಲದ ತಂದೆ, ಯಾರ ಬಲವಿಲ್ಲದ ಒಂಟಿತನ, ಕುಟುಂಬದ ಒತ್ತಡಗಳಿಂದಾಗಿ ಹೊರಗಡೆಕೆಲಸ ಮಾಡುವುದು ಆಕೆಗೆ ಅನಿವಾರ್ಯವಾದಾಗ, ಒಮ್ಮೆ, ಮೇಲಾಧಿಕಾರಿಯಿಂದ ಬಂದೊದಗುವ ಅವಮಾನದ ಪ್ರಸಂಗ ಜಯಾಳಿಗೆ ನುಂಗಲಾರದ ತುತ್ತಾಗುತ್ತದೆ. ತನ್ನ ವಂಶೋದ್ಧಾರಕ್ಕಾಗಿ ಹಣದ ಆಸೆಯನ್ನು ತೋರಿಸಿ ಜಯಾಳಿಂದ ಗಂಡುಮಗುವನ್ನು ಪಡೆಯಲಿಚ್ಚಿಸಿದ ಮೇಲಾಧಿಕಾರಿಯನ್ನು ಜಯಾ 'ಏನ್ರೀ ಸರ್ ನಿಮಗೆ ಮಕ್ಕಳಾದ್ರೆ ನನ್ನ ವಯಸ್ಸಿನ ಮಗಳು ಇರುತ್ತಿದ್ದಳು.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ನಾವು ಬಡವರಿರಬಹುದು ಆದರೆ ಮಾನ ಮರ್ಯಾದೆ ಬಿಟ್ಟವರಲ್ಲ. ನಿಮಗೆ ವಂಶ ಉದ್ಧಾರವಾಗಬೇಕಾದರೆ ಇನ್ನೊಂದು ಮದುವೆ ಆಗಿ ಇಲ್ಲಾ ಅನಾಥ ಮಗುವನ್ನು ದತ್ತಕ ತೆಗೆದುಕೊಳ್ಳಿ. ನನ್ನ ವೈಯಕ್ತಿಕ ಬದುಕಿನಲ್ಲಿ ಕಾಲಿಡಲು ನಿಮಗಾರು ಹಕ್ಕು ಕೊಟ್ಟಾರಿ? ಮನುಷ್ಯನ ಬಾಯಿಂದ ಮಾತು ಹೊರಬೀಳಬೇಕಾದರೆ ಸ್ವಲ್ಪ ಅರಿವು ಹಿಡಿತ ಇರಬೇಕು. ನೀವು ದೊಡ್ಡ ಹುದ್ದೆಯಲ್ಲಿ ಇದ್ದೀರಿ ದೊಡ್ಡವರ ಬಾಯಿಂದ ದೊಡ್ಡ ಮಾತು ಬರಬೇಕು.ಇದೇನು ವಿಚಿತ್ರ ಮನುಷ್ಯರತರಹದ ಮಾತು.' ಎಂದು ಧಿಕ್ಕರಿಸುವಳು.

ಉನ್ನತ ಹುದ್ದೆಯಲ್ಲಿರುವ ಪುರುಷ ಸಹೋದ್ಯೋಗಿ ಹೆಣ್ಣು ಮಕ್ಕಳ್ಳನ್ನು ಬಳಸಿಕೊಳ್ಳುವ ಕಾಮುಕತನ ಮತ್ತು ಹೆಣ್ಣು ಎಂದರೆ ಪುರುಷನ ಇಚ್ಚೆಗೆ ಒಗ್ಗಬೇಕಾದ ಒಂದು ಸಾಧನವೆಂಬಂತೆ ಬಿಂಬಿತವಾಗಿದೆ. ಅಧಿಕಾರಿ ಜಯಾಳನ್ನು ಹೆಂಡತಿಯಾಗಿ ಪಡೆಯಬಹುದಾದ ಅಥವಾ ತನ್ನ ವಂಶೋದ್ಧಾರಕ್ಕಾಗಿ ಅನಾಥ ಮಗುವನ್ನು ಪಡೆಯಬಹುದಾದ ಅವಕಾಶವಿದ್ದಾಗಲೂ "ಯಾರಿಗೂ ತಿಳಿಯದ ಹಾಗೆ ವ್ಯವಸ್ಥಾ ಮಾಡೀನಿ ಬೇಕಾದಷ್ಟು ಹಣಕೊಡುತ್ತೇನೆ."ಎನ್ನುವುದು ಜಯಾಳಿಗಿರುವ ಬಡತನ, ಒಂಟಿತನ ತನ್ನ ನಿರೀಕ್ಷೆಗೆ ಅವಕಾಶಗಳನ್ನಾಗಿಸಿಕೊಳ್ಳುತ್ತಾನೆ. ಜಯಾಳಿಗೆ ಬಡತನಕ್ಕಿಂತ ಮಾನ ಮತ್ತು ಆತ್ಮವಿಶ್ವಾಸಗಳು ದೊಡ್ಡವಾಗುತ್ತವೆ. ಆ ಬಲದಿಂದ ಅಧಿಕಾರಿಯ ಅಹಂಭಾವಕ್ಕೆ ತಕ್ಕ ಉತ್ತರವನ್ನು ಕೊಡುವಳು. ಪರಿಣಾಮವಾಗಿ ಅಧಿಕಾರದ ಬಲದಿಂದ ದೂರದ ಗುಲ್ಬರ್ಗಾಕ್ಕೆ ವರ್ಗಾವಣೆಯಾಗುತ್ತದೆ. ದುಡ್ಡು, ಅಧಿಕಾರವಿದ್ದರೆ ಜಗತ್ತಿನಲ್ಲಿ ಏನೆಲ್ಲ ಪಡೆದುಕೊಳ್ಳುತ್ತೇನೆ ಎಂಬ ಪುರುಷನ ನಡುವಳಿಕೆಯನ್ನು ಆಕೆ ಪ್ರತಿಭಟಿಸಿದುದಕ್ಕೆ ಈ ತೆರನಾದ ಪ್ರತಿಫಲವನ್ನು ಪಡಯುವಳು.

ಅವಿವಾಹಿತೆ ಜಯಾ ತನ್ನ ಬದುಕು ಸಾರ್ಥಕವಾಗಬೇಕಾದರೆ ಮದುವೆ ಆಗಬೇಕು ಎಂಬ ಸಂಪ್ರದಾಯಗಳ ನುಡಿಗಳನ್ನು ಆಲಿಸಿ ಆಸೆ, ಕನಸುಗಳನ್ನು ಕಟ್ಟಿಕೊಂಡಿದ್ದವಳು. ಆದರೆ, ಅನಿವಾರ್ಯವಾಗಿ, ಗರ್ಭಕೋಶ ತೆಗೆಸಿದಾಗ ' ಅವಿವಾಹಿತಳಿಗೆ ಅದು ಹೇಗೆ ಸಮಸ್ಯೆ ಆಯಿತು' ಎಂಬ ಸಾವಿರಾರು ಜನರ ಪ್ರಶ್ನೆಗಳು, ಅದೇ ರೀತಿ ಆಫೀಸಿನಲ್ಲಿರುವ ಪುರುಷರ ವರ್ತನೆ, ಅವರ ನುಡಿಗಳು ಮನಸ್ಸನ್ನು ಘಾಸಿಗೊಳಿಸುತ್ತವೆ. ಒಟ್ಟಾರೆ, ಗಂಡಸರ ಸಹವಾಸವೇ ಜುಗುಪ್ಸೆ ತರಿಸುತ್ತದೆ. ಒಟ್ಟಿಗೆ, ಬದುಕು ಕತ್ತಲದ ಗೂಡಾಯಿತೆಂದು ವ್ಯಥೆಪಟ್ಟ ಜಯಾಳಿಗೆ ಈ ಎಲ್ಲ ಘಟನೆಗಳು ಅವಳ ಮನಸ್ಸನ್ನು ಮುಚ್ಚಿಹಾಕುತ್ತವೆ.

ಈಗೀಗ ಜಯಾಳಿಗೆ ಕನಸು ಬೀಳಲು ಆರಂಭವಾಗುತ್ತವೆ. ವಿಚಿತ್ರ, ಭಯಾನಕ, ಬೆತ್ತಲೆ ಕನಸುಗಳು! ತುಂಡು ಬಟ್ಟೆಯೂಇಲ್ಲದ ಕನಸಿನಿಂದ ಜಯಾ ವಿವಶಳಾಗುತ್ತಾಳೆ. ಇದರಿಂದ ಅವಳು ತಾನು ಬದುಕಿದ್ದೂ ಮರಣೋತ್ತರ ಜೀವನ ನಡೆಸುತ್ತಿದ್ದೇನೆ ಎಂಬುದು ಇನ್ನಷ್ಟು ಮನಸ್ಸಿಗೆ ಆಘಾತವನ್ನುಂಟು ಮಾಡುತ್ತದೆ. ಈಗ ಆಕೆ ಮೊರೆ ಹೋಗುವುದು ಮನೋವೈದ್ಯರನ್ನು. ಮನೋ ವೈದ್ಯ ಡಾ.ಚಂದ್ರಶೇಖರ ಜಯಾಳಿಗೆ ಬೀಳುತ್ತಿರುವ ಅಶ್ಲೀಲ ಕನಸುಗಳಿಗೆ ಕಾರಣ ಮನಸ್ಸು ಎಂಬುದನ್ನು "ಮನಸ್ಸನ್ನು ಹೇಗೆ ಶಾಂತಗೊಳಿಸಿಕೊಳ್ಳಬೇಕೆಂಬ ನಿಮ್ಮ ಸಮಸ್ಯಗೆ ಉತ್ತರ ನಿಮ್ಮಲ್ಲಿದೆ. ಬದುಕಿಗೆ ಒಂದು ಚೌಕಟ್ಟು ಇದೆ. ಆ ಚೌಕಟ್ಟನ್ನು ಈ ಹೋರಾಟದ ಬದುಕಿನಲ್ಲಿ ಹೇಗೆ ಕಟ್ಟಿಕೊಳ್ಳಬೇಕು, ಪ್ರತಿಯೊಂದಕ್ಕೂ ಆರಂಭ, ಅಂತ್ಯ ಎಂಬುದಿದೆ. ಎಲ್ಲಾ ದಾರಿಗಳು ಒಂದೂರನ್ನು ತಲುಪೇ ತಲುಪುತ್ತವೆ" ಎಂದು ನೀಡುವ ಮಾರ್ಗದರ್ಶನ ಅವಳ ಬದುಕಿನ ದಿಕ್ಕನ್ನು ಬದಲಿಸುತ್ತದೆ.

ಬದುಕಿನಲ್ಲಿ ನಾವು ನೋಡಿದ್ದೆಲ್ಲಾ ಸತ್ಯವಲ್ಲ. ನಮ್ಮ ಅನುಭವವೇ ಅಂತಿಮವಲ್ಲ. ಅದರಾಚೆ ನಮ್ಮ ಮನಸ್ಸನ್ನು ಕ್ರೋಢಿಕರಿಸುವ, ಸರಿತೂಗಿಸುವ ವಿಫಲತೆ ನಮ್ಮನ್ನು ಹತಾಶೆಗೆ ತಳ್ಳುತ್ತದೆ ಎಂಬ ಪುಟ್ಟ ಸತ್ಯ ಅವಳಿಗೆ ಡಾ.ಚಂದ್ರಶೇಖರೊಂದಿಗಿನ ಚರ್ಚೆಯಿಂದ ಖಚಿತವಾಗುವುದು. ಯಾರೋ ನಾಲ್ಕು ಮಾತು ಅಂದರೂ ಅಂದರೆ ತನ್ನ ಬದುಕನ್ನೇ ಮಾರಿಕೊಳ್ಳುವುದು ಹೇಡಿತನ ಎಂದರಿತ ಜಯಾ ಹಲವಾರು ಸಮಸ್ಯೆಗಳ ಮಧ್ಯದಲ್ಲಿಯೂ ನೌಕರಿಯನ್ನು ಮುಂದುವರಿಸುವಳು.

ಕಥೆಗಾರ್ತಿಯು ಅನುಪಮಾ ನಿರಂಜನರ ಹಾಗೆ ಈ ಕಥೆಯಲ್ಲಿ ಸಿಗ್ಮಂಡ್ ಫ್ರಾಯ್ಡನ ಮನಃಶಾಸ್ತ್ರ ವೈದ್ಯಕೀಯ ಬೆಳವಣಿಗೆಗಳನ್ನು ಅಳವಡಿಸಿಕೊಂಡಿದ್ದಾರೆ. ಕಥೆಗಾರ್ತಿ ಮನಃಶಾಸ್ತ್ರನ್ನು ಡಾ.ಚಂದ್ರಶೇಖರ ಮತ್ತು ಜಯಾಳ ಸಂಭಾಷಣೆಯ ಮೂಲಕ ಮನಸ್ಸಿನ ವಿಚಾರವನ್ನು ಎಳೆಎಳೆಯಾಗಿ ಬಿಚ್ಚುತ್ತಾರೆ. ಜೀವನ ಅತ್ಯಂತ ಒತ್ತಡಗಳಿಂದ, ಜಂಜಡಗಳಿಂದ ಕೂಡಿದ್ದು, ಮನಸ್ಸನ್ನು ಘಾಸಿಗೊಳಿಸಿವೆ. ಘಾಸಿಗೊಂಡ ಬದುಕು ಪ್ರಶ್ನಾರ್ಥಕ ಚಿನ್ಹೆಯಾಗಬಾರದು ಪೂರ್ಣವಿರಾಮ ಹೊಂದಲೇಬೇಕು. ತನ್ನ ಬದುಕು ಬರಡಾಗಬಾರದು ತಂಪು ನೀಡುವ ಮರವಾಗಬೇಕೆಂಬ ಸಂದೇಶವನ್ನು ಕಥೆಗಾರ್ತಿ ಈ ಕಥಾನಾಯಕಿಯ ಮೂಲಕ ಕೊಡುವ ಯತ್ನ ಮಾಡಿದ್ದಾರೆ.

ಡಾ.ಬಾಳಾಸಾಹೇಬ ಲೋಕಾಪೂರವರು ಸಂಕಲನದ ಮುನ್ನುಡಿಯಲ್ಲಿ ' ಕಸ್ತೂರಿಯವರ ನಾಯಕಿಯರು ಬದುಕಿಗೆ ಬೆನ್ನು ತಿರುಗಿಸುವ ಹೇಡಿಗಳಲ್ಲ. ಬದುಕಿನ ಜಂಜಾಟವನ್ನು ಅನುಭವಿಸಿ, ಅದನ್ನು ಮೀರಿ ಮೇಲೇಳುವ ಛಲಗಾರ್ತಿಯರು ' ಎನ್ನುತ್ತ, ಮುಂದುವರಿದು, 'ಪ್ರತಿಬಿಂಬ'ದ ನಾಯಕಿ ಜಯಾಳ ಮುರಿದು ಬಿದ್ದ ಕನಸುಗಳ ದೇನಿಕೆಯಲ್ಲಿ ಉಳಿದ ಬದುಕನ್ನು ಸಾಗಿಸುವಳು' ಎನ್ನುತ್ತಾರೆ. ಆದರೆ, ಚೇತರಿಸಿಕೊಂಡ ಜಯಾ ದಿನಾಲೂ ಹೊಸರಾಗವನ್ನು ಹಾಡುತ್ತ, ಉದ್ದ ಜಡೆಯಲ್ಲಿ ಮಲ್ಲಿಗೆ ದಂಡೆ ಮುಡಿಯುತ್ತ, ಆಫೀಸಿನ ಹೆಣ್ಣುಮಕ್ಕಳ ಸಮಸ್ಯೆಗೆ ಧ್ವನಿಯಾಗುತ್ತ, ಪ್ರತಿಬಿಂಬವನ್ನೂ ಪ್ರೀತಿಸುತ್ತ, ಖುಷಿಯಾಗಿರುವುದನ್ನು ನೋಡಿದರೆ, ಆಕೆ ದೇನಿಕೆಯಲ್ಲಿ ಬದುಕನ್ನು ನೂಕುವಳು ಎನ್ನುವದಕ್ಕಿಂತ ಜಯಾ ಕಳಚಿ ಬಿದ್ದ ಕನಸುಗಳನ್ನು ಒಟ್ಟುಗೂಡಿಸಿ ಬದುಕನ್ನು ಕಟ್ಟಿಕೊಳ್ಳುವಳು ಎನ್ನುವುದು ಹೆಚ್ಚು ಸಮಂಜಸವೆನಿಸುತ್ತದೆ.

ಮನೋ ವೈದ್ಯರಾದ ಚಂದ್ರಶೇಖರ, ಮನಸ್ಸಿಗೆ ಅಂಟಿಕೊಂಡ ಕರಿನೆರಳ ಪರದೆಯನ್ನು ಸರಿಸಲು ಮಾರ್ಗವನ್ನುಂಟು ಮಾಡಿದಾಗ ನೆರಳಿಗೆ, ಕತ್ತಲೆಗೆ ಭಯಪಡುತ್ತಿದ್ದ ಜಯಾ ಈಗ ಆ ಪ್ರತಿಬಿಂಬವನ್ನು ಪ್ರೀತಿಸುವುದು ಪರಿವರ್ತನೆಯ ದ್ಯೋತಕವಾಗುತ್ತದೆ.. ಹತಾಶೆ, ಬಡತನ, ಅವಮಾನ, ಅನುಮಾನ, ಒಂಟಿತನಗಳಿಂದ ವ್ಯಕ್ತಿತ್ವವೇ ಬೆತ್ತಲಾಗಿಸಿದ್ದ ಬದುಕಿಗೆ ಜಯಾ ಕವಚವನ್ನು ಕಂಡುಕೊಳ್ಳುತ್ತಾಳೆ. ಜೀವನ ಇರುವುದೇ ನಂಬಿಕೆ ಮತ್ತು ಭರವಸೆಯ ಮೇಲೆ ಎಂಬುದನ್ನು ವೀಣಾಧರಿಯ ಭಾಷಣದಿಂದ ಅರಿತ ಜಯಾ ತನ್ನ ಜೀವನವು ಸುವಾಸನೆಯಿಂದ ಕೂಡಿದೆ ಎಂದು ಗಟ್ಟಿಗೊಳಿಸಿಕೊಳ್ಳುತ್ತಾಳೆ. ತನ್ನ ಸಹೋದ್ಯೋಗಿ ಸ್ನೇಹಿತೆಯರ ಸಮಸ್ಯೆಗಳನ್ನು ನಿವಾರಿಸುವ ಅವರೆಲ್ಲರಿಗೂ ಪ್ರೇರಕ ಶಕ್ತಿಯಾಗಿ, ಮಾದರಿಯಾಗಿ ನಿಲ್ಲುತ್ತಾಳೆ. ಹೀಗೆ ಕಥೆಗಾರ್ತಿ ಬಾಯರಿಯವರು ' ಪ್ರತಿಬಿಂಬ ' ಕಥೆಯಲ್ಲಿ ಜಯಾಳ ನಿರ್ಜೀವವಾದ ಬೆತ್ತಲೆ ಕನಸಿಗೆ ಜೀವಕಳೆಯನ್ನು ತುಂಬುತ್ತಾರೆ.

ಕಥೆ ಮನೋವೈಜ್ಞಾನಿಕ ಧೋರಣೆಯಲ್ಲಿ ಓದುತ್ತಾ ಹೆಣ್ಣು ಮತ್ತು ಅನಕ್ಷರಸ್ತ ಮಹಿಳಾ ಸಮುದಾಯಗಳನ್ನು ಹೋಲಿಸಿಕೊಂಡಾಗ ಎದುರಾಗುವ ಚಿತ್ರಣ ಭಿನ್ನ ಘೋರ. ಇಂತಹ ಕಥೆಗಳು ಈ ಸಮಸ್ಯೆಯನ್ನು ಪಾತ್ರದ ವರ್ಗವಲಯಗಳಿಗೆ ಮಾತ್ರ ಸಿಮೀತವಾಗದೆ ವಿಸ್ತರಿಸಿಕೊಳ್ಳುತ್ತದೆ. ಸಮಾಜ ಸೇವಾ ಆಕಾಂಕ್ಷಿಯಾದ ಕಸ್ತೂರಿ ಬಾಯಿರಿಯವರ ಕಥೆ ಕಾಲ್ಪನಿಕ ವಸ್ತು ಬಲದಿಂದ ರೂಪಪಡೆಯದ ಹಲವರ ಜೀವನಗಾಥೆಗಳು ತುಣುಕುಗಳು ಒಂದು ಮೂರ್ತರೂಪಕ್ಕೆ ತೇಪೆಗಳಾಗಿ ಸಮಾಜ ನಿಷ್ಪತ್ತಿಯಾಗಿರುವ ಕಾರಣ ನಾಯಕಿ ಜಯಾ ಅಂತಿಮವಾಗಿ ಸಮಸ್ಯೆಯ ಮಡುವಾಗಿದ್ದರೂ ಪರರ ಸಮಸ್ಯಾಗಾಯಕ್ಕೆ ಮುಲಾಮಾಗುತ್ತಾಳೆ.

■■

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಜಾನಪದ ಕಲೆಗಳಲ್ಲಿ ಅಲೆಮಾರಿ ಬುಡಕಟ್ಟು ಸಮುದಾಯಗಳ ಪ್ರದರ್ಶನ ಕಲೆಗಳು

✍ **ಪ್ರತಾಪ ರಾ. ಬಹುರೂಪಿ,** ಸಂಗೀತ ಹಾಗೂ ಲಲಿತ ಕಲಾ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
✍ **ಡಾ. ಎಂ. ಎಚ್. ಅಗಡಿ,** ಮಾರ್ಗದರ್ಶಕರು, ಸಂಗೀತ ಹಾಗೂ ಲಲಿತ ಕಲಾ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಭಾರತವು ಬಹು ಸಂಸ್ಕೃತಿಯ ದೇಶ. ಕಲೆ ಸಾಹಿತ್ಯ, ಸಂಗೀತ, ಕ್ರೀಡೆ, ತಂತ್ರಜ್ಞಾನ, ವೈಜ್ಞಾನಿಕ ಅಲ್ಲದೇ ಅನೇಕ ರಂಗಗಳಲ್ಲಿ ನಮ್ಮಯ ದೇಶಿತನವನ್ನು ಕಾಣುತ್ತೇವೆ. ಈ ದೇಶದ ಹಲವಾರು ರಂಗಗಳಲ್ಲಿ ಹಲವು ಬಗೆಯ ಅಧ್ಯಯನ, ಸಂಶೋಧನೆಗಳು ನಡೆದಿರುವುದನ್ನು ಕಾಣುತ್ತೇವೆ.

ಕೆಲವು ಜಾನಪದ ಕಲೆಗಳ ಕುರಿತು ಹೇಳುವಾಗ ಗಣನೀಯವಾಗಿ ಅಧ್ಯಯನಗಳು ಕಂಡು ಬಾರದೆ ಇದ್ದರೂ ಇತ್ತೀಚಿಗೆ ಕರ್ನಾಟಕವನ್ನು ಅನುಲಕ್ಷಿಸಿ ಹೇಳುವುದಾದರೆ ಸಾಕಷ್ಟು ಅಧ್ಯಯನಗಳು ನಡೆದಿವೆ, ನಡೆಯುತ್ತಿವೆ.

ಆದರೆ ಇತರ ರಂಗಗಳನ್ನು ಹೋಲಿಸಿದಾಗ ಅಲೆಮಾರಿ ಜನ ಸಮುದಾಯಗಳ ಕಲೆಗಳ ಕುರಿತು ಅಧ್ಯಯನಗಳು ಅತೀ ವಿರಳವೆಂದೆ ಹೇಳಬಹುದು. ಬುಡಕಟ್ಟು, ಅಲೆಮಾರಿ ಬುಡಕಟ್ಟು ಸಮುದಾಯಗಳ ಕಲೆಗಳ ಕುರಿತು ಉಲ್ಲೇಖಗಳನ್ನು ಅನೇಕ ವಿದ್ವಾಂಸರು ಬಿಡಿ ಬಿಡಿಯಾಗಿ ದಾಖಲಿಸಿದ್ದಾರೆ. ಬುಡಕಟ್ಟು ಜನಾಂಗದ ವಿಷಯಗಳು ಅಧ್ಯಯನಗಳ ಪರಿಧಿಗೆ ಕೆಲವು ಅಂಶಗಳು ಸಿಕ್ಕರೆ ಲೆಕ್ಕಕ್ಕೆ ಸಿಗದೇ ಇರುವ ವಿವರಗಳೇ ಇನ್ನೂ ಅನೇಕ ಇವೆ.

ಸುಮಾರು 300 ವರ್ಷಗಳ ಹಿಂದೆ ಕರ್ನಾಟಕದ ಅಲೆಮಾರಿ ಬುಡಕಟ್ಟು ಸಮುದಾಯ ನಾಡಿನ ಸಂಸ್ಕೃತಿಯನ್ನು ಎಲ್ಲೆಡೆಗೆ ಪರಿಚಯಿಸುವದಕ್ಕೋಸ್ಕರವಾಗಿ ಹಲವಾರು ಕಲಾ ಪ್ರಕಾರಗಳನ್ನು ಹೊತ್ತು ಪ್ರದರ್ಶನಾತ್ಮಕ ಕಲೆಗಳಿಂದ ದೇಶಿ ಸಂಸ್ಕೃತಿ ಪ್ರಸಾರ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.ಈ ಕಾರ್ಯ ಅವರ ಬದುಕಿನ ವೃತ್ತಿ ಮತ್ತು ಪ್ರವೃತ್ತಿಯೂ ಆಗಿದೆ.

## ಕರ್ನಾಟಕದ ಬುಡಕಟ್ಟು ಸಮುದಾಯಗಳು

1. ಹಕ್ಕಿಪಿಕ್ಕಿ,
2. ಹಸಲರು,
3. ಇರುಳಿಗೆ,
4. ಜೇನಕುರುಬ,
5. ಕಾಡು ಕುರುಬ,
6. ಮಲೇರು,
7. ಸೋಲಿಗರು,
8. ಗೌಡಲು,
9. ಮಲೈಕುಡಿ.

ಅಲೆಮಾರಿ ಬುಡಕಟ್ಟುಗಳ (ಬ್ರಿಟೀಷ ಕುಲಶಾಸ್ತ್ರೀಯ ಅಧ್ಯಯನಕಾರರ ಪ್ರಕಾರ) ಪರಿಶಿಷ್ಟ ಜಾತಿಯ

1. ಬೇಡಜಂಗಮ್, ಬುಡ್ಗಜಂಗಮ್,
2. ಬೋವಿ, ಓಡ್, ಓಡ್ಡೆ, ಓಡ್ಡರ,
3. ಕೊರವ, ಕೊರವರ, ಕೊರಮ,
4. ಮದಾರಿ,
5. ಶಿಳ್ಳೆಕ್ಯಾತಸ್.

## ಪರಿಶಿಷ್ಟ ಪಂಗಡ

1. ಹಕ್ಕಿಪಿಕ್ಕಿ,
2. ಮೇದ, ಮೇದಾರಿ, ಗೌರಿಗ, ಬುರುಡ,
3. ತೋಡ

1952ರಲ್ಲಿ ವಿಮುಕ್ತಗೊಂಡ ಅಲೆಮಾರಿ ಬುಡಕಟ್ಟುಗಳು 1950 ರಲ್ಲಯೇ ಪ್ರಕಟಗೊಂಡ ಪರಿಶಿಷ್ಟ ಮೀಸಲಾತಿ ಪಟ್ಟಿಯಿಂದ ಹೊರಗುಳಿದು 01–02–1966 ರವರೆಗೆ ಸಂವಿಧಾನ ಬದ್ಧವಾಗಿ ಅನಾಥವಾಗಿದ್ದವು.ನಂತರ ಈ ಬುಡಕಟ್ಟು ಸಮುದಾಯಗಳು 1966 ರಿಂದ 04–03–1997 ರವರೆಗೆ ಕರ್ನಾಟಕ ರಾಜ್ಯದ ಅಲೆಮಾರಿ ಮತ್ತು ಅರೆ ಅಲೆಮಾರಿಗಳು ಪ್ರತ್ಯೇಕ ಪಟ್ಟಿಯಲ್ಲಿ ನೆಲೆ ಕಂಡವು.

12ನೇ ಶತಮಾನದಲ್ಲಿ ಬಸವಾದಿ ಶರಣರ ಆಗಮನದಿಂದ ದೇಶದಲ್ಲಿ ಅನೇಕ ಗುರುತರ ಬದಲಾವಣೆಗಳಾದವು. ದೇಶಿಯ ಸಂಸ್ಕೃತಿಯನ್ನು ಉಳಿಸಲು ಸಂಗೀತ, ಸಾಹಿತ್ಯ, ಕೀರ್ತನೆ, ಪ್ರವಚನ, ಪ್ರದರ್ಶನಾತ್ಮಕ ಕಲೆಗಳು, ಕಥೆ, ಹರಿಕಥೆ, ದಾಸ ಸಾಹಿತ್ಯ ಹೀಗೆ ಹಲವಾರು ಪ್ರಕಾರಗಳು ತಲೆ ಎತ್ತಿ ನಿಂತಾಗ ಇವುಗಳನ್ನು ಜನ ಸಮುದಾಯಕ್ಕೆ ಪರಿಚಯಿಸುವ ಮತ್ತು ನಾಡು–ನುಡಿ, ಕಲೆ ಉಳಿಸುವ ಕೆಲಸ ಕಾರ್ಯಕ್ಕಾಗಿ ಅಲೆಮಾರಿ ಬುಡಕಟ್ಟು ಸಮುದಾಯಗಳ ಪಾತ್ರ ಮುಖ್ಯವಾಯಿತು. ಕಾಡಾಡಿಗಳಾದ ಇವರು ವಲಸೆ ಹಾಗೂ ಧೈರ್ಯ, ಸಾಹಸಕ್ಕೆ ಪ್ರಸಿದ್ಧರಾಗಿದ್ದರು.ಇದನ್ನರಿತ ಶರಣಸಂಪ್ರದಾಯದ ಸಾಹಿತ್ಯ ಹಾಗೂ ಧಾರ್ಮಿಕ ಪ್ರಚಾರಕ್ಕಾಗಿ ಹಲವಾರು ಬಗೆಯ ಮೌಖಿಕ ಸಾಹಿತ್ಯ ಕಲಾಪ್ರಕಾರಗಳನ್ನು ಪ್ರಾರಂಭಿಸಿದರು.ಒಂದೊಂದು ಸಮುದಾಯ ಒಂದೊಂದು ಬಗೆಯ ಪ್ರದರ್ಶನಗಳನ್ನು ಅನುಸರಿಸಿಕೊಂಡು ಹೊರಟರು.ಈ ರೀತಿಯಾಗಿ ಹೊರಟ ಬುಡಕಟ್ಟು ಸಮುದಾಯಗಳಲ್ಲಿ ಕೆಲವರು ಶಿವನ ಲೀಲೆಗಳ ಕುರಿತಾಗಿ ಕಲಾ ಪ್ರದರ್ಶನ, ಇನ್ನು ಕೆಲವರು ವಿಷ್ಣುವಿನ ಮಹಿಮೆಯ ಕುರಿತು ಕಲಾ ಪ್ರದರ್ಶನಗಳನ್ನು ಮಾಡುತ್ತಾ ಹೊರಟರು.ಸಮುದಾಯಗಳಲ್ಲಿ ಬುಡ್ಗ ಜಂಗಮ್, ಚೆನ್ನದಾಸರ್ ಮತ್ತು ದೊಂಬಿದಾಸರು ಪ್ರಮುಖರಾಗಿದ್ದಾರೆ. ಶೈವ ಧರ್ಮವನ್ನು ಪ್ರಚಾರ ಮಾಡುತ್ತಾ ಹೊರಟ ಸಮುದಾಯವನ್ನು ಬುಡ್ಗ ಜಂಗಮ್, ಬೇಡಜಂಗಮ್, ಮಾಲಜಂಗಮ್ ಎಂತಲೂ ವೈಷ್ಣವ ಧರ್ಮವನ್ನು ಪ್ರಚಾರ ಮಾಡುತ್ತಾ ಹೊರಟ ಸಮುದಾಯವನ್ನು ಚೆನ್ನದಾಸರು, ದೊಂಬಿದಾಸರು ಮತ್ತು ದಾಸರು ಎಂದು ಕರೆದರು.ತಾವು ಪ್ರದರ್ಶಿಸುವ ಕಲೆಗಳಿಂದ ಸಮುದಾಯಕ್ಕೆ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕವಾಗಿ ಒಗ್ಗೂಡುವ ಮತ್ತು ತಿದ್ದುವ ಕೆಲ ಕಾರ್ಯವನ್ನು ಬಹಳ ವ್ಯವಸ್ಥಿತವಾಗಿ ಮಾಡುತ್ತಾ ಬಂದಿರುತ್ತಾರೆ.

ಯಾವ ಮಾಧ್ಯಮಗಳಿಲ್ಲದ ಸಂದರ್ಭಗಳಲ್ಲಿ ನೈಜ ರೂಪದ, ದೇವಾನು ದೇವತೆಗಳ ಮತ್ತು ಸಾಂದರ್ಭಿಕ ಘಟನಾವಳಿಗಳ ಪರಿಚಯ ಮಾಡಿಕೊಟ್ಟು ಇತಿಹಾಸವನ್ನು ಜೀವಂತವಾಗಿಸುವಲ್ಲಿ ಇವರು ಪ್ರಮುಖ ರೂವಾರಿಗಳಾಗಿದ್ದಾರೆ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಚಲನಚಿತ್ರಗಳ ಆಗಮನಕ್ಕಿಂತ ಮುಂಚಿತ ದಿನಗಳಲ್ಲಿ ಅತೀ ಪ್ರಭಾವ ಹಾಗೂ ಮಾನ್ಯತೆಗೊಳಪಟ್ಟ ಈ ಕಲೆಗಳು ಕಾಲಕ್ರಮೇಣ ಸಿನಿಮಾ ಹಾಗೂ ದೂರದರ್ಶನ ಪ್ರಭಾವದಿಂದ ಅತಂತ್ರಗೊಂಡವು.ಆದರೆ ಇವರಲ್ಲಿರುವ ಬುಡಕಟ್ಟು, ಕರಕುಶಲ ಹಾಗೂ ಚಿತ್ರಕಲೆ ಹಾಡು ಹಾಗೂ ಪ್ರದರ್ಶನಾತ್ಮಕ ಕಲೆಗಳು ಇಂದಿಗೂ ಜೀವಂತವಾಗಿ ಉಳಿದಿದೆ.

## ಬುಡ್ಗಜಂಗಮ್ ಬುಡಕಟ್ಟು ಪ್ರದರ್ಶನಾತ್ಮಕ ಕಲೆಗಳು

ಬುಡ್ಗಜಂಗವ್ ಅಲೆವಾರಿ ಹಗಲು ವೇಷ, ಬುಡಕಟ್ಟು ಸಮುದಾಯಗಳಲ್ಲಿ ಹಲವಾರು ಪ್ರಕಾರಗಳಿವೆ. ಜನಪದರು ಇವರು ಹಾಕುವ ಕಲಾಪ್ರಕಾರಕ್ಕೆ ಬುರ್ರಕಥೆಯವರು, ಹಗಲುವೇಷಗಾರರು, ವೇಷಗಾರರು, ಬಾಲಸಂತರು, ಬಹುರೂಪಿಗಳು, ಬೈರಾಗಿಗಳು, ಬೀದಿ ಬಾಗೋತದವರು, ಶಾಸ್ತ್ರದವರು, ಕೊಂಡಪಂತು, ಕೊಯಪಂತು, ಸಿದ್ಧರು ಪ್ರಚಲಿತದಲ್ಲಿರುವ ಒಂದು ಸಮುದಾಯದ ಬುಡಕಟ್ಟು ಕಲಾಪ್ರಕಾರಗಳಿವು. ಇವೆಲ್ಲವುಗಳು ಬಹು ಮುಖ್ಯವಾದ ಕಲಾ ಪ್ರಕಾರಗಳು.ಇಡೀ ರಾಷ್ಟ್ರದ ಎಲ್ಲ ಜನವರ್ಗದವರನ್ನು ಮೆಚ್ಚಿಸುವ ಮನರಂಜಿಸುವ ಕಲೆಗಳು.ಇದರ ಹಿಂದೆ ಇರುವ ತುಡಿತ ಮಾತ್ರ ರಾಷ್ಟ್ರ–ನಾಡು ಕಟ್ಟುವ ಕಾರ್ಯ ಇದೆ ಎನ್ನುವುದು ಅಲ್ಲಗಳೆಯುವಂತಿಲ್ಲ. ಈ ಕಲಾಪ್ರಕಾರಗಳು ಕೇವಲ ಇಂತಹ ವರ್ಗದ ಜನರಿಗಾಗಿ ಮೀಸಲಾಗಿವೆ ಎಂದು ಪ್ರದರ್ಶನಗಳನ್ನು ಮಾಡಲಿಲ್ಲ. ಮೇಲು ಕೀಳು, ಸತ್ಯ–ಅಸತ್ಯ, ಧರ್ಮ–ದಾರಿದ್ರ್ಯ ಇವುಗಳನ್ನು ಜಾಗೃತಗೊಳಿಸುವ ಉದ್ದೇಶವು ಅಡಗಿತ್ತು.ಪ್ರಾರಂಭದಲ್ಲಿ ಇಂತಹ ಕೆಲಸಕ್ಕೇನು ಈ ಬುಡಕಟ್ಟುಗಳು ಓಲೈಸಿಕೊಂಡವು.ಆದರೆ ಮುಂದೊಂದು ದಿನ ಇಡಿ ಕುಟುಂಬ ಕಲಾಸಮೂಹವಾಗಿ ಬೆಳೆಯುತ್ತದೆ ಎಂದೆನಿಸಿರಲಿಕ್ಕಿಲ್ಲ.ಆದರೆ ನಾವು ಇವತ್ತಿನ ದಿನ ಗಮನಿಸಿದಾಗ ರಾಷ್ಟ್ರಕ್ಕೆ ಬುಡಕಟ್ಟು ಕಲಾಪ್ರಕಾರದ ಕೊಡುಗೆ ಅಪಾರವೆಂದು ತಿಳಿಯದೆ ಇರಲಾರದು.

## ಬುಡ್ಗಜಂಗಮ ಕಲಾಸಮುದಾಯ

ಇವರಲ್ಲಿ ಲಿಖಿತ ಚರಿತ್ರೆ ಕಾಣಸಿಗದು.ಆದರೆ ಅಲಿಖಿತ ಪಾರಂಪರಿಕ ಸಾಹಿತ್ಯ ಅಪಾರವಿದೆ. ಇವರು ಕಥೆ, ಕಾವ್ಯ, ಶಾಸ್ತ್ರ, ಭೂಗೋಳಗಳನ್ನು ಬುರ್ರಕತೆ ವಾದ್ಯದಿಂದ ಹೇಳುವುದು, ರಾಮಾಯಣ, ಮಹಾಭಾರತದ ಮತ್ತು ದೇವಾನುದೇವತೆಗಳ ಸಾಮಾಜಿಕ ಘಟನೆಗಳ ಹೇಳಿಕೆಗಳನ್ನು ವೇಷ ಧರಿಸಿ ತಮ್ಮದೇ ಆದ ಶೈಲಿಯಲ್ಲಿ ಮನರಂಜಿಸುವರು ಅಭಿನಯ ಕಲೆ, ಮೌಖಿಕ ಸಾಹಿತ್ಯ, ಸಂಗೀತ, ಶಾಸ್ತ್ರ, ವೈದ್ಯಕೀಯ, ನೃತ್ಯ, ದೊಡ್ಡಾಟ, ಒಗ್ಗಟ್ಟು, ವಿನೋದ, ಪುರಾಣ, ತೊಗಲು ಗೊಂಬೆಯಾಟ, ಹಚ್ಚೆ ಹಾಕಿಸಿಕೊಳ್ಳುವುದು ಹೀಗೆ ಅನೇಕ ರೀತಿಯವುಗಳಾಗಿವೆ.

ಆಂಧ್ರದ ಗಡಿಭಾಗವಾದ ಬಳ್ಳಾರಿ, ರಾಯಚೂರು, ಕಲಬುರ್ಗಿ ಮತ್ತು ಉತ್ತರ ಕರ್ನಾಟಕದ ಬೆಳಗಾವಿ, ವಿಜಯಪುರ, ಧಾರವಾಡ ಕಡೆಗಳಲ್ಲಿ ತಮ್ಮ ಸಾಂಪ್ರದಾಯಿಕ ಆಚರಣೆ, ಹಾಡು, ಹಾಡುವುದಲ್ಲದೆ ಪುರುಷನು ಸ್ತ್ರೀವೇಷಧರಿಸಿ ನರ್ತಿಸುತ್ತಾನೆ, ಅಲೆಮಾರಿ ಬುಡಕಟ್ಟಿನ ಬುಡ್ಗಜಂಗಮರು ಅನಾದಿ ಕಾಲದಿಂದಲೂ ನಾಡಿನ ಇತಿಹಾಸ ಮತ್ತು ಧಾರ್ಮಿಕತೆಯನ್ನು ಜಾಗೃತಗೊಳಿಸಿ ಛಿದ್ರಗೊಂಡಿರುವ ದೇಶದ ಇತಿಹಾಸ ಮತ್ತು ಐಕ್ಯತೆಗಾಗಿ ವಿವಿಧ ಕಲಾ ಪ್ರದರ್ಶನ ಇವುಗಳನ್ನು ಹೊತ್ತು ಆಯಾ ಪ್ರದೇಶಕ್ಕೆ ತಕ್ಕ ಹಾಗೆ ಕಲೆಗಳನ್ನು ಮೈಗೂಡಿಸಿಕೊಂಡವರು.

## ಪ್ರದರ್ಶನಾತ್ಮಕ ಕಲೆಗಳು

ಇವರ ಕಲಾ ಪ್ರಕಾರಗಳಲ್ಲಿ ವಿಧಗಳು.

ಹಗಲು ವೇಷ ಕಲಾಪ್ರಕಾರ – 1. ಕೊಂಡಮಾಮ ವೇಷ 2 ಸಿದ್ದರ ವೇಷ (ಸುಡುಗಾಡು ಸಿದ್ದ) 3. ಬಾಲಸಂತೋಷಿ 4. ಬುರ್ರಕಥಾ 5. ಬೀದಿ ಬಾಗೋತ 6. ಬೈರಾಗಿ 7. ಗಿಳಿಶಾಸ್ತ್ರ 8. ತೊಗಲುಗೊಂಬೆಯಾಟ 9. ಹಗಲು ವೇಷ ಇನ್ನೂ ಅನೇಕ ಕಲಾಪ್ರಕಾರಗಳು ಇರಬಹುದು.ಆದರೆ ಇಲ್ಲಿ ಕೇವಲ ಒಂಬತ್ತು ಕಲಾಪ್ರಕಾರಗಳನ್ನು ದಾಖಲಿಸಲು ನನಗೆ ಸಾಧ್ಯವಾಗಿದೆ.

ಈ ಒಂಬತ್ತು ಕಲಾಪ್ರಕಾರಗಳಲ್ಲಿ ಎರಡು ವಿಧಗಳಾಗಿ ಮತ್ತೆ ವಿಂಗಡಿಸಿ ನೋಡಿದಾಗ –

- ಸಮೂಹ ಕಲಾಪ್ರದರ್ಶನ
- ಏಕವ್ಯಕ್ತಿ ಕಲಾಪ್ರದರ್ಶನ ಪ್ರಕಾರ ಇವುಗಳಲ್ಲಿ –
  1. ಹಗಲುವೇಷ, ಬುರ್ರಕಥಾ, ತೊಗಲುಗೊಂಬೆಯಾಟ, ಬಿದಿ ಬಾಗೋತ ಈ ಕಲಾ ಪ್ರಕಾರಗಳು ಸಮೂಹ ಕಲಾ ಪ್ರದರ್ಶನಕ್ಕೆ.
  2. ಬಾಲಸಂತರು, ಭೈರಾಗಿ, ಸುಡಗಾಡ ಸಿದ್ದ, ಕೊಂಡಮಾಮ, ಗಿಳಿಶಾಸ್ತ್ರ, ಇವು ಏಕವ್ಯಕ್ತಿ ಕಲಾಪ್ರದರ್ಶನದ ಪ್ರಕಾರವೆಂದು ವಿಂಗಡಿಸಬಹುದು.

## ಸಮೂಹ ಕಲಾ ಪ್ರದರ್ಶನಗಳು

ರಾಮಾಯಣ, ಮಹಾಭಾರತದಂತಹ ಮತ್ತು ಸಾಮಾಜಿಕ ಕಥೆಗಳನ್ನು ಆಧರಿಸಿದ ಕಿರು ನಾಟಕಗಳನ್ನು ಊರಿನ ಬಯಲು ಪ್ರದೇಶಗಳಲ್ಲಿ ನಾಟಕ ರಂಗಗಳನ್ನಾಗಿ ಆಯ್ದುಕೊಂಡು ಐದಕ್ಕಿಂತ ಹೆಚ್ಚು ಜನ ಕೂಡಿ ನಾಟಕದ ಆಯ್ದ ದೃಶ್ಯಗಳನ್ನು ಒಂದುವಾರ ಇಲ್ಲವೆ ಐದು ದಿನ ಬೇರೆ ಬೇರೆ ನಾಟಕಗಳನ್ನು ಪ್ರದರ್ಶಿಸುತ್ತಾರೆ.

## ಹಗಲು ವೇಷಗಾರಿಕೆಯಲ್ಲಿ ಪ್ರದರ್ಶನಾತ್ಮಕ ಕಲೆಗಳು

1. ವಿಶ್ವಾಮಿತ್ರ ತಪೋಭಂಗ. 2 ಮೋಹಿನಿ ಭಷ್ಮಾಸೂರ. 3. ಸುಂಧೋಪಸುಂದ. 4. ಭೀಮಾಂಜನೇಯ ಯುದ್ದ. 5.ರಾಮರಾವಣನ ಯುದ್ದ. 6. ಕಿರಾತಾರ್ಜಿನ/ಬೇಡರಕಣ್ಣಪ್ಪ. 8. ವಾಲಿಸುಗ್ರೀವ. 9. ಬಿಂಕಿರಾಮಣ್ಣ. 10. ಕುಡದಾಸ/ದಾಸರವೇಷ. 11. ಐನೋರು ವೇಷ. 12.ಗೊರವಯ್ಯ ವೇಷ. 13 ಅರ್ಧನಾರೀಶ್ವರಿ ವೇಷ. 14.ಭೀಮ ಜಟಾಸೂರ. 15 ಜಂಗಮ ವೇಷ. 16 ಪೋಟೇಶಂ. 17. ಬ್ಯಾಡರ ವೇಷ.

ಈ ಎಲ್ಲ ವೇಷಗಳಲ್ಲಿ ಆಯಾ ವೇಷಕ್ಕೆ ತಕ್ಕ ಹಾಗೆ ವಸ್ತ್ರವಿನ್ಯಾಸ ಪರಿಕರಗಳು, ಬಹಳ ಸುಂದರವಾಗಿ ತಯಾರಿಸಿಕೊಳ್ಳುತ್ತಾರೆ. ಮುಖ ವರ್ಣಿಕೆಯಲ್ಲಿ ಮೂಡಿಸುವ, ವರ್ಣವಿನ್ಯಾಸ ಮತ್ತು ಚಿತ್ತಾರಗಳು ಎಂತವರನ್ನೂ ಮೈಮರೆಸುವಂತಿರುತ್ತವೆ. ಕೈಕಟ್ಟು ನಡಕಟ್ಟು, ಕಿರೀಟ, ಮೀಸೆ, ಗಡ್ಡ.ಮುಖವಾಡ, ಗದೆ.ಬಿಲ್ಲು.ಬಾಣ, ಭತ್ತಳಿಕೆ ಹೀಗೆ ಪಾತ್ರಕ್ಕೆ ಎಲ್ಲವುಗಳನ್ನು ಆಯಾ ಕಲಾವಿದರೆ ನಿರ್ಮಿಸಿಕೊಳ್ಳುತ್ತಾರೆ.

## ಹಗಲು ವೇಷದ ತಯಾರಿ

ಬೆಳಗಿನ ಜಾವ ಎದ್ದೊಡನೆ ತಮ್ಮೆಲ್ಲ ಕ್ರಿಯೆಗಳನ್ನು ಮುಗಿಸಿಕೊಂಡು ಮುಖಕ್ಕೆ ಬಣ್ಣ ಕಾಕಿಕೊಳ್ಳಲು ಕುಳಿತುಕೊಳ್ಳುತ್ತಾರೆ. ಕೈಯಲ್ಲೊಂದು ಕನ್ನಡಿ, ಕೈಯಲ್ಲಿ ಇಲ್ಲವೆ. ಒಂದು ಡಬ್ಬಿಯಲ್ಲಿ ಪಾತ್ರಕ್ಕೆ ತಕ್ಕ ಹಾಗೆ ಬಣ್ಣಗಳನ್ನು ಮಿಶ್ರಣ ಮಾಡಿಕೊಂಡು ಅದರಲ್ಲಿ ಸ್ವಲ್ಪ ಪ್ರಮಾಣದಲ್ಲಿ ಕೊಬ್ಬರಿ ಎಣ್ಣೆ ಇಲ್ಲವೆ ನೀರು ಹಾಕಿ ಕಲಕುತ್ತಾರೆ. ಅದನನ್ನು ಮುಖಕ್ಕೆ ತೇಳುವಾಗಿ ಒಂದು ಸಲ ಲೇಪನ ಮಾಡುತ್ತಾರೆ. ನಂತರ ಮುಖಕ್ಕೆ ಬಟ್ಟೆಯಿಂದ ಪೌಡರ ಬಳಿದುಕೊಳ್ಳುತ್ತಾರೆ. ಇದರ ಮೇಲೆ ಮುಖ ಬಣ್ಣದಿಂದ ಗಟ್ಟಿಯಾಗಿ ಅದಕ್ಕೆ ನೀರಿನಿಂದ ಬಣ್ಣದ ಮೇಲ್ಮೈಗೆ ಹಗುರವಾಗಿ ತಾಕಿಸಿದಾಗ ಬಣ್ಣವು ಸಡಿಲಗೊಂಡು ಮುಖದ ಮೇಲೆಲ್ಲ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಚೆನ್ನಾಗಿ ಲೇಪಿತವಾಗುತ್ತದೆ. ನಂತರ ಮುಖದ ಶೃಂಗಾರಕ್ಕಾಗಿ ಉಬ್ಬು, ತಗ್ಗು ಪ್ರದೇಶಗಳಿಗೆ ಕಾಡಿಗೆ ಮತ್ತು ಬಿಳಿಬಣ್ಣ(ಇಂಗಳೀಕ) ಇವುಗಳಿಂದ ನೆರಳು ಬೆಳಕಿನ ಛಾಯೆಗಳನ್ನು ಮಾಡಿಕೊಳ್ಳತ್ತ ಹುಬ್ಬು, ಮೀಸೆ, ಚುಕ್ಕೆಗಳನ್ನು ಎಳೆದುಕೊಳ್ಳುತ್ತಾರೆ. ತುಟಿಗೆ ಕೆಂಪು ಬಣ್ಣದ ಕೊಬ್ಬರಿ ಎಣ್ಣೆ ಕೂಡಿಸಿ ಹಚ್ಚಿಕೊಳ್ಳುತ್ತಾರೆ. ಇದಾದ ಮೇಲೆ ನಾಮ ದೃಷ್ಟಿ ಚುಕ್ಕೆಗಳನ್ನು ಕೊರೆದುಕೊಂಡು ಮುಖದ ಮುಖವರ್ಣಿಕೆಯನ್ನು ಶೃಂಗರಿಸುತ್ತಾರೆ. ತಾವು ನಿರ್ಮಿಸಿರುವ ನಿಸರ್ಗ (ಅಡವಿ)ದಿಂದ ತಂದಿದ್ದ ಕಾಯಿ ಬೇರುಗಳ ಲವಲಾಕ. ಕರ್ಣಕುಂಡಲಗಳನ್ನು ಕೊರಳಲ್ಲಿ ರುದ್ರಾಕ್ಷಿ ಮಾಲೆಗಳನ್ನು ಹಾಕಿಕೊಳ್ಳುತ್ತಾರೆ. ಬಟ್ಟೆ, ರಟ್ಟು ಮುತ್ತುಗಳಿಂದ ತಯಾರಿಸಿದ ನಡಕಟ್ಟು,ಕೈಕಟ್ಟುಗಳನ್ನು ಕಟ್ಟಿಕೊಳ್ಳುತ್ತಾರೆ.

ಸೀರೆ, ಬಟ್ಟೆಗಳಿಂದ ತಾವೇ ಹೆಣಿಕೆ ಇಲ್ಲವೆ ಹೊಲಿಗೆ ಯಂತ್ರದಲ್ಲಿ ತಾವೆ ಹೇಳಿ ಹೊಲಿಸಿಕೊಂಡಿರುವ ವಸ್ತ್ರಗಳನ್ನು ಮೈಮೇಲೆ ಹಾಕಿಕೊಳ್ಳುವರು.ರಟ್ಟಿನಿಂದ ಇಲ್ಲವೆ ತಗಡಿನ ಡಬ್ಬಿಗಳಿಂದ ನಿರ್ಮಿಸಿದ ಚಿತ್ತಾಕರ್ಷಕ ಕಿರೀಟವನ್ನು ತಲೆಗೆ ಹಾಕಿ ಕೈಯಲ್ಲಿ ಗದೆ ಇಲ್ಲವೆ ಕತ್ತಿ ಹಿಡಿದು ಹೊರಟರೆ ಎಂಥ ಮಹಾರಾಜನನ್ನು ಮೀರಿಸುವ ವೇಷ ಇವರದಾಗಿರುತ್ತದೆ.

ಸ್ತ್ರೀ ವೇಷಕ್ಕೆ ವಿಶೇಷವಾಗಿ ಉದ್ದವಾದ ಕೂದಲುಗಳನ್ನು ಬಿಟ್ಟಿರುತ್ತಾರೆ.ಅಲ್ಲದೆ ಮುಖಕ್ಕೆ ಬಣ್ಣ ಹಾಕಿಕೊಂಡ ಮೇಲೆ ತುಂಬ ನಾಜೂಕಾದ ಚುಕ್ಕೆಗಳಿಂದ ಶೃಂಗರಿಸಿಕೊಂಡಿರುತ್ತಾರೆ.ರೌದ್ರ ಪಾತ್ರಗಳಲ್ಲಿ ತುಂಬ ಗಾಢವಾದ ಮತ್ತು ಕೆಂಪು ವರ್ಣದ ಪ್ರಖರ ವರ್ಣ ಲೇಪನಗಳನ್ನು ಮಾಡಿಕೊಂಡು ಕಣ್ಣಿನ ಭಾಗಕ್ಕೆ ಬಿಳಿ ಕಪ್ಪು ವರ್ಣಗಳನ್ನು ಸುತ್ತಲೂ ಲೇಪಿಸಿ ಅದಕ್ಕೆ, ಬಿಳಿ, ಕೆಂಪು, ಹಳದಿ, ಬಣ್ಣದಿಂದ ಗೆರೆ ಮತ್ತು ಚುಕ್ಕೆಗಳನ್ನು ಶೃಂಗರಿಸುತ್ತಾರೆ.

ಭೂತ ಪಿಶಾಚಿ. ರಕ್ಕಸ ಪಾತ್ರಗಳಿಗೆ ಕಪ್ಪು ಬಣ್ಣ ಬಳಿದಿರುತ್ತಾರೆ. ಇಲ್ಲವೇ ಮುಖವಾಡ ಧರಿಸುತ್ತಾರೆ. ಶಿವ. ಕೃಷ್ಣ, ರಾಮನ ಪಾತ್ರಗಳಿಗೆ ನೀಲಿ ವರ್ಣಗಳಿಂದ ಶೃಂಗರಿಸಿಕೊಳ್ಳುತ್ತಾರೆ.

ಹನುಮನ ವೇಷಕ್ಕೆ ಗಿಳಿಹಸಿರು ಇಲ್ಲವೆ. ಹಳದಿ ಬಿಳಿವರ್ಣ ಮಿಶ್ರಿತ ವರ್ಣವನ್ನು ಲೇಪಿಸುತ್ತಾರೆ. ಅಲ್ಲದೆ ಆಂಜನೆಯನ ವೇಷಕ್ಕಾಗಿ ಬಟ್ಟೆ ಇಲ್ಲವೆ ಅಲ್ಯುಮಿನಿಯಂ ಬಟ್ಟಲಿನಿಂದ ಮುಖವಾಡ ಮಾಡಿ ಅದಕ್ಕೆ ಕೆಂಪುಬಣ್ಣದ ವಾರ್ನಿಸ ಹಚ್ಚಿ ಅದನ್ನು ಮುಖಕ್ಕೆ ಕಟ್ಟಿಕೊಳ್ಳುತ್ತಾರೆ. ಬಾಲವನ್ನು ತಂತಿಗೆ ಬಟ್ಟೆ ಸುತ್ತಿ ತಯಾರಿಸುತ್ತಾರೆ. ಕಣ್ಣುರೆಪ್ಪೆ ಮತ್ತು ಗಡ್ಡವನ್ನು ಕುರಿವು ಉಣ್ಣೆಯಿಂದ ತಯಾರಿಸಿಕೊಳ್ಳುತ್ತಾರೆ. ಈ ರೀತಿಯಾಗಿ ತಯಾರಿ ಮಾಡಿಕೊಂಡು ಆಂಜನೇಯನ ಪ್ರತಿರೂಪವಂತೆ ನಟಿಸಿ ಕಲಾಪ್ರದರ್ಶನ ನೀಡುವರು.

ಅಲೆಮರಿ ಬುಡ್ಗಜಂಗಮ, ಹಗಲು ವೇಷಗಾರರ ಚಿತ್ರಕಲೆಯ ಕುರಿತು ದಾಖಲೆಗಳು ಹೆಚ್ಚಾಗಿ ಸಿಗದಿದ್ದರೂ ಅವರ ದಿನನಿತ್ಯದ ವೃತ್ತಿಯ ಸಂದರ್ಭದಲ್ಲಿ ಅವರ ಬದುಕಿನ ಮಧ್ಯ ಅವರದೇ ಆದ ಕಲೆ ಅರಳುತ್ತದೆ.ಮತ್ತು ಅದು ಉಳಿದುಕೊಂಡಿದೆ. ಇದನ್ನು ದಾಖಲಿಸುವುದು ತುಂಬ ಪ್ರಾಮುಖ್ಯವಾಗಿದ್ದು, ನಾಡಿನುದ್ದಕ್ಕೂ ಹರಡಿದ ಇವರ ಕಲಾ ಪರಂಪರೆಯನ್ನು ಕರ್ನಾಟಕ ಬುಡ್ಗಂಜಗಮರ ಬುಡಕಟ್ಟು ಜಾನಪದ ಕಲೆಯನ್ನು ಅಧ್ಯಯನ ಮಾಡಿ ಜಾನಪದ ದೃಶ್ಯಕಲೆಯ ಕರಕುಶಲಕಲೆಗಳ ಬೆಳವಣಿಗೆಯ ಪ್ರಾರಂಭಿಕ ಹಂತಗಳನ್ನು ಹಾಗೂ ಪ್ರದರ್ಶಕ ಕಲಾ ಬೆಳವಣಿಗೆಯನ್ನು ಅಧ್ಯಯನ ಮೂಲಕ ಕಟ್ಟಿಕಟ್ಟಿಕೊಡಲು ಪ್ರಾಮಾಣಿಕ ಪ್ರಯತ್ನ ಮಾಡಬೇಕಾಗಿದೆ.

ಔದ್ಯೋಗಿಕರಣ ಯಾಂತ್ರೀಕರಣದಿಂದಾಗಿ ಮಾನವ ಜೀವನ ಮತ್ತು ಸಮಾಜದಲ್ಲಿ ಅನೇಕ ಬದಲಾವಣೆಗಳನ್ನು ಕಾಣುತ್ತಿದ್ದೇವೆ. ಯಾಂತ್ರಿಕತೆಯಿಂದ ನಾಗರೀಕತೆ ಬೆಳೆದಂತೆ ಮನುಷ್ಯನ ಜೀವನ ವಿಧಾನ, ಅವನ ಆಲೋಚನಾ ಸರಣಿ, ಅವನ ಆಚಾರ ವಿಚಾರ, ಕಲೆ ಸಂಸ್ಕೃತಿ ಮುಂತಾದ ಅನೇಕ ಅಂಶಗಳಲ್ಲಿ ಬದಲಾವಣೆಗಳನ್ನು ಕಾಣುತ್ತಿದ್ದೇವೆ. ಇವತ್ತು ಜಾಗತೀಕರಣ, ಕಂಪ್ಯೂಟರಿಕರಣದಿಂದಾಗಿ ವಿಶಾಲವಾದ ಜಗತ್ತು ಒಂದು ಸಣ್ಣ ಹಳ್ಳಿಯಾಗಿ ಪರಿಣಮಿಸಿದೆ ಆಧುನಿಕ ವಿಜ್ಞಾನ ತಂತ್ರಜ್ಞಾನ, ತಂತ್ರಜ್ಞಾನದ ಆವಿಷ್ಕಾರಗಳಿಂದಾಗಿ ಜಾನಪದ ಸಂಪ್ರದಾಯ, ನಂಬಿಕೆ, ಆಚರಣೆಗಳಲ್ಲಿ ಬದಲಾವಣೆಗಳಾಗುತ್ತಿವೆ. ಆಧುನಿಕತೆಯ ಪ್ರಭಾವ ಶಿಷ್ಟ ಸಂಸ್ಕೃತಿಗಿಂತಲೂ, ಜಾನಪದ ಸಂಪ್ರದಾಯ, ನಂಬಿಕೆ, ಆಚರಣೆಗಳಲ್ಲಿ ಬದಲಾವಣೆಗಳಾಗುತ್ತಿವೆ. ಆಧುನಿಕತೆಯ ಪ್ರಭಾವ ಶಿಷ್ಟ ಸಂಸ್ಕೃತಿಗಿಂತಲೂ, ಜಾನಪದ ಸಂಸ್ಕೃತಿ ಮೇಲೆ ವಿಶಿಷ್ಟವಾಗಿ ಕಂಡು ಬರುತ್ತಿದೆ. ಇದರಿಂದ ಹಾಡುಗಳು ಮುಂತಾದವುಗಳು ಇಂದು ಜನರಿಂದ ಕಣ್ಮರೆಯಾಗಿವೆ ಅದರಂತೆ ಜನಪದ ಕಲಾವಿದರ ಮೇಲೂ ಅದು ಪರಿಣಾಮ ಬೀರಿದೆ, ಸಿನಿಮಾ ಟಿ.ವಿ ಕ್ಯಾಸಿಟ್ಟು, ಸಿ.ಡಿ ಮುಂತಾದ ದೃಶ್ಯ ಶ್ರವಣೋಪಕರಣಗಳು ಹಾವಳಿಗಳಿಂದಾಗಿ ವೃತ್ತಿ ಕಲವಿದರು ಮತ್ತು ಅವರ ಕಲೆಗಳು ನಶಿಸಿ ಹೋಗುತ್ತಿವೆ. ಬದಲಾದ ಜನರ ಮನೋಧೋರಣೆ ನಿರುದ್ಯೋಗ ಮುಂತಾದವುಗಳಿಂದ ಎಷ್ಟೋ ಜನ ಜಾನಪದ ವೃತ್ತಿ ಕಲಾವಿದರು ಅನಿವಾರ್ಯವಾಗಿ ಅನ್ಯ ಮಾರ್ಗಗಳನ್ನು ಅನುಸರಿಸರಿಸುತ್ತಲಿದ್ದಾರೆ. ಇನ್ನು ಅನೇಕ ಕಲಾವಿದರು ತಮ್ಮ ಹೊಟ್ಟೆ ಪಾಡಿಗಾಗಿ ಎಷ್ಟೇ ಬಡತನವಿದ್ದರೂ, ಎಷ್ಟೇ ಕಷ್ಟ ಬಂದರೂ ತಮ್ಮ ಕಲೆಯನ್ನು ಪ್ರದರ್ಶಿಸುತ್ತ ತಮ್ಮಲ್ಲಿಯ ಕಲೆಯನ್ನ ಜೀವಂತವಾಗಿ ಉಳಿಸಿಕೊಂಡು ಬರುತ್ತಿದ್ದಾರೆ.ಇವರಿಗೆ ಕಲೆಯೇ ಬದುಕೇ ಕಲೆಯಾಗಿದೆ.ಇದನ್ನು ಬಿಟ್ಟು ಬೇರೆ ಕೆಲಸ ಮಾಡುವುದು ಇವರಿಗೆ ಗೊತ್ತೇ ಇಲ್ಲ ಹೀಗಾಗಿ ನಾವು ಹಳೆ ತಲೆಮಾರಿನವರನ್ನು ಇಂದಿಗೂ ಕಾಣುತ್ತಿದ್ದೇವೆ ಪ್ರದರ್ಶನವೇ ಬದುಕಾಗಿದೆ. ತಮ್ಮ ಕಲೆಯ ಪ್ರದರ್ಶನಕ್ಕೆ ಬದಲಾಗಿ ಇವರು ಏನನ್ನು ಬಯಸುವುದಿಲ್ಲ. ಹಣ ಸಂಪಾದನೆ, ಬಿರುದು, ಕೀರ್ತಿ ಮುಂತಾದ ಆಶೆ ಆಕಾಂಕ್ಷೆಗಳು ಇವರಲ್ಲಿ ಇರುವುದಿಲ್ಲ ತಾವಿರುವುದು ತಮ್ಮ ಕಲಾ ಪ್ರದರ್ಶನಕ್ಕಾಗಿ, ಇದರಿಂದ ನಮಗೆ ದಿನದ ಹೊಟ್ಟೆ ತುಂಬಿದರೆ ಸಾಕೆನ್ನುತ್ತಾರೆ ಇಂದಿನ ಕಂಪ್ಯೂಟರೀಕರಣ ಯುಗದಲ್ಲೂ ಈ ಕಲಾವಿದರು ಸಂಘರ್ಷ ಮಾಡಿ ತಮ್ಮ ಕಲೆಯನ್ನು ಉಳಿಸಿ ಬೆಳೆಸಿ ತಮ್ಮ ಅಸ್ತಿತ್ವಕ್ಕಾಗಿ ಹೋರಾಡುತ್ತಿದ್ದಾರೆ. ಸಂಘರ್ಷಮಯಿ ಕಲಾವಿದರ ಸಾಲಿನಲ್ಲಿ ಹಗಲು ವೇಷದ ಬುಡ್ಗಜಂಗಮರ ಹಾಗೂ ಅಲೇಮಾರಿ ಸಮುದಾಯಗಳ ಕಲಾವಿದರಗಳಾಗಿದ್ದಾರೆ.

■■

ವಿದ್ಯಾನಿಧಿ VPG ಪ್ರಕಾಶನ ®
ಶ್ರೀ ಶಿವಕುಮಾರ ಏಜನ್ಸಿ®
ಶೈಕ್ಷಣಿಕ ಪುಸ್ತಕಗಳ ಪ್ರಕಾಶಕರು ಮತ್ತು ಮಾರಾಟಗಾರರು
ಸ್ಟೇಶನ್ ರೋಡ ಮತ್ತು 'ನನಸು' ಜೆ. ಟಿ. ಮಠ ರೋಡ,
ಗದಗ-582 101
ದೂರವಾಣಿ : 08372-237527, 277527
e-mail : vidyanidhiprakashana@gmail.com. www.vidyanidhionline.com

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಶಾಸನಗಳಲ್ಲಿ ಹಿಂದುಳಿದವರು

✍ **ಎಸ್. ಎಂ. ಸುಬ್ಬಯ್ಯ,** ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿ, ಶಾಸನಶಾಸ್ತ್ರತ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ.

ಬಳ್ಳಾರಿ ಜಿಲ್ಲೆಗೆ ಸಂಬಂಧಿಸಿದಂತೆ ಕೆಲವು ಶಾಸನಗಳನ್ನು ಅವಲೋಕಿಸಿದಾಗ ಹಿಂದುಳಿದವರು ಮತ್ತು ದಲಿತರ ಬಗ್ಗೆ ಉಲ್ಲೇಖಗಳು ಕಂಡುಬರತ್ತವೆ.

ಸಂಡೂರಿನ, ಕುಮಾರಸ್ವಾಮಿ ದೇವಾಲಯದ ಪ್ರವೇಶದ ಎಡಹಸ್ತಿ ಹಸ್ತದಲ್ಲಿನ ಶಾಸನವು ಕ್ರಿ.ಶ. 5–4 –1074ಕ್ಕೆ ಸೇರಿದ್ದು, ಅದರಲ್ಲಿ ಹಿಂದುಳಿದವರನ್ನು ಉಲ್ಲೇಖಿಸಿದೆ. ಅವರುಗಳೆಂದರೆ – [1]ಕಲ್ಕುಟಿಗರಾದ ಬಿಯಳಚಟ್ಟಿ, ಬೆನಗಬೋವ, ಕಮ್ಮಾರನಾದನಾಕ.

ಹರಪನಹಳ್ಳಿ ತಾಲೂಕು ಬಾಗಳಿ ಗ್ರಾಮದ ಮಳೆ ಮಲ್ಲಪ್ಪ ದೇವಾಲಯದೊಳಗಿರುವ ಶಾಸನವು ಕ್ರಿ. ಶ. 28–12–1108ಕ್ಕೆ ಸಂಬಂಧಪಟ್ಟಿದ್ದು, ಚಾಳುಕ್ಯ ತ್ರಿಭುವನ ಮಲ್ಲನು ಆಳುತ್ತಿದ್ದಾಗ ಇವನ ಸಾಮಂತ ತ್ರಿಭುವನ ಮಲ್ಲವೀರಪಾಂಡ್ಯನು ನೊಳಬವಾಡಿ – 32000 ವನ್ನು ಆಳುತ್ತಿದ್ದಾಗ ಇವನ ಸಾಮಂತ ವಿಜಯಪಾಂಡ್ಯ ದೇವ ಇವನ ಪಸಾಯ ವಿಜಯಹೆಮ್ಮಾಡಿ ದಂಡನಾಯಕನು ರಾಜನ ಕರ್ತವ್ಯಗಳನ್ನು ಪಾಲಿಸುತ್ತಿರಲು. [2]ಮಹಾವಡ್ಡ ವ್ಯವಹಾರಿ, ಚಿನ್ನಗೆಯಿ ಕಪ್ಪಿಸೆಟ್ಟಿ, ಹೊನ್ನ ಬಾಚಯ್ಯ, ಪದ್ಮಣ, ಶರ್ವದೇವನಾಯಕ, ಮಹಾಣ್ಣ ಸೇನಬೋವ ಸಂಕಟ್ನ ಮೊದಲಾದ ಹಿಂದುಳಿದ ವರ್ಗಗಳನ್ನು ಇಲ್ಲಿ ಹೆಸರಿಸಬಹುದು.

ಬಳ್ಳಾರಿ ತಾಲೂಕು– ಯಲ್ಪಿ – ಗ್ರಾಮದ ಆಂಜನೇಯ ದೇವಾಲಯದ ಬಳಿ ಕಲ್ಲಿನ ಮೇಲೆ ಇರುವ ಶಾಸನ ಕ್ರಿ. ಶ. 14–3–1544 ಕ್ಕೆ ಸೇರಿದ್ದು, ಇದರಲ್ಲಿ ಶ್ರೀ ಮನ್ಮಮಹಾರಾಜ ರಾಜಾಧಿರಾಜ ರಾಜಪರಮೇಶ್ವರ ಶ್ರೀ ವೀರಪ್ರತಾಪ ಸದಾಶಿವ ಮಹಾರಾಜರ, ಕಾರ್ಯಕರ್ತನಾದ ರಾಮರಾಜಯ್ಯ ಮಹಾ ಅರಸುಗಳ ಕಾಲದಲ್ಲಿದ್ದ ಹಿಂದುಳಿದವರು [3]ನಾಯಿಂದರಿಗೆ ಸಿಧಾಯ ಕಟ್ಟುಸಿದ್ದಾಯ, ಬಿರಾಡ, ಈ ವರ್ಗಗಳ ಉಲ್ಲೇಖವಿದೆ.

ಸಂಡೂರಿನ ತಾರಕೇಶ್ವರ ಗುಡಿಯ ಮುಂದೆ ಬಿದ್ದಿರುವ ಶಾಸನದ ಕಾಲ 29–5–1544 ಇದರಲ್ಲಿ ಸದಾಶಿವದೇವರಾಯನ ಆಳ್ವಿಕೆ ಕಾಲದಲ್ಲಿದ್ದ [4]ಹಿಂದುಳಿದ 'ನಾಯಿಂದ' ರನ್ನು ಉಲ್ಲೇಖಿಸಬಹುದು.

ಕೊಟ್ಟೂರು ಪಟ್ಟಣದಲ್ಲಿ ಮೂರುಕಲ್ಲು ಮಠದ ಮುಂದೆ ಇರಿಸಿರುವ ಶಾಸನ ಕ್ರಿ.ಶ. 11–7–1221ಕ್ಕೆ ಸೇರಿದ್ದು, ಹೊಯ್ಸಳ ವೀರನರಸಿಂಹನ ಆಳ್ವಿಕೆ ಕಾಲದಲ್ಲಿದ್ದ [5]ಸೋಮಯ್ಯ, ಕಲ್ಕುಟಿಗೆ ಅಣ್ಣೋಜ ಎಂಬ ಹಿಂದುಳಿದವರನ್ನು ಗುರುತಿಸಬಹುದು.

ಕೊಟ್ಟೂರು ಪಟ್ಟಣದ ಇನ್ನೊಂದು ಶಾಸನದಲ್ಲಿ ಮಡಿವಾಳರ ಇಲ್ಲೇಖವಿದೆ.

ಹರಪನಹಳ್ಳಿ ತಾಲೂಕು ಬಾಗಳಿ ಗ್ರಾಮದ ಸೂರ್ಯನಾರಾಯಣ ದೇವಾಲಯದ ಹತ್ತಿರದ ಶಾಸನವೊಂದು ಕ್ರಿ.ಶ. 30–5–1547 ನೇ ಇಸ್ವಿಯಾಗಿದ್ದು ಶ್ರೀ ಮನ್ಮಮಹಾ ರಾಜಾಧಿರಾಜ ರಾಜ ಪರಮೇಶ್ವರ ಶ್ರೀ ವೀರಪ್ರತಾಪ ಸದಾಶಿವ ಮಹಾರಾಯರು ವಿದ್ಯಾನಗರದಲ್ಲಿ ರತ್ನ ಸಿಂಹಾಸನಾರೂಢರಾಗಿ ಆಳ್ವಿಕೆ [6]ಮಾಡುತ್ತಿರುವಾಗ ಹಿಂದುಳಿದವರಾದ ತಿಮ್ಮೋಜ ಕೊಂಡೋಜ ಎಂಬುವರ ಉಲ್ಲೇಖವಿದೆ.

ಕೊಟ್ಟೂರು ಪಟ್ಟಣದಲ್ಲಿ ಕರಣಿಕರ ಮನೆಯ ಮುಂದೆ ಗೋಡೆಗೆ ಸೇರಿಸಿದ ಶಾಸನ (ಕ್ರಿ. ಶ. 30–01–1548) ವು ಶ್ರೀಮಾನ್ ಮಹಾ ರಾಜಧಿರಾಜ ರಾಜಪರಮೇಶ್ವರ, ಶ್ರೀ ವೀರಪ್ರತಾಪ, ಸದಾಶಿವರಾಯರು ವಿದ್ಯಾನಗರಿಯಲ್ಲಿ ರಾಜ್ಯಾಡಳಿತ ಮಾಡುತ್ತಿದ್ದಾಗ [7]ನಾಯಿಂದರಾದ ತಿಮ್ಮೋಜ, ಕೊಂಡೋಜ, ಭದ್ರೋಜ, ಎಂಬ ಹಿಂದುಳಿದವರು ಇದ್ದರು ಎಂದು ತಿಳಿದುಬರುತ್ತದೆ.

ಹರಪನಹಳ್ಳಿ ತಾಲೂಕು, ಮೈದೂರು ಗ್ರಾಮದ ನಿವೇಶನವೊಂದರಲ್ಲಿ ಕ್ರಿ.ಶ.1548ರ ಫೆಬ್ರುವರಿಯಲ್ಲಿ ಸದಾಶಿವರಾಯ ಕಾಲದಲ್ಲಿ [8] ಹಿಂದುಳಿದವರಾದ ತಿಂಮೋಜಿ, ಕೊಂಡೋಜ, ಭದ್ರೋಜ, ನಾಯಿಂದ, ಎಂಬ ವರ್ಗಗಳ ಉಲ್ಲೇಖವಾಗಿರುವುದು ಕಂಡುಬರುತ್ತದೆ.

ಹರಪನಹಳ್ಳಿ ತಾಲೂಕು ಅರಸಿಕೇರೆ ಗ್ರಾಮದ ಕೆರೆಕಟ್ಟೆಯ ಬಳಿಯ ಹೊಲದಲ್ಲಿ ನಿಂತಿರುವ ಶಾಸನವು [9] ಬಗುಳಿ ಬಸವಪ್ಪನಾಯಕ, ಅರಸಿಕೆರೆ ಮುರಿಗೆ ಸಾಂತರಾವು, ಗಿರಿಮಲ್ಲಣ, ಬಸವಯ್ಯ ಮುಂತಾದ ಹಿಂದುಳಿದವರನ್ನು ಈ ಶಾಸನದಲ್ಲಿ ಗುರುತಿಸಬಹುದು.

ಬಳ್ಳಾರಿ ಜಿಲ್ಲೆಯ ಶಾಸನಗಳನ್ನು ಪರಿಶೀಲಿಸಿದಾಗ ಹೆಚ್ಚು ಶಾಸನಗಳು, ವಿಜಯನಗರ ಸಾಮ್ರಾಜ್ಯವನ್ನಾಳಿದ ಸದಾಶಿವರಾಯರು ಮತ್ತು ಅವರ ಕಾರ್ಯಕರ್ತರಾದ ರಾಮರಾಜ ದೇವರ ರಾಯರಿಗೆ ಸೇರಿವೆ. ಈ ಶಾಸನಗಳಲ್ಲಿ ಮಡಿವಾಳರು, ಬಡಿಗಿ, ಕಮ್ಮಾರರು, ನಾಯಿಂದರು, ಪಾತ್ರದವರು, ಕುರಿಗಾಯಿಗಳು ಮುಂತಾದ ಹಿಂದುಳಿದವರನ್ನು ಕಾಣಬಹುದು.

## ಅಡಿ ಟಿಪ್ಪಣಿಗಳು

1. ದೇವರ ಕೊಂಡಾರೆಡ್ಡಿ ಮತ್ತು ಇತರರು, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–1, 1998 ಬಳ್ಳಾರಿ, ಪು–194.
2. ಅದೇ ಹರಪನಹಳ್ಳಿ, ಬಾಗಳಿ, ಪು–921
3. ಅದೇ ಬಳ್ಳಾರಿ,ಯಲ್ಪಿ– ಪು–85
4. ಅದೇ ಸಂಡೂರು, ಪು– 201
5. ಅದೇ ಕೂಡ್ಲಿಗಿ, ಕೊಟ್ಟೂರು, ಪು–235
6. ಅದೇ ಹರಪನಹಳ್ಳಿ, ಬಾಗಳಿ, ಪು–930
7. ಅದೇ ಕೂಡ್ಲಗಿ, ಕೊಟ್ಟೂರು, ಪು–230
8. ಅದೇ ಹರಪನಹಳ್ಳಿ, ಮೈದೂರು, ಪು–940
9. ಅದೇ ಹರಪನಹಳ್ಳಿ, ಅರಸಿಕೇರೆ, –ಪು–999

■■

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಧಾರವಾಡ ಜಿಲ್ಲೆಯ ವ್ಯಕ್ತಿವಾಚಿ ಸ್ಥಳನಾಮಗಳು

✍ **ರಾಜೇಂದ್ರ ಹ. ಹೊನ್ನಾಪೂರ,** ಜಾನಪದ ಅಧ್ಯಯನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಗ್ರಾಮಗಳಿಗೆ ನಾಮಕರಣ ಪ್ರಕ್ರಿಯೆಯ ಮೊದಲ ಘಟ್ಟದಲ್ಲಿ ನಿಸರ್ಗವನ್ನು ಆಧಾರವಾಗಿಟ್ಟುಕೊಂಡು ಎರಡನೇ ಘಟ್ಟದಲ್ಲಿ ಜನಾಂಗವನ್ನು ಆಧಾರವಾಗಿಟ್ಟುಕೊಂಡು ಮೂರನೇ ಘಟ್ಟದಲ್ಲಿ ವ್ಯಕ್ತಿಯನ್ನು ಆಧಾರವಾಗಿಟ್ಟುಕೊಂಡು ಸ್ಥಳನಾಮಗಳಿಗೆ ನಾಮಕರಣ ನಡೆದಿರಲು ಸಾಧ್ಯ. ಸ್ಥಳನಾಮಗಳಿಗೆ ವ್ಯಕ್ತಿವಾಚಿ ಹೆಸರಿಡಲು ಕಾರಣ ಗತಿಸಿಹೋದ ತನ್ನ ಹಿರಿಯ ಮೇಲಿನ ಪ್ರೀತಿ, ನೆನಪು ಅಜರಾಮವಿರಲಿ ಎಂದು ಗ್ರಾಮಗಳಿಗೆ ನಾಮಕರಣ ಮಾಡಿದ್ದಾನೆ. ಧಾರವಾಡ ಜಿಲ್ಲೆಯ ಸ್ಥಳನಾಮಗಳಲ್ಲಿ ಪುರುಷ ಪ್ರಧಾನ ಗ್ರಾಮನಾಮಗಳು ಯಥೆಚ್ಛವಾಗಿ ಕಂಡುಬರುತ್ತದೆ. ಸ್ತ್ರೀ ಪ್ರಧಾನವಾದ ಗ್ರಾಮನಾಮಗಳು ಕಡಿಮೆ ಎಂಬುದನ್ನು ಸ್ಥಳನಾಮಗಳ ಅಧ್ಯಯನದ ಮೂಲಕ ಗುರುತಿಸಬಹುದು. ಜನಸಂಖ್ಯೆ ಹೆಚ್ಚಿದಂತ್ಯಲ್ಲಾ ಆಹಾರ, ನೀರು ಸಾಗುವಳಿಗೆ ಭೂಮಿ ಪಡೆಯಲು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಹೋಗಿ ಮೊದಲು ನೆಲೆಸಿದ ವ್ಯಕ್ತಿಯ ಹೆಸರಿನಿಂದ ಆ ಗ್ರಾಮಕ್ಕೆ ನಾಮಕರಣ ಮಾಡಿರಲಿಕ್ಕೆ ಸಾಧ್ಯ.

ಧಾರವಾಡ ಜಿಲ್ಲೆಯ ವ್ಯಕ್ತಿವಾಚಿ ಸ್ಥಳನಾಮಗಳನ್ನು ಶಾಸನಾಧಾರ ದಿಂದ ಕಥೆ, ಐತಿಹ್ಯ ಸಂದರ್ಶನಗಳ ಮುಖಾಂತರ ಅಧ್ಯಯನ ಕೈಗೊಳ್ಳಲಾಗಿದೆ. ವ್ಯಕ್ತಿವಾಚಿ ಸ್ಥಳನಾಮಗಳನ್ನು ಎರಡು ಪ್ರಕಾರಗಳಲ್ಲಿ ವಿಂಗಡಿಸಲಾಗಿದೆ. ಅವುಗಳನ್ನು ಈ ಕೆಳಗಿನ ಮೂಲಕ ತಿಳಿಯಬಹುದು.

## 1. ಪುರುಷ ವಾಚಿಸ್ಥಳನಾಮಗಳು

ಪುರುಷ ವ್ಯಕ್ತಿಯ ಹೆಸರಿನಿಂದ ಬಂದ ಗ್ರಾಮಗಳನ್ನು ಗುರುತಿಸಲು "ನಿರ್ದಿಷ್ಟದ (ಪೂರ್ವಪದ) ಅಂತ್ಯದಲ್ಲಿ ನ, ಣ, ಗ, ಅಕ್ಷರಗಳಿದ್ದರೆ ಅದು ವ್ಯಕ್ತಿ ಹೆಸರಿನಿಂದ ಬಂದ ಗ್ರಾಮವಾಗಿರಲಿಕ್ಕೆ ಸಾಧ್ಯ.ಮತ್ತು ನಿರ್ದಿಷ್ಟ ಅಂತ್ಯದಲ್ಲಿ ಏಕಾರವಿದ್ದರೆ ಅದು ಅಯ್ಯ ಎಂಬುದರ ಸವೆದ ರೂಪವಿರುತ್ತದೆ."[1]

ಧಾರವಾಡ ಜಿಲ್ಲೆಯಯಲ್ಲಿ ಕಂಡು ಬರುವ ಪುರುಷ ವ್ಯಕ್ತಿವಾಚಿ ಹೆಸರನ್ನು ಈ ಕೆಳಗಿನಂತೆ ಗುರುತಿಸಲಾಗಿದೆ.

### ಅಮ್ಮಿನಭಾವಿ

ಈ ಗ್ರಾಮದಲ್ಲಿ ದೊರೆತ "ಕ್ರಿ.ಶ. 1071–72 ರ ಶಾಸನದಲ್ಲಿ ಅಮ್ಮಯನ ಬಾವಿ ಎಂದು ದಾಖಲಾವಿದೆ."[2] ಅಮ್ಮಯ್ಯ ಎಂಬ ವ್ಯಕ್ತಿ ಬಾವಿ ಕಟ್ಟಿಸಿದ್ದ ಪ್ರಯುಕ್ತ ಈ ಗ್ರಾಮಕ್ಕೆ ಅಮ್ಮಯನಬಾವಿ ಎಂದು ಕಾಲಾನಂತರದಲ್ಲಿ ಅಮ್ಮಿನಭಾವಿ ಎಂದು ಹೆಸರು ಬಂದಿರಬಹುದು. ಈಗಲೂ ಸಹಿತ ಈ ಗ್ರಾಮದಲ್ಲಿ ಬೃಹದಾಕಾರದ ಬಾವಿಯನ್ನು ಕಾಣಬಹುದು.

ಅಮ್ಮಯ್ಯ+ನ+ಬಾವಿ=ಅಮ್ಮಯ್ಯನಬಾವಿ > ಅಮ್ಮಯನಬಾವಿ> ಸಮ್ಮೆಯನಬಾವಿ> ಅಂಮಯನಬಾವಿ> ಅಮೆನಬಾವಿ> ಅಮ್ಮಿನಭಾವಿ ಎಂದು ಇದರ ನಿಷ್ಪತ್ತಿ ಗುರುತಿಸಬಹುದು.

### ಅಂಚಟಗೇರಿ

ಅಂಚಟ ಎಂಬ ವ್ಯಕ್ತಿಯಿಂದ ಈ ಊರಿಗೆ ಅಂಚಟಗೇರಿ ಎಂದು ಹೆಸರು ಬಂದಿರಬಹುದು. ಅಂಚಟ + ಕೇರಿ= ಅಂಚಟಕೇರಿ> ಅಂಚಟಗೇರಿ ಎಂದಾಗಬಹುದು.

### ಅಗ್ರಹಾರ ತಿಮ್ಮಸಾಗರ

ತಿಮ್ಮ ಎಂಬ ವ್ಯಕ್ತಿ ಈ ಊರಿನಲ್ಲಿ ಸಾಗರ (ಕೆರೆ) ಕಟ್ಟಿಸಿದ್ದರ ಪ್ರಯುಕ್ತ ಈ ಊರಿಗೆ ತಿಮ್ಮಸಾಗರ ಎಂದು ಮತ್ತು ಇಲ್ಲಿ ಬ್ರಾಹ್ಮಣರು ನೆಲೆಸಿದ್ದರಿಂದ ನಿರ್ದಿಷ್ಟದಲ್ಲಿ ಅಗ್ರಹಾರ ಎಂದು ಹೆಸರು ಬಂದಿದೆ.

ಅಗ್ರಹಾರ+ ತಿಮ್ಮ+ ಸಾಗರ = ಅಗ್ರಹಾರ ತಿಮ್ಮಸಾಗರ.

### ಇಬ್ರಾಹಿಂಪುರ

ನವಲಗುಂದ ಗ್ರಾಮದ ಭೂಮಿಯು ಸದ್ಯ ನೆಲೆಸಿರುವ ಇಬ್ರಾಹಿಂಪುರದವರೆಗೆ ತನ್ನ ಮೇರೆಯನ್ನು ಹೊಂದಿತ್ತು. ನವಲಗುಂದದಿಂದ ಇಬ್ರಾಹಿಂ ಎಂಬ ವ್ಯಕ್ತಿಯನ್ನು ದೇಸಾಯಿ ಮನೆತನದವರು ಹೊಲವನ್ನು ಕಾಯಲು ಕಳಿಸುತ್ತಿದ್ದರು. ಕಾಲಕ್ರಮೇಣ ಇಬ್ರಾಹಿಂ ಅಲ್ಲಿಯೇ ಒಂದು ಗುಡಿಸಲು ಹಾಕಿಕೊಂಡು ವಾಸಮಾಡತೊಡಗಿದನು. ನಂತರದಲ್ಲಿ ಜನರು ಬಂದು ಇಲ್ಲಿಯೇ ನೆಲೆಸಲು ಪ್ರಾರಂಭಿಸಿದ್ದರಿಂದ ಊರು ಬೆಳೆಯಿತು. ಅಂದಿನಿಂದ ಈ ಗ್ರಾಮಕ್ಕೆ ಇಬ್ರಾಹಿಂಪುರ ಎಂದು ಹೆಸರು ಬಂದಿತು. ಇದಕ್ಕೆ ಪೂರಕವೆಂದಂತೆ ನವಲಗುಂದದ ಗ್ರಾಮದೇವತೆ ಜಾತ್ರೆಗೆ ಈ ಇಬ್ರಾಹಿಂಪುರದಿಂದ ಗುಡಿ ಸಾಮಾನು, ಸೀರೆ ಮುಂತಾದ ಪೂಜೆ ಸಾಮಗ್ರಿಗಳನ್ನು ತೆಗೆದುಕೊಂಡು ಹೋಗಿ ಪೂಜೆಮಾಡಿದ ನಂತರವೇ ಈ ಗ್ರಾಮದೇವತೆ ಜಾತ್ರೆಗೆ ಚಾಲನೆ ಲಭಿಸುತ್ತದೆ. ಆದ್ದರಿಂದ ಇಬ್ರಾಹಿಂಪುರಕ್ಕೂ ನವಲಗುಂದಕ್ಕೂ ಇರುವ ಅವಿನಾಭಾವ ಸಂಬಂಧ ಇರುವುದು ಸ್ಪಷ್ಟವಾಗುತ್ತದೆ. ಇದರಿಂದಾಗಿ ಇಬ್ರಾಹಿಂ ನವಲಗುಂದದಿಂದ ಬಂದಿದ್ದಾನೆಂದು ತಿಳಿಯಬಹುದು.

### ಕಟ್ನೂರು

ಈ ಗ್ರಾಮದಲ್ಲಿ ದೊರೆತ "ಕ್ರಿ.ಶ. 1242 ರ ಶಾಸನದಲ್ಲಿ ಕಟ್ಟನೂರು ಎಂದು ದಾಖಲಾಗಿದೆ."[3] ಕಟ್ಟ ಎಂಬ ವ್ಯಕ್ತಿಯಿಂದ ಈ ಗ್ರಾಮಕ್ಕೆ ಕಟ್ನೂರು ಎಂದು ಹೆಸರು ಬಂದಿರಬಹುದು.

ಕಟ್ಟ+ನ+ಊರು= ಕಟ್ಟನೂರು> ಕಟ್ನೂರು ಎಂದಾಗಬಹುದು.

### ಗಬ್ಬೂರು

ಈ ಗ್ರಾಮದಲ್ಲಿ ದೊರೆತ "ಕ್ರಿ.ಶ. 909ರ ಶಾಸನದಲ್ಲಿ ಗೊಬ್ಬನೂರು ಎಂದು ದಾಖಲಾಗಿದೆ."[4] ಗೊಬ್ಬ ಎಂಬ ವ್ಯಕ್ತಿಯಿಂದ ಗಬ್ಬೂರು ಎಂದು ಹೆಸರು ಬಂದಿರಬಹುದು.

ಗೊಬ್ಬ+ ನ + ಊರು= ಗೊಬ್ಬನೂರು> ಗೊಬ್ಬೂರು> ಗಬ್ಬೂರು ಎಂದಾಗಬಹುದು.

### ಚಂದ್ರಗಿರಿ

ಅಂಬಳ್ಳಿ ಗ್ರಾಮದ ಚಂದ್ರಪ್ಪ ಮಲಕಪ್ಪನವರ ಚೇರಮನ್‌ರಾಗಿದ್ದಾಗ ಬೇರೆ ಬೇರೆ ಕಡೆಯಿಂದ ವಲಸೆ ಬಂದ ಜನರಿಗೆ ಈ ಪ್ರದೇಶದಲ್ಲಿ ನೆಲೆಸಲು ಅವಕಾಶ ನೀಡಿದ್ದರ ಪ್ರಯುಕ್ತ ಇವರ ಹೆಸರಿನಿಂದ ಚಂದ್ರಗಿರಿ ಎಂದು ಹೆಸರು ನಾಮಕರಣ ಮಾಡಿದ್ದಾರೆ. ಈ ಊರು ಗಿರಿಯ (ಗುಡ್ಡ) ಪಕ್ಕದಲ್ಲಿಯೇ ನೆಲೆಗೊಂಡಿದೆ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಚಂದ್ರಪ್ಪ+ಗಿರಿ= ಚಂದ್ರಪ್ಪಗಿರಿ> ಚಂದ್ರಗಿರಿ ಎಂದಾಗಲು ಸಾಧ್ಯ.

## ದೂಪೇನಟ್ಟಿ

ದೂಪಯ್ಯ ಎಂಬ ವ್ಯಕ್ತಿಯಿಂದ ದೂಪೇನಟ್ಟಿ ಎಂದು ಹೆಸರು ಬಂದಿರಬಹುದು.

ದೂಪಯ್ಯ+ ನ+ ಹಟ್ಟಿ= ದೂಪಯ್ಯನಹಟ್ಟಿ> ದೂಪೇನಹಟ್ಟಿ> ದೂಪೇನಟ್ಟಿ ಎಂದಾಗಬಹುದು.

## ನರೇಂದ್ರ

ನರೇಂದ್ರ ಗ್ರಾಮದಲ್ಲಿ ದೊರೆತ "ಕ್ರಿ. ಶ. 1125 ರ ಶಾಸನದಲ್ಲಿ ಕುಂದೂರು"[5] ಎಂದು ದಾಖಲಾಗಿದೆ. ನರೇಂದ್ರ ಗ್ರಾಮದ ಮೂಲ ಹೆಸರು ಕುಂದೂರು, ಎಂದಾಗಿದೆ. ಕುಂದ ಎಂದರೆ ಬೆಟ್ಟ ಎಂದರ್ಥ ಈ ಊರು ಬೆಟ್ಟದ ಮೇಲೆ ನೆಲೆಗೊಂಡ ಊರಾಗಿದ್ದರಿಂದ ಕುಂದೂರು ಎಂದು ಹೆಸರು ಬಂದಿದೆ. ಕಾಲಾನಂತರದಲ್ಲಿ "ಕ್ರಿ. ಶ. 1206 ರ ದೇವರ ಹುಬ್ಬಳ್ಳಿಯ ಶಾಸನದಲ್ಲಿ ನರೇಂದ್ರಪುರ"[6] ಎಂದು ದಾಖಲಾಗಿದೆ. ನರೇಂದ್ರ ಎಂಬ ವ್ಯಕ್ತಿಯಿಂದ ನರೇಂದ್ರಪುರ ಎಂದು ಹೆಸರು ಬಂದಿದೆ. ಕುಂದೂರು ಗ್ರಾಮದ ಮೂಲ ಹೆಸರು ಕ್ರಿ.ಶ. 1206 ಸುಮಾರಿಗೆ ನರೇಂದ್ರಪುರ ಎಂದು ಮರುನಾಮಕರಣವಾಗಿದ್ದನ್ನು ಕಾಣುತ್ತೇವೆ.

ನರೇಂದ್ರಪುರ ಎಂದು ದಾಖಲಾದ ಗ್ರಾಮನಾಮವು ಸದ್ಯ ಉತ್ತರ ಪದವಾದ ಪುರ ವಾರ್ಗಿಕರವು ಕಳಚಿ ಈಗ ಕೇವಲ ನರೇಂದ್ರ ಎಂಬ ಹೆಸರು ಉಳಿದುಕೊಂಡಿದೆ.

## ಪರಸಾಪುರ

ಪರಸ ಎಂಬ ವ್ಯಕ್ತಿಯಿಂದ ಈ ಗ್ರಾಮಕ್ಕೆ ಪರಸಾಪುರ ಎಂದು ಹೆಸರು ಬಂದಿರಬಹುದು.

ಪರಸ+ ಪುರ= ಪರಸಪುರ> ಪರಸಾಪುರ ಎಂದಾಗಬಹುದು.

## 2. ಸ್ತ್ರೀವಾಚಿ ಸ್ಥಳನಾಮಗಳು

ಧಾರವಾಡ ಜಿಲ್ಲೆಯ ಗ್ರಾಮನಾಮಗಳಲ್ಲಿ ಸ್ತ್ರೀಯರ ಹೆಸರಿನ ಗ್ರಾಮನಾಮಗಳು ಕಂಡುಬರುತ್ತವೆ. "ಸ್ತ್ರೀವಾಚಿ ಗ್ರಾಮಗಳನ್ನು ಗುರುತಿಸಲು ನಿರ್ದಿಷ್ಟದ (ಪೂರ್ವಪದ) ಅಂತ್ಯದಲ್ಲಿ "ಲಾ, ಳ, ಬ್ಬೆ, ಕ್ಕ, ಇದ್ದರೆ ಅದು ಸ್ತ್ರೀಯ ಹೆಸರನ್ನು ಹೊತ್ತ ಗ್ರಾಮವಾಗಿರುತ್ತದೆ"[7] ಧಾರವಾಡ ಜಿಲ್ಲೆಯಲ್ಲಿ ಸ್ತ್ರೀವಾಚಿ ಸ್ಥಳನಾಮಗಳು ಕಡಿಮೆ ಪ್ರಮಾಣದಲ್ಲಿ ಕಂಡುಬರುತ್ತವೆ. ಆ ಗ್ರಾಮನಾಮಗಳನ್ನು ಈ ಕೆಳಗಿನಂತೆ ತಿಳಿದುಕೊಳ್ಳಬಹುದು.

## ಅಳ್ನಾವರ

ಈ ಗ್ರಾಮದಲ್ಲಿ ದೊರೆತ "ಕ್ರಿ. ಶ. 1081ರ ಶಾಸನದಲ್ಲಿ ಅಣಿಲಾಪುರ ಎಂದು ದಾಖಲಾಗಿದೆ."[8] ಅಣಿಲಾ ಎಂಬ ಸ್ತ್ರೀಯ ಹೆಸರಿನಿಂದ ಈ ಗ್ರಾಮಕ್ಕೆ ಅಣಿಲಾಪುರ ಎಂದು ಹೆಸರು ಪ್ರಾಪ್ತವಾಗಿರಬಹುದು.

ಅಣಿಲಾ + ಪುರ= ಅಣಿಲಾಪುರ> ಅಲ್ನಾಪುರ> ಅಳ್ನಾಪುರ> ಅಳ್ನಾವರ ಅಂದಾಗಬಹುದು.

## ಕಮಲಾಪುರ

ಕಮಲಾ+ಪುರ= ಕಮಲಾಪುರ. ಕಮಲ ಎಂಬ ಸ್ತ್ರೀಯಿಂದ ಈ ಗ್ರಾಮಕ್ಕೆ ಕಮಲಾಪುರ ಎಂದು ಹೆಸರು ಬಂದಿರಲು ಸಾಧ್ಯ.

## ದಡ್ಡಿಕಮಲಾಪುರ

ಕಮಲಾ ಎಂಬ ಸ್ತ್ರೀ ಹೆಸರಿನಿಂದ ಈ ಗ್ರಾಮಕ್ಕೆ ಕಮಲಾಪುರವೆಂದು ಗೌಳಿ ಸಮುದಾಯದವರು ನೆಲೆನಿಂತ ಪ್ರದೇಶ ಇದಾಗಿದ್ದರಿಂದ ಹಸುಗಳನ್ನು ಸಾಕುವುದು ಅವರ ವೃತ್ತಿಯಾಗಿದ್ದು ಹಸುಗಳು ಕೂಡುವ ಸ್ಥಳಕ್ಕೆ ದೊಡ್ಡಿ ಎಂದು ಕರೆಯುತ್ತಾರೆ. ಇದರಿಂದ ದಡ್ಡಿಕಮಲಾಪುರ ಎಂಬ ಹೆಸರು ಬಂದಿರಬಹುದು.

ದೊಡ್ಡಿ+ ಕಮಲಾ+ ಪುರ=ದೊಡ್ಡಿಕಮಲಾಪುರ> ದಡ್ಡಿಕಮಲಾಪುರ.

## ಉಪಸಂಹಾರ

ಈ ರೀತಿಯಾಗಿ ಧಾರವಾಡ ಜಿಲ್ಲೆಯಲ್ಲಿ ಕಂಡು ಬರುವ ವ್ಯಕ್ತಿನಾಮಗಳು ಆ ಊರು ಸ್ಥಾಪನೆಯಾಗುವಲ್ಲಿ ಅಲ್ಲಿ ಕಟ್ಟಿಸಿದ ಕೆರೆ, ಬಾವಿ, ನಿರ್ಮಾಣಮಾಡಿದ್ದರ ನಿಮಿತ್ಯವಾಗಿ ಅವರ ಹೆಸರಿನಿಂದಲೇ ಗ್ರಾಮಗಳಿಗೆ ನಾಮಕರಣ ನಡೆದದ್ದನ್ನು ಕಾಣುತ್ತೇವೆ. ಐತಿಹಾಸಿಕ ಮತ್ತು ಸಾಮಾನ್ಯ ವ್ಯಕ್ತಿಗಳಿಂದ ಗ್ರಾಮಗಳಿಗೆ ನಾಮಕರಣ ಪ್ರಕ್ರಿಯೆ ನಡೆದಿದೆ. ವ್ಯಕ್ತಿಗಳು ತಮ್ಮ ಹೆಸರು ಅಜರಾಮರವಾಗಿರಲೆಂದು ಮತ್ತು ತಮ್ಮ ಶ್ರೇಷ್ಟತೆಯನ್ನು ಗುರುತಿಸಿಕೊಳ್ಳಲು ಗ್ರಾಮಗಳು ನೆಲೆಗೊಳ್ಳಲು ದಾನ, ದತ್ತಿ, ನೀಡಿದ್ದರ ಪ್ರಯುಕ್ತ ಆ ವ್ಯಕ್ತಿಯ ಹೆಸರಿನಿಂದಲೆ ಗ್ರಾಮಗಳಿಗೆ ನಾಮಕರಣ ಅಂಕಿತಗೊಳಿಸಿದ್ದಾನೆ.

## ಅಡಿಟಿಪ್ಪಣಿ

1. ಎಂ.ಎಂ. ಕಲಬುರ್ಗಿ ಕನ್ನಡ ನಾಮ ಪು.ಸಂ. –70.
2. ಎಂ.ಎಂ. ಕಲಬುರ್ಗಿ ಧಾರವಾಡ ತಾಲೂಕಿನ ಶಾಸನಗಳು ಶಾ.ನಂ. 2.
3. ಶ್ರೀಮತಿ ಹನುಮಾಕ್ಷಿ ಗೋಗಿ ಹುಬ್ಬಳ್ಳಿ ತಾಲೂಕಿನ ಶಾಸನಗಳು (ಸಂ). ಪು. ಸಂ. 57.
4. ಹುಬ್ಬಳ್ಳಿ ತಾಲೂಕಿನ ಶಾಸನಗಳು ಪು.ಸಂ. 137.
5. ಎಂ.ಎಂ. ಕಲಬುರ್ಗಿ ಧಾರವಾಡ ತಾಲೂಕಿನ ಶಾಸನ ಶಾ.ನಂ. 39.
6. ಎಂ.ಎಂ. ಕಲಬುರ್ಗಿ ಧಾರವಾಡ ತಾಲೂಕಿನ ಶಾಸನ ಶಾ.ನಂ. 27.
7. ಎಂ.ಎಂ. ಕಲಬುರ್ಗಿ ಕನ್ನಡ ನಾಮವಿಜ್ಞಾನ ಪು.ಸಂ. 70.
8. ಧಾರವಾಡ ತಾಲೂಕಿನ ಶಾಸನಗಳು ಶಾ. ಸಂ. 11.

## ಆಕರ ಗ್ರಂಥಗಳು


- **ಡಾ. ಎಂ. ಎಂ. ಕಲಬುರ್ಗಿ** 1989 : ಕನ್ನಡ ನಾಮ ವಿಜ್ಞಾನ, ಬೆಂಗಳೂರು ಸಪ್ನ ಬುಕ್ ಹೌಸ್.
- **ಡಾ. ವ್ಹಿ. ಎಲ್. ಪಾಟೀಲ** 2012 : ಮೌಖಿಕ ಪರಂಪರೆ, ಬೆಂಗಳೂರು ಹೇಮಂತ ಸಾಹಿತ್ಯ ಪ್ರಕಾಶನ.
- **ಡಾ. ವ್ಹಿ. ಎಲ್. ಪಾಟೀಲ** 2005 : ಅಡ್ಡಹೆಸರುಗಳು, ಧಾರವಾಡ ಕೀರ್ತಿ ಪ್ರಕಾಶನ.
- **ಶಂ. ಭಾ. ಜೋಶಿ** 2011 : ಎಡೆಗಳು ಹೇಳುವ ಕಂನಾಡ ಕಥೆ, ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
- **ಆರ್ಕೆ** 1989 : ಮಣಿಪಾಲ, ಹೆಸರಿನಲ್ಲೇನಿದೆ ? ಬೆಂಗಳೂರು ನ್ಯೂಸ್ಟಾರ್ ಪಬ್ಲಿಕೇಷನ್.
- **ಪಂಡಿತ ಕವಲಿ** 2016 : ಸಚಿತ್ರ ಕನ್ನಡ–ಕನ್ನಡ ಕಸ್ತೂರಿಕೋಶ, ಧಾರವಾಡ ಶ್ರೀ ರಾಮಾಶ್ರಯ ಪ್ರಕಾಶನ.
- **ನಂಜಯ್ಯ** 2009 : ಹೊಂಗನೂರು, ಸ್ಥಳನಾಮಗಳು ನಿರ್ದೇಶಕರು ಮೈಸೂರು ಪ್ರಸಾರಾಂಗ ಮಾನಸ ಗಂಗೋತ್ರಿ.


■■

ISSN : 2249-2429 ಸಂಶೋಧನೆ RNI REG.NO.KARKAN/2011/38712

# ಮಾನವ ಅಭಿವೃದ್ಧಿ ಮತ್ತು ಶಿಕ್ಷಣ

✍ **ಡಾ. ಮಂಜಯ್ಯ,** ಸಹಾಯಕ ಪ್ರಾಧ್ಯಾಪಕರು, ಡಾ. ಅಬೇಂಡ್ಕರ್ ಶಿಕ್ಷಣ ಮಹಾ ವಿದ್ಯಾಲಯ, ಜೆ. ಸಿ ನಗರ, ಬೆಂಗಳೂರು.

**ಶಿಕ್ಷಣವಿಲ್ಲದಿದ್ದರೆ ಜ್ಞಾನವಿಲ್ಲ**
**ಜ್ಞಾನವಿಲ್ಲದಿದ್ದರೆ ಅಭಿವೃದ್ಧಿಯಿಲ್ಲ**
**ಅಭಿವೃದ್ಧಿ ಇಲ್ಲದಿದ್ದರೆ ಸಂಪತ್ತಿಲ್ಲ**
**ಸಂಪತ್ತಿಲ್ಲದಿದ್ದರೆ ಶೂದ್ರರ ಸರ್ವನಾಶ ಕಟ್ಟಿಟ್ಟ ಬುತ್ತಿ**

***ಜ್ಯೋತಿ ಬಾಫುಲೆ–1890***

## ಪೀಠಿಕೆ

ರಾಷ್ಟ್ರದ ಅಭಿವೃದ್ಧಿಗೆ ನೈಸರ್ಗಿಕ ಸಂಪನ್ಮೂಲ ಎಟ್ಟು ಅಗತ್ಯವೂ ಅದೇ ರೀತಿ ಜನಸಂಖ್ಯೆಯು ಸಹ ಒಂದು ರಾಷ್ಟ್ರ ಆಸ್ತಿ ಎಂದು ಪರಿಗಣಿಸಲಾಗಿದೆ. ಒಂದು ದೇಶದಲ್ಲಿ ವಾಸಿಸುತ್ತಿರುವ ಜನರು ಆ ದೇಶದ ಜನಸಂಖ್ಯೆ. ಅವರಲ್ಲಿ ಮಕ್ಕಳು, ವಯಸ್ಕರು ಮತ್ತು ಹಿರಿಯ ನಾಗರಿಕರಿದ್ದಾರೆ. 14 ವರ್ಷದ ವಯಸ್ಸಿನ ಒಳಗಿರುವವರನ್ನು ಮಕ್ಕಳೆಂತಲೂ, 15 ವರ್ಷದ ಮೇಲ್ಪಟ್ಟು 60 ವರ್ಷದ ಒಳಗಿನವರನ್ನು ವಯಸ್ಕರೆಂತಲೂ ಮತ್ತು 60 ವರ್ಷದ ಮೇಲ್ಪಟ್ಟವರನ್ನು ಹಿರಿಯ ನಾಗರಿಕರೆಂತಲೂ ಗುರುತಿಸಲಾಗಿದೆ. ವಯಸ್ಕರು ದುಡಿಯಲು ಸಮರ್ಥರು. ಇವರನ್ನು ದುಡಿಯುವ ಜನರು ಎನ್ನುತ್ತೇವೆ. ಈ ದುಡಿಯುವ ಜನರೇ ದೇಶದ ಸಂಪತ್ತು. ಪ್ರಸ್ತುತ ದೇಶದಲ್ಲಿರುವ ಉತ್ಪಾದನಾ ಜ್ಞಾನ, ಕೌಶಲ ಮತ್ತು ಸಾಮರ್ಥ್ಯ ಹೊಂದಿರುವ ದುಡಿಯುವ ಜನರನ್ನು ಮಾನವ ಸಂಪನ್ಮೂಲ ಎಂದು ಕರೆಯಲಾಗುತ್ತಿದೆ. ವಯಸ್ಕರು, ಮಕ್ಕಳು ಮತ್ತು ಹಿರಿಯ ನಾಗರಿಕರೆಲ್ಲಾರು ಒಂದು ದೇಶದ ಮಾನವ ಸಂಪನ್ಮೂಲ, ದೇಶದ ಅಭಿವೃದ್ಧಿಗೆ ಆಸ್ತಿಯಾಗಬೇಕಾದರೆ ಮೊದಲ ಮಾನವ ಅಭಿವೃದ್ಧಿ ಕಾರ್ಯವಾಗಬೇಕು.

ಮಾನವ ಅಭಿವೃದ್ಧಿಯಾಗಬೇಕಾದರೆ ವಯಸ್ಕರು, ಮಕ್ಕಳು, ಹಿರಿಯ ನಾಗರಿಕರಿಗೆ, ಲಿಂಗ, ಜಾತಿ ಮತ್ತು ಧರ್ಮ ತಾರತಮ್ಯವಿಲ್ಲದೆ ಎಲ್ಲರಿಗೂ ಉತ್ತಮ ಶಿಕ್ಷಣ, ಉದ್ಯೋಗ ತರಬೇತಿ, ಆರೋಗ್ಯ ಸುರಕ್ಷತೆ, ಕಾನೂನು ನೆರವು ನೀಡಬೇಕಾಗುತ್ತದೆ, ಅವಾಗ ಮಾನವ ಸಂಪನ್ಮೂಲವು ಸಂವೃದ್ಧ ರಾಷ್ಟ್ರ ಕಟ್ಟಲು ಸಹಾಯಕವಾಗುತ್ತದೆ.

**ಎಲ್ಲರಿಗೂ ಕಲಿಯುವ ಹಕ್ಕಿದೆ**
**ಮಾನವ ಜೀವಿಸಲು ಆಹಾರ ಎಷ್ಟು**
**ಅಗತ್ಯವೋ, ಶಿಕ್ಷಣವು ಅಷ್ಟೇ ಅಗತ್ಯ**

**– *ಗೌತಮ ಬುದ್ಧ***

ಮಾನವ ಜೀವಿ ದೈಹಿಕವಾಗಿ ಬೆಳವಣಿಗೆಯಾಗಬೇಕಾದರೆ ಗಾಳಿ, ಬೆಳಕು, ನೀರು ಮತ್ತು ಆಹಾರ ಬೇಕು, ನಂತರ ಅದೇ ಮಾನವ ಜೀವಿ ಪ್ರಗತಿಪರ ಸಮಾಜದಲ್ಲಿ ಬೌದ್ಧಿಕವಾಗಿ ತನ್ನ ಜ್ಞಾನದಾಹದ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಶಿಕ್ಷಣ ಬೇಕು, ಅಂದರೆ **"ನಹಿಃ ಜ್ಞಾನೇನ ಸದೃಶಂ"** ಎಂಬ ಆರ್ಯೋಕ್ತಿಯೂ ಇದನ್ನೇ ಸ್ಪಷ್ಟಪಡಿಸುತ್ತದೆ. ಜ್ಞಾನಕ್ಕಿಂತ ಮಿಗಿಲಾದುದಿಲ್ಲ ಎಂದ ಮೇಲೆ ಇಂಥ ಜ್ಞಾನ ಲಭ್ಯವಾಗುವುದು ಶಿಕ್ಷಣದಿಂದ.

**ಭೂಮಿಗೆ ಬಿದ್ದ ಬೀಜ**
**ಎದೆಗೆ ಬಿದ್ದ ಅಕ್ಷರ**
**ಇಂದಲ್ಲ ನಾಳೆ ಫಲ ಕೊಡುವುದು**

**– *ದೇವನೂರು ಮಹಾದೇವ***

ಭೂಮಿಗೆ ಹಾಕಿದ ಬೀಜ ಎಂದಾದರು ಒಂದು ದಿನ ನೆರಳು, ಗಾಳಿ, ಹಣ್ಣು ನೀಡುತ್ತದೆ. ಇದೇ ರೀತಿ ಮಕ್ಕಳಿಗೆ ಶಿಕ್ಷಣ ನೀಡಿದರೆ ಎಂದಾದರು ಒಂದು ದಿನ ವ್ಯಕ್ತಿಗೆ, ಕುಟುಂಬಕ್ಕೆ, ಸಮಾಜಕ್ಕೆ, ದೇಶಕ್ಕೆ ಪರಿಸರಕ್ಕೆ ಫಲ ಸಿಗುತ್ತದೆ ಎಂಬುವುದು ಅವರ ಅಭಿಪ್ರಾಯ, ಇದು ಸತ್ಯವು ಹೌದು.

ರಾಷ್ಟ್ರಕವಿ **ಕುವೆಂಪುರವರು** ಹೇಳುವಂತೆ – ಪ್ರತಿಯೊಂದು ಮಗುವು ಹುಟ್ಟುತ್ತಲೆ **'ವಿಶ್ವ ಮಾನವ'** ಬೆಳೆಯುತ್ತಾ ನಾವು ಅದನ್ನು ಅಲ್ಪ ಮಾನವನ್ನಾಗಿ ಮಾಡುತ್ತೇವೆ. ಮತ್ತೆ ಅದನ್ನು **'ವಿಶ್ವ ಮಾನವನ'**ನ್ನಾಗಿ ಮಾಡುವುದೆ ಶಿಕ್ಷಣದ ಕರ್ತವ್ಯವಾಗಬೇಕು.

ಹುಟ್ಟುವಾಗ **'ವಿಶ್ವಮಾನವ'**ನಾಗಿಯೆ ಹುಟ್ಟಿದ ಮಗುವನ್ನು ನಾವು ದೇಶ, ಭಾಷೆ, ಮತ, ಜಾತಿ, ಜನಾಂಗ, ವರ್ಣ ಉಪಾಧಿಗಳಿಂದ ಬದ್ಧನನ್ನಾಗಿ ಮಾಡುತ್ತೇವೆ, ಅವೆಲ್ಲವುಗಳಿಂದ ಪಾರಾಗಿ ಮಗುವನ್ನು ಮತ್ತೆ **'ಬುದ್ಧ'**ನನ್ನಾಗಿ, ಅಂದರೆ **'ವಿಶ್ವ ಮಾನವ'**ನನ್ನಾಗಿ ಪರಿವರ್ತಿಸುವುದೇ ಶಿಕ್ಷಣ. ಪ್ರಪಂಚದ ಮಕ್ಕಳೆಲ್ಲಾ ಅನಿಕೇತರಾಗಬೇಕು, ಲೋಕ ಉಳಿದು ಬಾಳಿ ಬದುಕ ಬೇಕಾದರೆ !

ಶಿಕ್ಷಣ ಮಾನವನ ಪ್ರಗತಿಗೆ ಆಧಾರವಾಗಿದೆ. ಇದು ಸಮಾಜದ ಹಾಗೂ ಮಾನವನ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಒಂದು ಪ್ರಮುಖ ಪಾತ್ರವನ್ನು ವಹಿಸುತ್ತದೆ.

ನಮ್ಮ ವಿದ್ಯೆ, ಸಂಸ್ಕೃತಿ, ನಾಗರಿಕತೆ ಎಲ್ಲದರ ಅದ್ಯ ಕರ್ತವ್ಯವಾಗಬೇಕು.

## ಶಿಕ್ಷಣದ ಅರ್ಥ ಮತ್ತು ವಿವರಣೆ

ಮಗು ಮತ್ತು ಮಾನವ ವರ್ತಮಾನದಲ್ಲಿ ನಿಂತು ಭೂತಕಾಲವನ್ನು ನೋಡಿ, ಭವಿಷ್ಯತ್ತನ್ನು ಸಂಪದ್ಭರಿತವಾದುದನ್ನಾಗಿ ರೂಪಿಸಿಕೊಳ್ಳಲು ಸಹಾಯ ಮಾಡುವುದೇ ಶಿಕ್ಷಣ, ಇದನ್ನೇ ಇನ್ನೊಂದು ಮಾತಿನಲ್ಲಿ ಹೀಗೆ ಹೇಳಬಹುದು **"ಭೂತ ಭವಿಷ್ಯದ್ವರ್ತಮಾನಗಳ ಜಾಗೃತ ಪ್ರಜ್ಞೆ"**ಯನ್ನು ಮಗು ಮತ್ತು ಮಾನವಿಗೆ ತಮ್ಮ ಜೀವಿತದುದ್ದಕ್ಕೂ ಹರಿದು ಬರುವಂತೆ ಮಾಡುವ ಶಕ್ತಿಯೇ ಶಿಕ್ಷಣ.

## ವ್ಯಾಖ್ಯಾನಗಳು

**ನೆಲ್ಸನ್ ಮಂಡೇಲಾ** ಹೇಳಿದಂತೆ – " ಶಿಕ್ಷಣವು ಅತ್ಯಂತ ಶಕ್ತಿಯುತ ಆಯುಧವಾಗಿದ್ದು, ನೀವು ಜಗತ್ತನ್ನು ಬದಲಿಸಲು ಬಳಸಿಕೊಳ್ಳಬಹುದು.

**ದ. ರಾ. ಬೇಂದ್ರೆ** ಹೇಳಿರುವಂತೆ – "ಮಕ್ಕಳಿಗೆ ಆಸ್ತಿ ಮಾಡಬೇಡಿ, ಮಕ್ಕಳನ್ನೇ ಆಸ್ತಿಯಾಗಿ ಮಾಡಿ".

**ಬರ್ಟ್‌ರ್ಯಾಂಡ್ ರಸಲ್** ಅಭಿಪ್ರಾಯದಂತೆ : "ವೀರರೂ, ಧೀರರೂ, ಪ್ರತಿಭಾ ಸಂಪನ್ನರೂ ಆದ ವ್ಯಕ್ತಿಗಳನ್ನೊಳಗೊಂಡ ಸಮಾಜವನ್ನು ನಿರ್ಮಿಸುವುದೇ ಶಿಕ್ಷಣ.

**ಹರ್ಬರ್ಟ್‌ನ ಪ್ರಕಾರ** – "ಮಗುವಿನ ಶಿರ, ಹೃದಯ, ಕರಗಳ ವಿಕಾಸ ಆಗಿ ಮಕ್ಕಳಲ್ಲಿ ಶ್ರದ್ಧೆ, ಆಸೆ, ಧ್ಯಾನ, ನ್ಯಾಯ, ವಿವೇಕ, ನಿಗ್ರಹ, ಧೈರ್ಯ ಮೊದಲಾದ ಸದ್ಗುಣಗಳು ನೆಲೆಸುವಂತೆ ಮಾಡುವುದೇ ಶಿಕ್ಷಣ".

ISSN : 2249-2429 ಸಂಶೋಧನೆ RNI REG.NO.KARKAN/2011/38712

**ಡಾ.ಸರ್ವಪಲ್ಲಿ ರಾಧಾಕೃಷ್ಣರವರು** ಹೇಳಿರುವಂತೆ: "ಮಕ್ಕಳು ಮಾನವರಾಗಿ, ನಾಗರೀಕರಾಗಿ ಇನ್ನೊಬ್ಬರೊಡನೆ ಮೈತ್ರಿ ಗೌರವ ಘನತೆಗಳಿಂದ ವರ್ತಿಸುವಂತೆ ಮಾಡಿ, ಮಕ್ಕಳಲ್ಲಿ ಔದಾರ್ಯ, ಭ್ರಾತೃಭಾವ, ಸಹಾನುಭೂತಿಗಳು ಹೆಚ್ಚಾಗಿರುವಂತೆ ಮಾಡುವುದೆ ಶಿಕ್ಷಣ"

ಶಿಕ್ಷಣವು ವಾಸ್ತವಾಂಶಗಳನ್ನು ಅಥವಾ ಸಿದ್ಧಾಂತಗಳನ್ನು ವಿದ್ಯಾರ್ಥಿಯ ತಲೆಯಲ್ಲಿ ತುಂಬುವುದಕ್ಕಿಂತಲೂ ಹೆಚ್ಚಾಗಿ ಅವನ ಸ್ವಂತಿಕೆಯನ್ನು ಹೊರಸೆಳೆಯುವ ಹಾಗೂ ಅವನ ಬೌದ್ಧಿಕ ಶಕ್ತಿಯನ್ನು ಪ್ರಚೋದಿಸುವ ಧ್ಯೇಯವನ್ನು ಹೊಂದಿರಬೇಕು

ಶಿಕ್ಷಣ ಸನ್ನಡತೆಯನ್ನು ವೃದ್ಧಿಸಬೇಕು, ಎಲ್ಲಾ ಪ್ರಗತಿಗಾಗಿ ಶಿಕ್ಷಣವೇ ಮೂಲ, ಶಿಕ್ಷಣ ಒಂದು ಶಕ್ತಿ, ಸಮಾಜದ ರೋಗಗ್ರಸ್ಥ ಪಿಡುಗುಗಳಿಗೆ ಸಿದ್ಧ ಔಷಧವೇ ಶಿಕ್ಷಣ, ಶೀಲವನ್ನು ವೃದ್ಧಿಸುವುದೇ ಶಿಕ್ಷಣ, ಶಿಕ್ಷಣ ಒಂದು ಖಡ್ಗವಿದ್ದಂತೆ, ಮಕ್ಕಳಿಗೆ ಶಿಕ್ಷಣ ಕೊಡಿಸಿ, ಅವರಲ್ಲಿ ಹೆಬ್ಬಯಕೆಯನ್ನು ತುಂಬಿರಿ ಅವರು ಮಹಾ ಪುರುಷರಾಗುತ್ತಾರೆ ಎಂಬುದನ್ನು ಅವರ ಮನಸ್ಸಿನಲ್ಲಿ ಅಚ್ಚೊತ್ತಿರಿ. ಮನುಷ್ಯನಲ್ಲಿ ಜ್ಞಾನವೃದ್ಧಿಗೊಳಿಸುವುದೊಂದೇ ಶಿಕ್ಷಣದ ಉದ್ದೇಶವಾಗಬಾರದು, ಜ್ಞಾನವೃದ್ಧಿಯ ಜೊತೆಗೆ ಮನುಷ್ಯನಲ್ಲಿ ನೀತಿ, ಸನ್ನಡತೆ ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸುವುದು ಶಿಕ್ಷಣದ ಉದ್ದೇಶವಾಗಿರಬೇಕು.

## ಮಾನವ ಅಭಿವೃದ್ಧಿಯ ಅರ್ಥ ಮತ್ತು ವಿವರಣೆ

ಒಂದು ಸಮಾಜದಲ್ಲಿರುವ ಎಲ್ಲಾ ಜನರ ಜ್ಞಾನ, ಕೌಶಲ ಮತ್ತು ಸಾಮರ್ಥ್ಯಗಳನ್ನು ಬೆಳೆಸುವ ಕ್ರಿಯೆಗೆ **'ಮಾನವ ಅಭಿವೃದ್ಧಿ'** ಅಥವಾ **'ಮಾನವ ಸಂಪನ್ಮೂಲ ಅಭಿವೃದ್ಧಿ'** ಎನ್ನುವರು.

ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ ಮತ್ತು ಜೀವನವನ್ನು ನಡೆಸಲು ವ್ಯಕ್ತಿಯನ್ನು ಸಿದ್ಧಪಡಿಸುವುದೇ **'ಮಾನವ ಅಭಿವೃದ್ಧಿ'** ಅಥವಾ **'ಮಾನವ ಸಂಪನ್ಮೂಲ ಅಭಿವೃದ್ಧಿ'** ಎನ್ನುವರು. ಈ ಮಾನವ ಅಭಿವೃದ್ಧಿ ಆಧುನೀಕರಣಕ್ಕೆ ದಾರಿ ಮಾಡಿಕೊಡುತ್ತದೆ. ಹಾಗಾಗಿ ವ್ಯಕ್ತಿ, ಸಮಾಜ, ದೇಶ, ಸರ್ವತೋಮುಖ ಅಭಿವೃದ್ಧಿಗೆ ಕಾರಣವಾಗುತ್ತದೆ.

ಮಾನವ ಅಭಿವೃದ್ಧಿ **ಪರಿಕಲ್ಪನೆಯನ್ನು** ಪಾಕಿಸ್ತಾನದ ಖ್ಯಾತ ಅರ್ಥಶಾಸ್ತ್ರಜ್ಞ **ಡಾ.ಮೆಹಬೂಬುಲ್ ಹಖ್** ಪ್ರತಿಪಾದಿಸಿದರು: "ಜನರ ಆಯ್ಕೆಗಳ ವಿಸ್ತರಣೆಯೇ ಮಾನವ ಅಭಿವೃದ್ಧಿ" ಎಂದು ವ್ಯಾಖ್ಯಾನಿಸಿದ್ದಾರೆ. ಜನರು ತಮ್ಮ ಸಾಮರ್ಥ್ಯನುಸಾರ ಆಯ್ಕೆಗಳನ್ನು ನಿರಂತರವಾಗಿ ವಿಸ್ತರಿಸಿಕೊಳ್ಳುತ್ತ ಬದುಕಿನ ಗುಣಮಟ್ಟವನ್ನು ಸುಧಾರಿಸಿಕೊಳ್ಳವ ಪ್ರಕ್ರಿಯೆ **ಸಾಮರ್ಥ್ಯ**ವೆಂದರೆ ಒಬ್ಬ ವ್ಯಕ್ತಿಯ ಸಾಧನೆಗೆ ಇರಬಹುದಾದ ಹಲವಾರು ಪರ್ಯಾಯಗಳ ಕ್ರೋಢೀಕರಣ ಎನ್ನಬಹುದು. ಅಂದರೆ ಬದುಕಲು ಒಬ್ಬ ವ್ಯಕ್ತಿಯು ತಾನು ಎಂತಹ ಬದುಕು ನಡೆಸಬೇಕೆನ್ನುವ "ಹಲವಾರು ಪರ್ಯಾಯ ಮಾರ್ಗಗಳ ಆಯ್ಕೆ ಸ್ವಾತಂತ್ರ್ಯ".

## ಮಾನವ ಅಭಿವೃದ್ಧಿಯ ಗುಣಲಕ್ಷಣಗಳು

ಮಾನವ ಅಭಿವೃದ್ಧಿಯು ಜನರಿಂದ ಮತ್ತು ಜನರಿಗಾಗಿ ನಡೆಯುವ ಬಹುಮುಖಿ ಪ್ರಕ್ರಿಯೆಯಾಗಿದೆ. ಮಾನವ ಅಭಿವೃದ್ಧಿಯು ಸಾಧನೆಯ ಮಾರ್ಗವೇ ಹೊರತು ಅಂತಿಮ ಗುರಿಯಲ್ಲ. ಜನರು ಅಭಿವೃದ್ಧಿಯ ಕಾರಣ ಕರ್ತರಾಗುವ ಜೊತೆಗೆ ಅವಕಾಶಗಳ ಸೃಷ್ಟಿಕರ್ತರಾಗಿ ತಮ್ಮ ಸಾಮರ್ಥ್ಯವರ್ಧನೆಯನ್ನು ಕೂಡ ಮಾಡಿಕೊಳ್ಳುವರು. ಮಾನವ ಅಭಿವೃದ್ಧಿಯು ಪ್ರಗತಿಯ ಒಂದು ಹೆಜ್ಜೆಯೇ ವಿನಃ ಅದೇ ಅಂತ್ಯವಲ್ಲ.

## ಮಾನವ ಅಭಿವೃದ್ಧಿ ಸೂಚಕಗಳು

ಆರ್ಥಿಕ ಅಭಿವೃದ್ಧಿಯ ಮುಖ್ಯ ಗುರಿ ಮಾನವ ಅಭಿವೃದ್ಧಿ ಜನರು ಉತ್ತಮ ಗುಣಮಟ್ಟದ ಜೀವನವನ್ನು ನಡೆಸಲು ಅನುವು ಮಾಡುವುದೇ ಇದರ ಉದ್ದೇಶ, ಜನರು ಉತ್ತಮ ಗುಣಮಟ್ಟದ ಜೀವನವನ್ನು ನಡೆಸಬೇಕಾದರೆ ಉತ್ತಮ ಆಹಾರ, ಬಟ್ಟೆ, ವಸತಿ, ಶಿಕ್ಷಣ, ಆರೋಗ್ಯ, ಕಾನೂನಿನ ನೆರವು, ಸಾಮಾಜಿಕ ಭದ್ರತೆ ಮುಂತಾದ ಸೌಲಭ್ಯಗಳ ಜೊತೆಗೆ ಶುದ್ಧವಾದ ನೀರು, ಶುದ್ಧವಾದ ಗಾಳಿ, ಸ್ವಚ್ಛವಾದ ಪರಿಸರ ಬೇಕಾಗುತ್ತದೆ.

ಮಾನವನ ಜೀವನದ ಗುಣಮಟ್ಟವನ್ನು ಅಳೆಯುವುದಕ್ಕಾಗಿ **'ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮವು' (UNDP) 'ಮಾನವ ಅಭಿವೃದ್ಧಿ ಸೂಚಿ' (HDI)** ಎಂಬ ಮಾನದಂಡವನು ರೂಪಿಸಿದೆ. ಮಾನವ ಅಭಿವೃದ್ಧಿ ಸೂಚಿಯಲ್ಲಿ ಆರೋಗ್ಯ, ಜ್ಞಾನ ಹಾಗೂ ಜೀವನಮಟ್ಟವನ್ನು ಅಳೆಯಲು ಮೂರು ಸೂಚಕಗಳನ್ನು ರೂಪಿಸಲಾಗಿದೆ. ಅವುಗಳೆಂದರೆ :

1. ನಿರೀಕ್ಷಿತ ಜೀವಿತಾವಧಿ
2. ಶೈಕ್ಷಣಿಕ ಸಾಧನೆ
3. ಜೀವನಮಟ್ಟ

ದೇಶದ ಜನರು ಬದುಕುಳಿಯಬಹುದಾದ ಸರಾಸರಿ ವಯಸ್ಸನ್ನು **'ನಿರೀಕ್ಷಿತ ಜೀವಿತಾವಧಿ'** ಎನ್ನುತ್ತೇವೆ. ಹಾಗಾದರೆ ಮನುಷ್ಯ ದೀರ್ಘ ಕಾಲದವರೆಗೆ ಬದುಕಲು ಸಹಾಯಕವಾಗುವ ಅಂಶಗಳಾವುವು? ಪೌಷ್ಠಿಕ ಆಹಾರದ ಲಭ್ಯತೆ, ಉತ್ತಮ ಆರೋಗ್ಯ ಮತ್ತು ನೈರ್ಮಲ್ಯದ ಸೌಲಭ್ಯಗಳು, ಶುದ್ಧವಾದ ಪರಿಸರ ಮುಂತಾದುವು ಮನುಷ್ಯನ ಆಯಸ್ಸನ್ನು ಹೆಚ್ಚಿಸಲು ಸಹಾಯಕವಾಗಿವೆ. ಈ ಎಲ್ಲ ಅಂಶಗಳು **'ನಿರೀಕ್ಷಿತ ಜೀವಿತಾವಧಿ'** ಪ್ರತಿನಿಧಿಸುತ್ತವೆ.

**'ಶೈಕ್ಷಣಿಕ ಸಾಧನೆ'** ಹೆಚ್ಚಾದಂತೆ ದೇಶದ ಆರ್ಥಿಕ ಪ್ರಗತಿ ಹೆಚ್ಚಾಗುತ್ತದೆ. ಒಂದು ದೇಶದ ಶೈಕ್ಷಣಿಕ ಸಾಧನೆಯನ್ನು ಅಳೆಯುವುದಾದರೂ ಹೇಗೆ? ದೇಶದಲ್ಲಿನ 25 ವರ್ಷಗಳ ಮೇಲ್ಪಟ್ಟ ಜನರು ಪೂರೈಸಿರುವ **'ಸರಾಸರಿ ಶಾಲಾ ಶಿಕ್ಷಣದ ವರ್ಷಗಳು'** ಮತ್ತು 5 ವರ್ಷದ ಮಕ್ಕಳು ತಮ್ಮ ಜೀವಿತಾವಧಿಯಲ್ಲಿ ಪಡೆಯಲಿರುವ **'ನಿರೀಕ್ಷಿತ ಶಾಲಾ ಶಿಕ್ಷಣದ ವರ್ಷಗಳು'** ಈ ಎರಡು ಅಂಶಗಳ ಆಧಾರದ ಮೇಲೆ ಒಂದು ದೇಶದ ಶೈಕ್ಷಣಿಕ ಸಾಧನೆಯನ್ನು ಅಳೆಯಲಾಗುತ್ತದೆ.

**'ಜೀವನಮಟ್ಟ'**ವನ್ನು ಒಟ್ಟು ರಾಷ್ಟ್ರೀಯ ಆದಾಯದಿಂದ ಗಳಿಸಿದ ತಲಾದಾಯದ ಕೊಂಡುಕೊಳ್ಳುವ ಶಕ್ತಿ, ಸಮಾನತೆಯ ತತ್ವದ ಆಧಾರದ ಮೇಲೆ ಅಳೆಯಲಾಗುತ್ತದೆ. **ತಲಾವರಮಾನ (Per Capita Income)** ಒಂದು ದೇಶದ ಜನರ ಸರಾಸರಿ ವರಮಾನ ತಲಾವರಮಾನವಾಗಿದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಒಂದು ದೇಶದ ಒಟ್ಟು ಜನಸಂಖ್ಯೆಯಲ್ಲಿ ವ್ಯಕ್ತಿಯೊಬ್ಬನ ಸರಾಸರಿ ವರಮಾನವೇ ತಲಾವರಮಾನವಾಗಿದೆ. ಒಂದು ದೇಶದ ಒಟ್ಟು ರಾಷ್ಟ್ರೀಯ ವರಮಾನವನ್ನು ಆ ದೇಶದ ಒಟ್ಟು ಜನಸಂಖ್ಯೆಯಿಂದ ಭಾಗಿಸುವ ಮೂಲಕ ತಲಾವರಮಾನವನ್ನು ಲೆಕ್ಕಚಾರ ಮಾಡಬಹುದು. ತಲಾವರಮಾನ ಒಂದು ದೇಶದ ರಾಷ್ಟ್ರೀಯ ವರಮಾನದಲ್ಲಿ ವ್ಯಕ್ತಿಯೊಬ್ಬನ ಸರಾಸರಿ ಪಾಲನ್ನು ಸೂಚಿಸುತ್ತದೆ. ಅಂದರೆ ಆ ದೇಶದ ಅತ್ಯಂತ ಶ್ರೀಮಂತ ವ್ಯಕ್ತಿಯ ಅಥವಾ ಒಬ್ಬ ನಿರುದ್ಯೋಗಿಯ ಅಥವಾ ಒಬ್ಬ ಭಿಕ್ಷುಕನ ವರಮಾನ ಸಮಾನ ವಾಗಿರುತ್ತದೆ.

ಹೀಗೆ ಒಂದು ದೇಶದ ಜನರ **'ನಿರೀಕ್ಷಿತ ಜೀವಿತಾವಧಿ' 'ಶೈಕ್ಷಣಿಕ ಸಾಧನೆ'** ಹಾಗೂ **'ಜೀವನಮಟ್ಟ'** ಆ ದೇಶದ ಜನರ ಅಭಿವೃದ್ಧಿಯನ್ನು ಪ್ರತಿನಿಧಿಸುತ್ತವೆ. ಈ ಮೂರು ಅಂಶಗಳನ್ನು **'ಮಾನವ ಅಭಿವೃದ್ಧಿಯ ಸೂಚಕಗಳು'** ಎನ್ನುತ್ತಾರೆ. ಈ ಮೂರು ಸೂಚಕಗಳ ಸರಾಸರಿಯೇ **'ಮಾನವ ಅಭಿವೃದ್ಧಿ ಸೂಚಿ'**.

ISSN : 2249-2429 ಸಂಶೋಧನೆ RNI REG.NO.KARKAN/2011/38712

ಮಾನವ ಅಭಿವೃದ್ಧಿ ಸೂಚಿಯ ಆಧಾರದ ಮೇಲೆ ದೇಶಗಳ ಅಭಿವೃದ್ಧಿಯನ್ನ ಗುರುತಿಸಲಾಗುತ್ತದೆ. ಹಾಗೆಯೇ ದೇಶಗಳ ಅಭಿವೃದ್ಧಿಯನ್ನು ಪರಸ್ಪರ ಹೋಲಿಕೆ ಮಾಡಲಾಗುತ್ತದೆ. ಮಾನವ ಅಭಿವೃದ್ಧಿ ಸೂಚಿಯ ಆಧಾರದ ಮೇಲೆ ವಿಶ್ವದ ದೇಶಗಳನ್ನು ಮೂರು ಗುಂಪುಗಳನ್ನಾಗಿ ವರ್ಗೀಕರಿಸಲಾಗಿದೆ.

## ಮಾನವ ಅಭಿವೃದ್ಧಿ ಸೂಚಿ

**'ವಿಶ್ವ ಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮವು'** ಮಾನವನ ಜೀವನದ ಗುಣಮಟ್ಟವನ್ನು ಅಳೆಯುವುದಕ್ಕಾಗಿ ರೂಪಿಸಿದ ಮಾನದಂಡವೇ **'ಮಾನವ ಅಭಿವೃದ್ಧಿ ಸೂಚಿ'**. ಇದನ್ನು **1990** ರಲ್ಲಿ ರೂಪಿಸಲಾಯಿತು. ಇದನ್ನು ರೂಪಿಸಿದ ಕೀರ್ತಿ ಪಾಕಿಸ್ತಾನದ ಅರ್ಥಶಾಸ್ತ್ರಜ್ಞ **ಮೆಹಬೂಬ್‌ಲ್ ಹಕ್** ಅವರಿಗೆ ಸಲ್ಲುತ್ತದೆ. ಭಾರತದ **ಡಾ.ಅಮರ್ತ್ಯಸೇನ್** ಸಹ ಇದನ್ನು ರೂಪಿಸಲು ತಮ್ಮ ಅಮೂಲ್ಯ ಸಲಹೆಗಳನ್ನು ನೀಡಿದ್ದಾರೆ. ಮಾನವ ಅಭಿವೃದ್ಧಿ ಸೂಚಿಯ ಆಧಾರದ ಮೇಲೆ ವಿಶ್ವದ ರಾಷ್ಟ್ರಗಳನ್ನು ಮೂರು ಗುಂಪುಗಳನ್ನಾಗಿ ಮಾಡಲಾಗಿದೆ.

1. **ಹೆಚ್ಚು ಮಾನವ ಅಭಿವೃದ್ಧಿ ಸಾಧಿಸಿದ ದೇಶಗಳು** : ಇವು **0.8** ಕ್ಕಿಂತ ಹೆಚ್ಚು ಮಾನವ ಅಭಿವೃದ್ಧಿ ಸೂಚಿ ಹೊಂದಿವೆ.
2. **ಮಧ್ಯಮ ಮಾನವ ಅಭಿವೃದ್ಧಿ ಸಾಧಿಸಿದ ದೇಶಗಳು** : ಇವು **0.5** ಮತ್ತು **0.8** ರ ನಡುವಿನ ಮಾನವನ ಅಭಿವೃದ್ಧಿ ಸೂಚಿ ಹೊಂದಿವೆ.
3. **ಕಡಿಮೆ ಮಾನವ ಅಭಿವೃದ್ಧಿ ಸಾಧಿಸಿದ ದೇಶಗಳು** : ಇವು **0.5** ಕ್ಕಿಂತ ಕಡಿಮೆ ಮಾನವ ಅಭಿವೃದ್ಧಿ ಸೂಚಿ ಹೊಂದಿವೆ.

### 2011 ರ ಮಾನವ ಅಭಿವೃದ್ಧಿ ವರದಿಯ ಅಂಕಿ ಅಂಶಗಳು

| ಕ್ರ.ಸಂ. | ದೇಶಗಳು | HDI 2011 ಮಾನವ ಅಭಿವೃದ್ಧಿ ಸೂಚಿ | ನಿರೀಕ್ಷಿತ ಜೀವಿತಾವಧಿ (ವರ್ಷಗಳು) | ಸರಾಸರಿ ಶಾಲಾ ಅವಧಿ (ವರ್ಷಗಳು) | ನಿರೀಕ್ಷಿ ಶಾಲಾ ಅವಧಿ ವರ್ಷಗಳು | *PPP ಡಾಲರುಗಳಲ್ಲಿ |
|---|---|---|---|---|---|---|
| 1.. | ನಾರ್ವೆ | 0.943 | 81.1 | 12.6 | 17.3 | 47,557 |
| 2. | ಆಸ್ಟ್ರೇಲಿಯಾ | 0.929 | 81.9 | 12.0 | 18.0 | 34,431 |
| 3. | ಚೀನಾ | 0.687 | 73.5 | 7.5 | 11.6 | 7,476 |
| 4. | ಭಾರತ | 0.547 | 65.4 | 4.4 | 10.3 | 3,468 |
| 5. | ಪಾಕಿಸ್ತಾನ | 0.504 | 65.4 | 4.9 | 6.9 | 2,550 |
| 6. | ಬಾಂಗ್ಲಾದೇಶ | 0.500 | 68.9 | 4.8 | 8.1 | 1,529 |

(*PPP ಡಾಲರುಗಳು : ಸಮಾನ ಕೊಳ್ಳುವ ಶಕ್ತಿಯ ಡಾಲರುಗಳು. (Purchasing Power Parity Dollars)

ಭಾರತದಲ್ಲಿ ಇತ್ತೀಚಿನ ವರ್ಷಗಳಲ್ಲಿ ಮಾನವ ಅಭಿವೃದ್ಧಿ ಸೂಚಿಯು ನಿರಂತರವಾಗಿ ಹೆಚ್ಚುತ್ತಿದ್ದು, ಅದು **2011 ರಲ್ಲಿ 0.547** ರಷ್ಟಿತ್ತು ಹಾಗಾಗಿ ಭಾರತವು ಇಂದು ಮಧ್ಯಮ ಮಾನವ ಅಭಿವೃದ್ಧಿ ಸಾಧಿಸಿದ ದೇಶಗಳ ಗುಂಪಿಗೆ ಸೇರಿದೆ.

## ಮಾನವ ಅಭಿವೃದ್ಧಿ ಮತ್ತು ಶಿಕ್ಷಣ ಪ್ರಗತಿಯ ಪರಿಹಾರೋಪಯಗಳು/ಮಾರ್ಗಗಳು/ ವಿಧಾನಗಳು

ಮಾನವ ಸಂಪನ್ಮೂಲ ಅಧ್ಯಯನಕ್ಕಾಗಿ **'ನೋಬಲ್ ಬಹುಮಾನವ'**ನ್ನು ಪಡೆದ **'ಥಿಯೋಡರ್ ಸಹಲ್ಜ್'** ರವರು ಮಾನವ ಸಂಪನ್ಮೂಲ ಅಭಿವೃದ್ಧಿಯನ್ನು ಐದು ಮಾರ್ಗಗಳಿಂದ ಅಭಿವೃದ್ಧಿ ಪಡಿಸಬಹುದು ಎಂದಿದ್ದಾರೆ ಅವುಗಳೆಂದರೆ –

1. ಆರೋಗ್ಯದ ಅನುಕೂಲತೆ ಮಾಡಿಕೊಡುವುದು ಮತ್ತು ಸೇವೆಗಳ ಅವಕಾಶ
2. ಉದ್ಯೋಗಾವಧಿ ತರಬೇತಿ ನೀಡುವುದು
3. ವಯಸ್ಕರ ಶಿಕ್ಷಣ / ಸಮಾಜ ಶಿಕ್ಷಣ
4. ವಿಸ್ತರಣಾ ಶಿಕ್ಷಣ – ಔಪಚಾರಿಕ ಶಿಕ್ಷಣ
5. ಉದ್ಯಮ ಶೀಲತೆಯನ್ನು ಅಭಿವೃದ್ಧಿಗೊಳಿಸುವುದು

ಹಾಗಾಗಿ ಮಾನವ ಸಂಪನ್ಮೂಲಕ್ಕೆ ಉತ್ತಮ ಶಿಕ್ಷಣ ತರಬೇತಿ ಮತ್ತು ಆರೋಗ್ಯ ಸುರಕ್ಷತೆಗಳನ್ನು ಒದಗಿಸಿದರೆ ಅವರು **'ಮಾನವ ಬಂಡವಾಳ'**ವಾಗಿ ಮಾರ್ಪಡುತ್ತಾರೆ, ಇವರು ರಾಷ್ಟ್ರದ ಆದಾಯದ ಹೆಚ್ಚಳಕ್ಕೆ ಕಾರಣರಾಗುವ, ಸಾಮಾಜಿಕ ಪರಿವರ್ತನೆ ತರುವ ಸಾಮರ್ಥ್ಯವನ್ನು ಹೊಂದುತ್ತಾರೆ. ಮಕ್ಕಳ ಶಿಕ್ಷಣ ಮತ್ತು ಆರೋಗ್ಯದ ಮೇಲೆ ಹೆಚ್ಚಿನ ಹಣ ಹೂಡುವುದರಿಂದ ಭವಿಷ್ಯದಲ್ಲಿ ಅವರು ಹೆಚ್ಚಿನ ಆದಾಯ ತರಬಲ್ಲರು, ಸಮಾಜಕ್ಕೆ, ದೇಶಕ್ಕೆ, ಉತ್ತಮ ಕೊಡುಗೆ ನೀಡಬಲ್ಲರು, ಆದ್ದರಿಂದಲೇ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಮಕ್ಕಳಿಗೆ, ನಾಗರಿಕರಿಗೆ ಉತ್ತಮ ಶಿಕ್ಷಣ ಹಾಗೂ ಆರೋಗ್ಯ ಒದಗಿಸಲು ಶ್ರಮಿಸುತ್ತವೆ. ಮಾನವ ಅಭಿವೃದ್ಧಿಗೆ, ಮಾನವನ ಯೋಗ ಕ್ಷೇಮಕ್ಕೆ ಶಿಕ್ಷಣ ಮತ್ತು ಆರೋಗ್ಯ ಎರಡೂ ಅವಿಭಾಜ್ಯ ಎಂಬ ಆಧಾರದ ಮೇಲೆ ಮಾನವ ಅಭಿವೃದ್ಧಿಯು ಆಧಾರಿತವಾಗಿದೆ.

- ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಜಾರಿಗೆ ತರಬೇಕು
- ಸಂವಿಧಾನದ ಆಶಯಗಳನ್ನು ಜಾರಿಗೊಳಿಸುವುದು
- ವಯಸ್ಕರ ಶಿಕ್ಷಣವನ್ನು ಕೈಗೊಳ್ಳುವುದು
- ಅಸಮಾನ ಅಭಿವೃದ್ಧಿ, ಲಿಂಗ ಅಸಮಾನತೆ–ತಾರತಮ್ಯ ಹೋಗಲಾಡಿಸುವುದು
- ಕೇಂದ್ರ ಮತ್ತು ರಾಜ್ಯದ ಶೈಕ್ಷಣಿಕ ಯೋಜನೆಗಳನ್ನು ಅನುಷ್ಠಾನಗೊಳಿಸುವುದು
- ಮಹಿಳಾ ಶಿಕ್ಷಣಕ್ಕೆ ಆದ್ಯತೆ ನೀಡುವುದು
- ಮಾನವ ಹಕ್ಕುಗಳನ್ನು ಅನುಷ್ಠಾನಗೊಳಿಸುವುದು
- ಸಂವಿಧಾನದ ಪ್ರಸ್ತಾವನೆಯ ಬಗ್ಗೆ ಅರಿವು ಮೂಡಿಸುವುದು
- ಹಕ್ಕು ಮತ್ತು ಕರ್ತವ್ಯಗಳ ಬಗ್ಗೆ ಅರಿವು ಮೂಡಿಸುವುದು
- ಸರ್ವಶಿಕ್ಷಣ ಅಭಿಯಾನ ಯೋಜನೆ ಜಾರಿಗೆ ತರುವುದು.
- ಮಾಧ್ಯಮಿಕ ಶಿಕ್ಷಣ ಅಭಿಯಾನ ಯೋಜನೆ ಜಾರಿಗೆ ತರುವುದು
- ಯೋಗ ಶಿಕ್ಷಣ, ಮೌಲ್ಯಶಿಕ್ಷಣ, ಕಾರ್ಯಶಿಕ್ಷಣ, ದೈಹಿಕ ಶಿಕ್ಷಣವನ್ನು ಶಿಕ್ಷಣದ ಪಠ್ಯಕ್ರಮದಲ್ಲಿ ತರುವುದು.

ISSN : 2249-2429 ಸಂಶೋಧನೆ RNI REG.NO.KARKAN/2011/38712

- ಉತ್ತಮ ಪಠ್ಯಕ್ರಮ, ಪಠ್ಯಪುಸ್ತಕ, ಬೋಧನಾ ಪದ್ಧತಿಯನ್ನು ಪರೀಕ್ಷಾ ಪದ್ಧತಿಯನ್ನು ಮೌಲ್ಯಮಾಪನ ವಿಧಾನವನ್ನು ತರುವುದು.
- ಉಚಿತ ಆರೋಗ್ಯ ತಪಾಷಣೆ, ಚಿಕ್ಸಿತೆ ನೀಡುವುದು ಮತ್ತು ಔಷದಗಳ ವಿತರಣೆ ಮಾಡುವುದು.
- ಪೌಷ್ಟಿಕ ಆಹಾರವನ್ನು ಮಧ್ಯಾಹ್ನ ಬಿಸಿ ಊಟದಲ್ಲಿ ನೀಡುವುದು
- ಮಾನವ ಹಕ್ಕುಗಳು, ಮಹಿಳಾ ಹಕ್ಕುಗಳು, ಮತ್ತು ಮಕ್ಕಳ ಹಕ್ಕುಗಳ ಬಗ್ಗೆ ಅರಿವು ಮೂಡಿಸುವುದು.
- ಕೂಲಿಯಿಂದ ಶಾಲೆಗೆ, ಬಾ ಮರಳಿ ಶಾಲೆಗೆ, ಬಾ ಬಾಲೆ ಶಾಲೆಗೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು.
- ಪ್ರತಿಯೊಬ್ಬ ಮನುಷ್ಯನಿಗೆ ಸಿಗುವ ಹಾಗೆ ಶಿಕ್ಷಣವನ್ನು ತರುವುದು.
- ಸಮನ್ವಯ ಶಿಕ್ಷಣ ಜಾರಿಗೆ ತರುವುದು.
- ವಿದ್ಯಾರ್ಥಿ ವೇತನವನ್ನು ನೀಡುವುದು.
- ಬಾಲಕ ಮತ್ತು ಬಾಲಕಿಯರಿಗೆ ಪ್ರತ್ಯೇಕ ವಸತಿಯುತ ಶಾಲೆ ತೆರೆಯುವುದು.
- ಎಲ್ಲಾ ಸಾಧ್ಯವಿರುವ ವಿಧಾನಗಳಿಂದ ಶಿಕ್ಷಣವನ್ನು ಕಡಿಮೆ ವೆಚ್ಚದಲ್ಲಿ ಎಲ್ಲಾರಿಗೂ ಸಿಗುವಂತೆ ಮಾಡುವುದು.

## ಮಾನವನನ್ನು ಅಭಿವೃದ್ಧಿಯತ್ತ ಸಾಗುವಂತೆ ಮಾಡುವುದೇ ಶಿಕ್ಷಣ

ಶಿಕ್ಷಣವು ವ್ಯಕ್ತಿ ತನ್ನಲ್ಲಿರುವ ಎಲ್ಲ ಶಕ್ತಿಯನ್ನೂ ಅಭಿವೃದ್ಧಿ ಗೊಳಿಸಿಕೊಂಡು ತನ್ನ ವಾತಾವರಣವನ್ನು ಹತೋಟಿಯಲ್ಲಿರಿಸಿಕೊಂಡು ತನಗೆ ಸಾಧ್ಯವಾದುದನ್ನೆಲ್ಲಾ ಪೂರೈಸಿಕೊಳ್ಳುವಂತೆ ಮಾಸುವುದಾಗಿದ. ಇಲ್ಲಿ ಅವನ ಶಕ್ತಿ ಎಂದರೆ ದೈಹಿಕ, ಬೌದ್ಧಿಕ ಮತ್ತು ನೈತಿಕ ಶಕ್ತಿ. ಅದೇ ಅಭಿಪ್ರಾಯವನ್ನು **ಟಿ.ಪಿ.ನನ್** ಮಹಾಶಯ ಬೇರೆ ರೀತಿಯಲ್ಲಿ ಹೇಳಿದ್ದಾನೆ. ಅವರ ಪ್ರಕಾರ **'ಶಿಕ್ಷಣವು ಮಗುವಿನ ವ್ಯಕ್ತಿತ್ವದ ಪರಿಪೂರ್ಣ ಬೆಳವಣಿಗೆಗೆ ಅವಕಾಶ ನೀಡಿ ಮಾಡುವುದಾಗಿದೆ'**. ಹಾಗೆ ಮಾನವನ ಬದುಕು ವಿಕಾಸಗೊಂಡು ಪರಿಪೂರ್ಣತೆಯೆಡೆಗೆ ಬಂದಾಗ ಪ್ರತಿಯೊಬ್ಬನಿಗೂ ಅರ್ಥ ಮಾಡಿಕೊಳ್ಳುವ, ಆಚರಿಸುವ ಮತ್ತು ಗುರಿ ಮುಟ್ಟುವ ಶಕ್ತಿ ಬರುತ್ತದೆ. ಆಗ ಅವನು ತನ್ನ ಸುತ್ತ ನಡೆಯುವ ಜೀವನ ವ್ಯಾಪಾರವನ್ನು ವಿಮರ್ಶಿಸುವ, ಟೀಕಿಸುವ ಸಾಮರ್ಥ್ಯವನ್ನು ಹೊಂದುತ್ತಾನೆ. ಅಂತಹ ವ್ಯಕ್ತಿ ನಿತ್ಯ ಪರಿವರ್ತನ ಶೀಲವಾದ ತನ್ನ ಸಮಾಜದ ವಾತಾವರಣದೊಂದಿಗೆ ಹೊಂದಿಕೊಂಡು ಬಾಳುವುದನ್ನು ಕಲಿಯುತ್ತಾನೆ.

**ಸಾಕ್ರೆಟೀಸನು 'ಜ್ಞಾನವೇ ಶಕ್ತಿ' 'Knowledge is Power'** ಎಂದು ಹೇಳಿದ್ದಾನೆ. ಅವನು ಶಿಷ್ಯ **ಪ್ಲೇಟೊ** ಮಹಾಶಯ 'ಶಿಕ್ಷಣವು ಮಾನವನ ತನ್ನ ಶಾರೀರಿಕ ಮತ್ತು ಆಂತರಿಕ ಸೌಂದರ್ಯ ಮತ್ತು ನೈಪುಣ್ಯತೆಯನ್ನು ಅವನ ಶಕ್ತಿಯಿದ್ದಷ್ಟು ಬೆಳೆಸಿಕೊಳ್ಳಲು ಅವಕಾಶ ಮಾಡಿಕೊಡು ವಂತಹುದಾಗಿದೆ' ಎಂದಿದ್ದಾನೆ. ಪ್ಲೇಟೊವಿನ ಶಿಷ್ಯ **ಅರಿಸ್ಟಾಟಲನೂ** ಇದೇ ಅಭಿಪ್ರಾಯ ಪಡುತ್ತಾನೆ.

ಶಿಕ್ಷಣ ಪ್ರತಿಯೊಬ್ಬ ವ್ಯಕ್ತಿಯೂ ತಾನು ಬಾಳುವ ಸಮಾಜಕ್ಕೆ ತನ್ನ ಮೂಲಭೂತ ಶಕ್ತಿಯಿಂದ ಏನಾದರೊಂದು ಹೊಸ ಕೊಡುಗೆಯನ್ನು ಕಾಣಿಕೆಯ ರೂಪದಲ್ಲಿ ಕೊಡುವಂತೆ ಮಾಡತಕ್ಕದೇ ಆಗಿದೆ. ಶಿಕ್ಷಣವು ವ್ಯಕ್ತಿಯಲ್ಲಿ ಸ್ವಯಂ ಸಾಮರ್ಥ್ಯವನ್ನುಂಟುಮಾಡಿ ತನ್ನನ್ನು ತಾನು ಹತೋಟಿಗೊಳಪಡಿಸಿಕೊಂಡು ಸರ್ವತೋಮುಖವಾದ ಬೆಳವಣಿಗೆಗೆ ನೆರವು ನೀಡುವಂತಹುದೇ ಆಗಿದೆ.

## ಮಾನವ ಸಂಪನ್ಮೂಲ ಅಭಿವೃದ್ಧಿಗೆ ಇರುವ ಸಮಸ್ಯೆಗಳು

- ಯೋಜಿತ ಶೈಕ್ಷಣಿಕ ಪ್ರಗತಿಗೆ ಅಡ್ಡಿ ಆತಂಕಗಳು.
- ಶೈಕ್ಷಣಿಕ ಯೋಜನೆಗಳ ನ್ಯೂನತೆಗಳು– ನಿರುದ್ಯೋಗ ಸಮಸ್ಯೆ.
- ಪರಿಸರದ ಅಂಶಗಳು– ಸಮಾಜದ ಕೆಲವು ಅಂಶಗಳಾದ ಬಡತನ, ಮೂಡನಂಬಿಕೆಗಳು, ಲಿಂಗಭೇದ.
- ಜನಸಂಖ್ಯಾ ಸ್ಫೋಟ ಮತ್ತು ಸಾಂಪ್ರದಾಯಿಕ ಪದ್ಧತಿಗಳು.
- ಅನಕ್ಷರತೆ ಮತ್ತು ಸುಶಿಕ್ಷಿತರ ನಿರುದ್ಯೋಗ.
- ಅತಿಯಾದ ವ್ಯಾಮೋಹದ ಧಾರ್ಮಿಕ ಭಾವನೆ ಮತ್ತು ಸಾಂಸ್ಕೃತಿಕ ಭಾವನೆಗಳು.
- ಶಿಸ್ತು ಮತ್ತು ನೈತಿಕತೆಯ ಕೊರತೆ.
- ರಾಷ್ಟೀಯ ಭಾವೈಕತೆ ಇಲ್ಲದೇ ಇರುವುದು.

## ಮಾನವ ಅಭಿವೃದ್ಧಿ ಮತ್ತು ಶಿಕ್ಷಣದಿಂದಾಗುವ ಪರಿಣಾಮಗಳು

- ಅನಕ್ಷರತೆ ಕಡಿಮೆಯಾಗಿ ಸಾಕ್ಷರತೆ ಹೆಚ್ಚಾಗುತ್ತದೆ.
- ನಿರುದ್ಯೋಗ ಸಮಸ್ಯೆ, ಲಿಂಗ ತಾರತಮ್ಯ ಅಸಮಾನತೆಯನ್ನು ಹೋಗಲಾಡಿಸಬಹುದು.
- ಸಮ–ಸಮಾಜದ ಸೃಷ್ಠಿ ಮಾಡಬಹುದು.
- ಸ್ವಚ್ಚ–ಸ್ವಾಥ್ಯ ಸಮಾಜವನ್ನು ಕಟ್ಟಬಹುದು.
- ಸೇವಾ ವಲಯಗಳಲ್ಲಿ ಪ್ರಗತಿ ಸಾಧಿಸಬಹುದು.
- ರಾಷ್ಟ್ರೀಯ ಆದಾಯ, ತಲಾ ಆದಾಯವನ್ನು ಹೆಚ್ಚಿಸಬಹುದು.
- ರಾಷ್ಟ್ರೀಯ ಭಾವೈಕತೆಯನ್ನು ವೃದ್ಧಿಸಬಹುದು.
- ವಿಶ್ವ ಮಾನವ ಪ್ರಜ್ಞೆಯನ್ನು ಬೆಳೆಸಬಹುದು.
- ಮೂಢನಂಬಿಕೆಗಳನ್ನು ಹೋಗಲಾಡಿಸಬಹುದು.
- ವೈಜ್ಞಾನಿಕ, ತಾಂತ್ರಿಕ, ಆಧುನಿಕತೆಯ ಜ್ಞಾನವನ್ನು ವೃದ್ಧಿಸಬಹುದು.
- ಸಾಮಾಜಿಕ ಪಿಡುಗುಗಳಾದ ಅಸ್ಪೃಶ್ಯತೆ, ಬಾಲ್ಯವಿವಾಹ, ವರದಕ್ಷಣೆ, ಜೀತ ಪದ್ಧತಿಗಳ ನಿವಾರಣೆ ಮಾಡಬಹುದು.
- ಮಹಿಳಾ ಸಬಲೀಕರಣ ಮಾಡಬಹುದು.
- ಆದರ್ಶ ಸಮಾಜ ಕಟ್ಟಬಹುದು.
- ವೈಜ್ಞಾನಿಕ, ವೈಚಾರಿಕ ಚಿಂತನೆಗಳನ್ನು ಬೆಳೆಸಬಹುದು.
- ಪರಿಸರ ಜಾಗೃತಿ ಮೂಡಿಸುವುದು.
- ಜೀವಿತಾವಧಿ, ಜೀವನಮಟ್ಟ, ಶೈಕ್ಷಣಿಕ ಸಾಧನೆಯನ್ನು ಹೆಚ್ಚಿಸಬಹುದು.
- ಸಾಮಾಜಿಕ, ನೈತಿಕ, ಆರ್ಥಿಕ, ರಾಜಕೀಯ ಮೌಲ್ಯಗಳನ್ನು ಬೆಳೆಸಬಹುದು.
- ಸಾಕ್ಷರತಾ ಸಮಾಜ ನಿರ್ಮಾಣ.
- ಆರೋಗ್ಯಕರವಾದ ಸಮಾಜ ನಿರ್ಮಾಣ.
- ಉದ್ಯಮಗಳ ಸ್ಥಾಪನೆ ಮತ್ತು ಅಭಿವೃದ್ಧಿ ಮಾಡಬಹುದು.

## ಉಪಸಂಹಾರ

**"ಮಾನವ ಅಭಿವೃದ್ಧಿ ಮತ್ತು ಶಿಕ್ಷಣ"** ಲೇಖನದಲ್ಲಿ ಒಂದು ರಾಷ್ಟ್ರ ಅಭಿವೃದ್ಧಿಯಾಗಬೇಕಾದರೆ ಮೊದಲು ಆ ರಾಷ್ಟ್ರದ ಪ್ರತಿಯೊಬ್ಬ ಪ್ರಜೆಗೂ ಉತ್ತಮವಾದ ಶಿಕ್ಷಣ ಸಿಗುವಂತಗಾಬೇಕು, ಅವಾಗ ಆ ದೇಶದ ಮಾನವ ಅಭಿವೃದ್ಧಿಯಾಗುತ್ತದೆ. ಅವಾಗ ಒಂದು ಬಲಿಷ್ಠ ಸಮಾಜ, ರಾಜ್ಯ, ರಾಷ್ಟ್ರದ ನಿರ್ಮಾಣವಾಗುತ್ತದೆ, ಧರ್ಮ, ಜಾತಿ, ಲಿಂಗ ತಾರತಮ್ಯವಿಲ್ಲದೆ ಎಲ್ಲಾರಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣ ಸಿಗಬೇಕು ಎಂಬುವುದು ನನ್ನ

ISSN : 2249-2429 ಸಂಶೋಧನೆ RNI REG.NO.KARKAN/2011/38712

ಆಶಯವಾಗಿದೆ. ಇದಕ್ಕಾಗಿ ಎಲ್ಲಾರನ್ನು **'ಶಿಕ್ಷಣದ ಮುಖ್ಯವಾಹಿನಿ'ಗೆ** ತರುವುದು ನಮ್ಮೆಲ್ಲಾರ ಆದ್ಯ ಕರ್ತವ್ಯವಾಗಬೇಕಾಗಿದೆ.

**ನಾನು ಭಾರತದ ಭವಿಷ್ಯವನ್ನು ನೋಡುವಾಗ**
**ನಕ್ಷತ್ರ ಗ್ರಹಗಳನ್ನು ನೋಡುವುದಿಲ್ಲ**
**ಮುದ್ದು ಮಕ್ಕಳ ಹೊಳೆಯುವ ಕಣ್ಣುಗಳನ್ನು ನೋಡುತ್ತೇನೆ.**
**ಆ ಕಣ್ಣುಗಳಲ್ಲಿ ಪ್ರಕಾಶವಿದ್ದರೆ, ಭಾರತಕ್ಕೆ ಭವಿಷ್ಯವಿರುತ್ತದೆ.**
**ಆ ಕಣ್ಣುಗಳಲ್ಲಿ ಕಣ್ಣೀರು, ನಿರಾಸೆ ತುಂಬಿದ್ದರೆ**
**ಭಾರತಕ್ಕೆ ಭವಿಷ್ಯವಿರುವುದಿಲ್ಲ.**

***– ಜವಾರಹರಲಾಲ್ ನೆಹರು***

**"ಓ ಮಾನವ, ಮಾನವರನ್ನು ಪ್ರೀತಿಸು ಹಾಗೂ ಗೌರವಿಸು...."**

**"ಕಲ್ಲಾಗು ಮನವೇ ಪೂಜಿಸುವ ಶಿಲೆಯಾಂತಾಗುವೆ...."**

**"ಕಾಡುಕಲ್ಲು ಬಂಡೆ ಕಂದಕದಲ್ಲಿ ಬೇರು ಬಿಡು ಮಾಮರವೇ...."**

## ಆಕರ ಗ್ರಂಥಗಳು


- **ಪ್ರೊ. ಸಿ. ಹೆಚ್. ಮರಿದೇವರು** (1973) : **" ಶಿಕ್ಷಣ ತತ್ತ್ವ ಶಾಸ್ತ್ರ"** (ಶಿಕ್ಷಣಕ್ಕೆ ತಾತ್ತ್ವಿಕ, ಸಾಮಾಜಿಕ, ಐತಿಹಾಸಿಕ, ಜೈವಿಕ ಬುನಾದಿ) **"ಉದಯೋನ್ಮುಖ ಭಾರತದಲ್ಲಿನ ಶಿಕ್ಷಣ"** ತುಮಕೂರು ಉದಯಬಾನು ಪ್ರಕಾಶನ.
- **ಎಚ್.ಎಂ. ಶೈಲಜ, ರಾಜೀವ ಪಿ. ಗುಂಡಾಳೆ** (2005) : **"ಭಾರತೀಯ ತಾತ್ತ್ವಿಕ ಪರಂಪರೆ ಮತ್ತು ಶಿಕ್ಷಣ"**. ಗದಗ ವಿದ್ಯಾನಿಧಿ ಪ್ರಕಾಶನ.
- **ಪಿ. ನಾಗರಾಜ** (2001)– **"ಶಿಕ್ಷಣದಲ್ಲಿ ತತ್ವಶಾಸ್ತ್ರ ಮತ್ತು ಸಮಾಜಶಾಸ್ತ್ರ"** ಗದಗ ವಿದ್ಯಾನಿಧಿ ಪ್ರಕಾಶನ.
- **ಮಂಜಯ್ಯ** (2003) : **"ಆಧುನಿಕ ಶಿಕ್ಷಣದಲ್ಲಿ ಮನೋವಿಜ್ಞಾನ"** ಬೆಂಗಳೂರು ಗೆಳೆಯರ ಬಳಗ ಪ್ರಕಾಶನ.
- ಕರ್ನಾಟಕ ಸರ್ಕಾರ **"ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಬುನಾದಿ ತರಬೇತಿ"**(2013–14) ಭಾಗ–3 ತರಬೇತಿ ಕೈಪಿಡಿ ಹಾಗೂ ಕಾರ್ಯ ಚಟುವಟಿಕೆ.
- www.pue.kar.nic.in
- www.schooleducation.kar.nic.in
- Nadler (1984) : "B. Ed, the hand book of human resource development" johnviley & sons, new York.


■■


# ಶಿಕ್ಷಣ ಸೌಧ

ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನ ಪತ್ರಿಕೆ

*ಚಂದಾ ವಿವರ :*

| | | |
|---|---|---|
| ವಾರ್ಷಿಕ ಚಂದಾ | ■ 500/- | ☐ |
| ತ್ರೈವಾರ್ಷಿಕ ಚಂದಾ | ₹ 1500/- | ☐ |
| ಆಜೀವ ಸದಸ್ಯತ್ವ | ₹ 5000 /- | ☐ |

*ಚಂದಾದಾರರು :*

**ವಿದ್ಯಾನಿಧಿ ಪ್ರಕಾಶನ, ಗದಗ.**

ಈ ಹೆಸರಿನ ಮೇಲೆ ಡಿಡಿ ತೆಗೆಯಿಸಬೇಕು.

ಡಿ.ಡಿ. ಕಳುಹಿಸಬೇಕಾದ ವಿಳಾಸ :

**ಶಿಕ್ಷಣ ಸೌಧ**

ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನ ಪತ್ರಿಕೆ
ವಿದ್ಯಾನಿಧಿ ಪ್ರಕಾಶನ
ಸ್ಟೇಶನ್ ರೋಡ ಮತ್ತು 'ನನಸು' ಜೆ.ಟಿ.ಮಠ ರೋಡ,
ಗದಗ – 582101. ಕರ್ನಾಟಕ ರಾಜ್ಯ
ಫೋನ್ : 08372–237527, 277527
Email : shikshansoudha@gmail.com

# ಶಿಕ್ಷಣ ಸೌಧ

ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನ ಪತ್ರಿಕೆ
ನೂತನ ಚಂದಾದಾರರ ನೋಂದಣಿ ಪ್ರತಿ

Date :

Name : ____________________

Designation : ____________________

Institution : ____________________

Address : ____________________

____________________

Phone Cell Nos.: ____________________

e-mail : ____________________

D.D. No. : ____________ Dated : ____________

Amount : ________ Bank : ____________________

*Institution's Signature*

ISSN : 2249-2429 ಸಂಶೋಧನೆ RNI REG.NO.KARKAN/2011/38712

# ಭಾರತದ ಉನ್ನತ ಶಿಕ್ಷಣ ವ್ಯವಸ್ಥೆ : ಸವಾಲುಗಳು ಮತ್ತು ಪರಿಹಾರಗಳು

**ಮಂಜುನಾಥ ಮ. ತಿಗಡಿ,** ಕೆ. ಎಲ್. ಇ. ಎಸ್. ಲಿಂಗರಾಜ ಕಾಲೇಜು (ಸ್ವಾಯತ್ತ) ಬೆಳಗಾವಿ.

**ಪ್ರೊ. ವಾಯ್. ಆಯ್. ಚವ್ಹಾಣ,** ಶ್ರೀ ಎಂ.ಬಿ.ಹಳ್ಳಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅಣ್ಣಿಗೇರಿ.

## ಪೀಠಿಕೆ

ಭಾರತದಂತಹ ಸಾಂಪ್ರದಾಯಿಕ ಅಥವಾ ಪರಿವರ್ತನೆಯ ಸಮಾಜದ ವಿಷಯದಲ್ಲಿ ಶಿಕ್ಷಣವು ವಿಶೇಷ ಮಹತ್ವವನ್ನು ಹೊಂದಿದೆ. ಸಾಮಾಜಿಕ ಪರಿವರ್ತನೆಯ ಪ್ರಚೋದನೆಗೆ ಶಿಕ್ಷಣವು ಒಂದು ಮೂಲಭೂತ ಕಾರಣವೆಂದು ಒಪ್ಪಿಕೊಳ್ಳಬಹುದು. ಭಾರತೀಯ ಶಿಕ್ಷಣ ಕಮೀಷನ್(1964–66)ರ ವರದಿಯು ಹೀಗೆ ಹೇಳಿದೆ, "ಶಿಕ್ಷಣ ದೇಶದ ಜನರ ಅರಿವು, ಜ್ಞಾನ, ಕೌಶಲ ಮತ್ತು ವೌಲ್ಯಗಳಲ್ಲಿ ಬದಲಾವಣೆಗಳನ್ನು ಒಳಗೊಂಡಿರುತ್ತದೆ. ಶಿಕ್ಷಣವು ಹಿಂಸಾತ್ಮಕ ಕ್ರಾಂತಿಯಿಲ್ಲದೆ ದೊಡ್ಡ ಪ್ರಮಾಣದ ಬದಲಾವಣೆಯನ್ನು ಸಾಧಿಸಲು ಏಕೈಕ ಸಾಧನವಾಗಿದೆ. ಶಿಕ್ಷಣವು ಒಂದು ದೇಶದ ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ಸಾಧಿಸಲು ಪ್ರಮುಖ ಅಸ್ತ್ರವಾಗಿದೆ." ಅದಕ್ಕಾಗಿ ಶಿಕ್ಷಣಕ್ಕೆ ಸಮಾಜದಲ್ಲಿ ಗೌರವಾನ್ವಿತ ಸ್ಥಾನ ದೊರೆತಿದೆ.

ಶಿಕ್ಷಣ ಒಂದು ರಾಷ್ಟ್ರದ ಸಮಗ್ರ ಅಭಿವೃದ್ಧಿಗೆ ಪರಿಣಾಮ ಬೀರುವಂತೆ ಉನ್ನತ ಶಿಕ್ಷಣವು ರಾಷ್ಟ್ರದ ಶಿಕ್ಷಣ ವ್ಯವಸ್ಥೆಯಲ್ಲಿ ನಿರ್ಣಾಯಕ ಸ್ಥಾನವನ್ನು ಆಕ್ರಮಿಸಿದೆ. ಭಾರತದ ಉನ್ನತ ಶಿಕ್ಷಣ ವ್ಯವಸ್ಥೆಯಲ್ಲಿ ಚೀನಾ ಮತ್ತು ಅಮೆರಿಕಾ ಸಂಯುಕ್ತ ಸಂಸ್ಥಾನದ ನಂತರ ವಿಶ್ವದ ಮೂರನೆಯ ಸ್ಥಾನ ಪಡೆದಿದೆ. ಸ್ವತಂತ್ರ ಭಾರತದಲ್ಲಿ ವಿಶ್ವವಿದ್ಯಾಲಯಗಳು, ವಿಶ್ವವಿದ್ಯಾಲಯದ ಮಟ್ಟದ ಸಂಸ್ಥೆಗಳು ಮತ್ತು ಕಾಲೇಜುಗಳ ಸಂಖ್ಯೆಯಲ್ಲಿನ ಹೆಚ್ಚಳದಿಂದಾಗಿ ಭಾರತದ ಉನ್ನತ ಶಿಕ್ಷಣ ಕ್ಷೇತ್ರವು ಭಾರಿ ಅತ್ಯುಚ್ಚ ಸ್ಥಾನವನ್ನು ಅಲಂಕರಿಸಿದೆ. 6–14 ವರ್ಷಗಳ ವಯಸ್ಸಿನೊಳಗಿನ ಎಲ್ಲಾ ಮಕ್ಕಳಿಗೆ ಕಡ್ಡಾಯ ಮತ್ತು ಉಚಿತ ಶಿಕ್ಷಣವನ್ನು ಒದಗಿಸುವ 2009ರ ಶಿಕ್ಷಣ ಹಕ್ಕು ಕಾಯಿದೆಯು ದೇಶದ ಶಿಕ್ಷಣ ವ್ಯವಸ್ಥೆಯಲ್ಲಿ ಒಂದು ಕ್ರಾಂತಿಯನ್ನು ತಂದಿದೆ. ಕಳೆದ ಹತ್ತು ವರ್ಷಗಳಲ್ಲಿ ಶಾಲೆಗಳ ಸಂಖ್ಯೆ ಮತ್ತು ದಾಖಲಾತಿಯಲ್ಲಿ ಅಗಾಧವಾದ ಏರಿಕೆಯಾಗಿದೆ. ಉನ್ನತ ಶಿಕ್ಷಣದಲ್ಲಿ ಖಾಸಗಿ ಕ್ಷೇತ್ರದ ಸಹಭಾಗಿತ್ವವು ಆ ಕ್ಷೇತ್ರದಲ್ಲಿನ ತೀವ್ರವಾದ ಬದಲಾವಣೆಗೆ ಕಾರಣವಾಗಿದೆ. ಪ್ರಸ್ತುತ 60% ರಷ್ಟು ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಭಾರತದಲ್ಲಿ ಖಾಸಗಿ ವಲಯವು ಸಹಾಯ ನೀಡುತ್ತದೆ. ವಿಶ್ವದಲ್ಲೇ ಅತೀ ಹೆಚ್ಚು ಉನ್ನತ ಶಿಕ್ಷಣ ಸಂಸ್ಥೆಗಳನ್ನು ಭಾರತವು ಹೊಂದಿದೆ. ಭಾರತದಲ್ಲಿ ವಿಶ್ವವಿದ್ಯಾಲಯಗಳ ಸಂಖ್ಯೆ 1950 ರಲ್ಲಿ 34 ಇತ್ತು, 2014 ರಲ್ಲಿ 677 ಆಗಿದೆ. ಈ ಸಂಖ್ಯೆಗಳ ಹೊರತಾಗಿಯೂ ಅಂತರ್‌ರಾಷ್ಟ್ರೀಯ ಶಿಕ್ಷಣ ರೇಟಿಂಗ್‌ನಲ್ಲಿ ಭಾರತದ ಒಂದೇ ಒಂದು ವಿಶ್ವವಿದ್ಯಾಲಯವು ಉನ್ನತ ಸ್ಥಾನವನ್ನು ಹೊಂದಿಲ್ಲ. ವಿಶ್ವದಲ್ಲಿ ಉನ್ನತ ಶ್ರೇಣಿಯ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲು ಭಾರತವು ವಿಫಲವಾಗಿದೆ. ಭಾರತದ ಉನ್ನತ ಶಿಕ್ಷಣವು ಬಹಳಷ್ಟು ಕಠಿಣ ಸವಾಲುಗಳನ್ನು ಎದುರಿಸುತ್ತಿದೆ. ಭಾರತದ ಶಿಕ್ಷಣ ಕ್ಷೇತ್ರದಲ್ಲಿ ಹೆಚ್ಚುತ್ತಿರುವ ಹೂಡಿಕೆಯ ಹೊರತಾಗಿಯೂ ದೇಶದ ಒಟ್ಟು ಜನಸಂಖ್ಯೆಯಲ್ಲಿ 25% ರಷ್ಟು ಜನರು ಇನ್ನೂ ಅನಕ್ಷರಸ್ಥರಾಗಿಯೇ ಉಳಿದಿದ್ದಾರೆ. ಭಾರತದಲ್ಲಿ 15% ರಷ್ಟು ವಿದ್ಯಾರ್ಥಿಗಳು ಕೇವಲ ಪ್ರೌಢ ಶಾಲೆಯನ್ನು ತಲುಪುತ್ತಾರೆ ಮತ್ತು 7% ರಷ್ಟು ಜನರು ಪದವಿಯನ್ನು ಪಡೆಯುತ್ತಾರೆ. ವಿಶ್ವದ ಪ್ರಮುಖ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗೆ ಹೋಲಿಸಿದರೆ ಭಾರತದಲ್ಲಿ ಶಿಕ್ಷಣದ ಗುಣಮಟ್ಟವು ಪ್ರಾಥಮಿಕ ಹಾಗೂ ಉನ್ನತ ಶಿಕ್ಷಣವು ಕಳಪೆ ಮಟ್ಟದ್ದಾಗಿದೆ. ಈ ಸಂಸ್ಥೆಗಳು ಬೋಧನಾ ಕೊರತೆ ಮತ್ತು ಶಿಕ್ಷಣದ ಗುಣಮಟ್ಟದ ಕೊರತೆಯನ್ನು ಎದುರಿಸುತ್ತವೆ. ಈ ಸವಾಲುಗಳ ಹೊರತಾಗಿಯೂ ಭಾರತದ ಉನ್ನತ ಶಿಕ್ಷಣ ವ್ಯವಸ್ಥೆಯು ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ತನ್ನ ಶ್ರೇಷ್ಠ ಗುರುತನ್ನು ಮೂಡಿಸುವ ಸಾಮರ್ಥ್ಯವನ್ನು ಹೊಂದಿದೆ.

## ಅಧ್ಯಯನದ ಉದ್ದೇಶಗಳು

1. ಭಾರತದ ಉನ್ನತ ಶಿಕ್ಷಣ ವ್ಯವಸ್ಥೆಯನ್ನು ಅರಿತುಕೊಳ್ಳುವುದು.
2. ಭಾರತದ ಉನ್ನತ ಶಿಕ್ಷಣ ವ್ಯವಸ್ಥೆಯು ಎದುರಿಸುತ್ತಿರುವ ಸಮಸ್ಯೆಗಳನ್ನು ತಿಳಿಯುವುದಾಗಿದೆ.
3. ಭಾರತದ ಉನ್ನತ ಶಿಕ್ಷಣದ ಪ್ರಸ್ತುತ ಸ್ಥಿತಿಗತಿಯನ್ನು ತಿಳಿಯುವ ಉದ್ದೇಶವಾಗಿದೆ.

## ಸಂಶೋಧನಾ ವಿಧಾನ

ಈ ಸಂಶೋಧನಾ ಲೇಖನವು ಮೂಲಭೂತವಾಗಿ ವಿವರಣಾತ್ಮಕ ಮತ್ತು ವಿಶ್ಲೇಷಣಾತ್ಮಕವಾಗಿದೆ. ಭಾರತದಲ್ಲಿ ಉನ್ನತ ಶಿಕ್ಷಣದ ಸವಾಲುಗಳನ್ನು ಮತ್ತು ನಿವಾರಣಾ ಕ್ರಮಗಳನ್ನು ವಿಶ್ಲೇಷಿಸುವುದು ಈ ಲೇಖನದ ಪ್ರಯತ್ನವಾಗಿದೆ. ಈ ಅಧ್ಯಯನದ ಅಗತ್ಯತೆಗೆ ಅನುಗುಣವಾಗಿ ಇದರಲ್ಲಿ ಬಳಸಲಾದ ದತ್ತಾಂಶಗಳನ್ನು ಮಾಧ್ಯಮಿಕ ಮೂಲಗಳಿಂದ ಪಡೆಯಲಾಗಿದೆ.

## ಉನ್ನತ ಶಿಕ್ಷಣದ ಅರ್ಥ

ಉನ್ನತ ಶಿಕ್ಷಣ ಎಂಬ ಶಬ್ದದ ಅರ್ಥ ವಿವರಣೆಯು ಅಸ್ಪಷ್ಟವಾಗಿದೆ. ಉನ್ನತ ಶಿಕ್ಷಣ ಎಂದರೆ ಮಾಧ್ಯಮಿಕ ಶಿಕ್ಷಣದ ಮಟ್ಟಕ್ಕಿಂತ ಹೆಚ್ಚಿನ ಶಿಕ್ಷಣವಾಗಿದೆ. ಕಾಲೇಜುಗಳು ಅಥವಾ ವಿಶ್ವವಿದ್ಯಾಲಯಗಳು ನೀಡುವ ಶಿಕ್ಷಣವು ಉನ್ನತ ಶಿಕ್ಷಣ ಎಂದು ಸಾಮಾನ್ಯವಾಗಿ ಪರಿಗಣಿಸಲಾಗುತ್ತದೆ. ಆದರೆ ವಾಸ್ತವವಾಗಿ ಕಾನೂನು, ತತ್ವಶಾಸ್ತ್ರ, ವೈದ್ಯಕೀಯ, ವಾಣಿಜ್ಯ, ಕಲೆ, ವಿಜ್ಞಾನ, ವೃತ್ತಿಪರ ಕೋರ್ಸಗಳು, ಶಿಕ್ಷಕರ ತರಬೇತಿ ಕೇಂದ್ರಗಳು ಮತ್ತು ತಾಂತ್ರಿಕ ಸಂಸ್ಥೆಗಳನ್ನು ಉನ್ನತ ಶಿಕ್ಷಣ ಕ್ಷೇತ್ರವು ಒಳಗೊಂಡಿದೆ. ಆದ್ದರಿಂದ ಸಾಮಾನ್ಯವಾಗಿ ಉನ್ನತ ಶಿಕ್ಷಣ ಎಂಬ ಪದವು ಪದವಿ ಮಟ್ಟದ ಶಿಕ್ಷಣ ಮತ್ತು ಅದಕ್ಕೂ ಮೇಲಿರುವ ಶಿಕ್ಷಣವನ್ನು ಸೂಚಿಸುತ್ತದೆ.

ಭಾರತೀಯ ಶಿಕ್ಷಣವು 6 ವರ್ಷ ವಯಸ್ಸಿನಲ್ಲಿ ಪ್ರಾರಂಭವಾಗುತ್ತದೆ. ಇದು 10 ವರ್ಷ ಪ್ರಾಥಮಿಕ ಮತ್ತು ಮಾಧ್ಯಮಿಕ ಹಂತಗಳು, 2 ವರ್ಷ ಪದವಿ ಪೂರ್ವ, 03 ವರ್ಷ ಸ್ನಾತಕ ಪದವಿ ಮತ್ತು 2 ವರ್ಷ ಸ್ನಾತಕೋತ್ತರ ಪದವಿಯನ್ನು ಒಳಗೊಂಡಿದೆ. ಎನ್.ಇ.ಪಿ. 1968 ಮತ್ತು 1986ರ ಪ್ರಕಾರ ಇದನ್ನು 10+2+3 ವ್ಯವಸ್ಥೆ ಎಂದು ಕರೆಯಲಾಗುತ್ತದೆ.

ISSN : 2249-2429 ಸಂಶೋಧನೆ RNI REG.NO.KARKAN/2011/38712

## ಭಾರತದ ಉನ್ನತ ಶಿಕ್ಷಣದ ಇತಿಹಾಸ

### • ಪ್ರಾಚೀನ ಭಾರತದಲ್ಲಿ ಉನ್ನತ ಶಿಕ್ಷಣ

ಪ್ರಾಚೀನ ಭಾರತದಲ್ಲಿನ ಉನ್ನತ ಶಿಕ್ಷಣದ ಸ್ವರೂಪವನ್ನು ಧಾರ್ಮಿಕತೆ ಎಂದು ಪರಿಗಣಿಸಲಾಗಿದೆ. ಪ್ರಾಚೀನ ಭಾರತದ ಸಮಾಜದಲ್ಲಿನ ಜನರಿಗೆ ಜ್ಞಾನವನ್ನು ಒದಗಿಸುವುದು, ಪರಿವರ್ತಿಸುವುದು ಮತ್ತು ಹರಡುವುದರಲ್ಲಿ ಧರ್ಮ ಆಧಾರಿತ ಶಿಕ್ಷಣವು ಅತ್ಯುನ್ನತ ಪಾತ್ರವನ್ನು ವಹಿಸಿದೆ. ಪ್ರಾಚೀನ ಭಾರತದಲ್ಲಿ ಬ್ರಾಹ್ಮಣ ಶಿಕ್ಷಣ ಮತ್ತು ಬೌದ್ಧ ಶಿಕ್ಷಣ ವ್ಯವಸ್ಥೆಗಳು ಶೈಕ್ಷಣಿಕ ವ್ಯವಸ್ಥೆಗಳಲ್ಲಿ ಎರಡು ವಿಸ್ತಾರವಾದ ಕ್ಷೇತ್ರಗಳಾಗಿದ್ದವು.

ವೈದಿಕ ಕಾಲದಲ್ಲಿ ಬ್ರಾಹ್ಮಣ ಶಿಕ್ಷಣವು ಅಭಿವೃದ್ಧಿಗೊಂಡಿವೆ. ಆಗ ಮೌಖಿಕ ಪ್ರಸರಣದ ಮೂಲಕ ಸಮಕಾಲೀನ ಧಾರ್ಮಿಕ ಪಠ್ಯಗಳನ್ನು ಬೋಧಿಸಲಾಗುತ್ತಿತ್ತು. ಋಗ್ವೇದ ಕಾಲದಲ್ಲಿ ಮಹಿಳೆಯರು ಶಿಕ್ಷಣದ ಎಲ್ಲಾ ಕ್ಷೇತ್ರಗಳಲ್ಲಿ ಪುರುಷರೊಂದಿಗೆ ಸಮಾನ ಸ್ಥಾನಮಾನವನ್ನು ಪಡೆದುಕೊಂಡಿದ್ದರು. ನಂತರದ ವೈದಿಕ ಕಾಲವು ಶೈಕ್ಷಣಿಕ ವ್ಯವಸ್ಥೆಯಲ್ಲಿ ಕೆಲವು ಬದಲಾವಣೆಗಳನ್ನು ಕಂಡಿತು.

ಬೌದ್ಧ ಶಿಕ್ಷಣದ ಸ್ವರೂಪ ಧಾರ್ಮಿಕ ಮತ್ತು ಜಾತ್ಯತೀತವಾಗಿತ್ತು. ಬೌದ್ಧ ಶಿಕ್ಷಣದ ಪ್ರಮುಖ ಅಂಶವೆಂದರೆ, ಆಗಿನ ಶಿಕ್ಷಣವು ಬೌದ್ಧ ವಿಹಾರಗಳಲ್ಲಿ ಕೇಂದ್ರಿಕೃತವಾಗಿತ್ತು. ಈ ಕಾಲದ ಶಿಕ್ಷಣವನ್ನು ಮತ್ತು ಶೈಕ್ಷಣಿಕ ಸಂಸ್ಥೆಗಳ ಸ್ವರೂಪವನ್ನು ಆಧುನಿಕ ವಿಶ್ವವಿದ್ಯಾಲಯಗಳೊಂದಿಗೆ ಹೋಲಿಸಬಹುದಾಗಿದೆ. ನಳಂದ, ವಿಕ್ರಮಶೀಲ, ತಕ್ಷಶೀಲ ಮತ್ತು ವಲ್ಲಭಿ ವಿಶ್ವವಿದ್ಯಾಲಯಗಳು ಭಾರತದ ಪ್ರಮುಖ ವಿಶ್ವವಿದ್ಯಾಲಯಗಳಾಗಿದ್ದವು.

### • ಮಧ್ಯಕಾಲೀನ ಭಾರತದಲ್ಲಿ ಉನ್ನತ ಶಿಕ್ಷಣ

ಭಾರತದ ಇತಿಹಾಸದಲ್ಲಿ ಮಧ್ಯಕಾಲೀನ ಯುಗ ಸಾಮಾಜಿಕ ಮತ್ತು ಸಾಂಸ್ಕೃತಿಕ ಬದಲಾವಣೆಯ ಒಂದು ಪ್ರಮುಖ ಹಂತವನ್ನು ಸೂಚಿಸುತ್ತದೆ. ಈ ಅವಧಿಯಲ್ಲಿ ಮದರಸಾಗಳು ಶಿಕ್ಷಣದ ಪ್ರಮುಖ ಕೇಂದ್ರಗಳಾಗಿ ಹೊರಹೊಮ್ಮಿದ್ದವು. ಮದರಸಾಗಳಲ್ಲಿನ ಶಿಕ್ಷಣವು ಧಾರ್ಮಿಕ, ವ್ಯಾಕರಣ, ತರ್ಕ, ವಾಕ್‌ಚಾತುರ್ಯ, ದೇವತಾಶಾಸ್ತ್ರ, ಆಧ್ಯಾತ್ಮಿಕತೆ, ಸಾಹಿತ್ಯ, ನ್ಯಾಯಶಾಸ್ತ್ರ ಮತ್ತು ವಿಜ್ಞಾನವನ್ನು ಒಳಗೊಂಡಿತ್ತು. ಕೆಲವು ಮದರಸಾಗಳು ವಿಶ್ವವಿದ್ಯಾಲಯಗಳ ಸ್ಥಾನಮಾನವನ್ನು ಪಡೆದಿದ್ದವು.

### • ಬ್ರಿಟಿಷರ ಆಡಳಿತಾವಧಿಯಲ್ಲಿನ ಉನ್ನತ ಶಿಕ್ಷಣ

ಬ್ರಿಟಿಷರು ತಮ್ಮ ಆಡಳಿತಾವಧಿಯ ಭಾರತದಲ್ಲಿನ ಶಿಕ್ಷಣದ ಅಭಿವೃದ್ಧಿಗಾಗಿ ಬ್ರಿಟಿಷ್ ಸಂಸತ್ತು ಚಾರ್ಟರ್ ಆಕ್ಟ್ (1813) ಅನ್ನು ನವೀಕರಿಸಿದ ಸಮಯದಿಂದ ಭಾರತೀಯ ಉನ್ನತ ಶಿಕ್ಷಣವು ಪ್ರಸ್ತುತ ರೂಪದಲ್ಲಿ ಕಾಣಿಸಿಕೊಂಡಿದೆ. 1857ರಲ್ಲಿ ಕಲ್ಕತ್ತಾ, ಬಾಂಬೆ ಮತ್ತು ಮದ್ರಾಸ್ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲು ಮತ್ತು ಇಂಗ್ಲಿಷ ಶಿಕ್ಷಣವನ್ನು ಪ್ರೋತ್ಸಾಹಿಸಲು ಚಾರ್ಲ್ಸ್‌ವುಡ್ ವರದಿಯು ಕಾರಣವಾಯಿತು. ಹಂಟರ್ ಆಯೋಗವು (1882–83) ಭಾರತದಲ್ಲಿ ವಿಶ್ವವಿದ್ಯಾಲಯ ಶಿಕ್ಷಣಕ್ಕೆ ಹಣಕಾಸು ನೀಡುವ ಶಿಫಾರಸ್ಸನ್ನು ಮಾಡಿ ಭಾರತದಲ್ಲಿ ಉನ್ನತ ಶಿಕ್ಷಣದ ಅಭಿವೃದ್ಧಿಗೆ ಪ್ರಮುಖ ಪ್ರಚೋದನೆಯನ್ನು ನೀಡಿತು. ಸ್ಯಾಂಡರ್ಸ್ ಆಯೋಗವು (1917) ವಿಶ್ವವಿದ್ಯಾಲಯಗಳ ಸ್ವಾಯತ್ತತೆಗೆ ಶಿಫಾರಸ್ಸು ಮಾಡಿರುವುದರಿಂದ ಬ್ರಿಟಿಷರ ಆಡಳಿತಾವಧಿಯಲ್ಲಿ ಭಾರತದ ಉನ್ನತ ಶಿಕ್ಷಣದ ಚಿತ್ರಣವೇ ಸಂಪೂರ್ಣವಾಗಿ ಬದಲಾವಣೆಯಾಯಿತು.

### • ಸ್ವತಂತ್ರ ಭಾರತದಲ್ಲಿನ ಉನ್ನತ ಶಿಕ್ಷಣ

ಸ್ವತಂತ್ರ ಭಾರತದಲ್ಲಿ ಮೊದಲ ಶಿಕ್ಷಣ ಆಯೋಗವಾದ ರಾಧಾಕೃಷ್ಣನ್ ಆಯೋಗವು (1948–49) ಯು.ಜಿ.ಸಿ. ಸ್ಥಾಪನೆಗೆ ಶಿಫಾರಸ್ಸು ಮಾಡಿತು. ಸ್ವತಂತ್ರ ಭಾರತದಲ್ಲಿ ಯು.ಜಿ.ಸಿ ಸ್ಥಾಪನೆ (1956) ಭಾರತೀಯ ಉನ್ನತ ಶಿಕ್ಷಣ ವ್ಯವಸ್ಥೆಯ ರಚನೆಗೆ ನಿಯಮವನ್ನು ರೂಪಿಸಿದ ಪ್ರಮುಖ ಹೆಗ್ಗುರುತಾಗಿದೆ. ಭಾರತ ಸ್ವತಂತ್ರ್ಯದ ನಂತರ ಉನ್ನತ ಶಿಕ್ಷಣ ವ್ಯವಸ್ಥೆಯನ್ನು ಸುಧಾರಿಸಲು ವಿವಿಧ ಪ್ರಯತ್ನಗಳನ್ನು ಮಾಡಲಾಗಿದೆ. ಸೆಕೆಂಡರಿ ಎಜುಕೇಷನ್ ಕಮಿಷನ್ (1952), ಭಾರತೀಯ ಶಿಕ್ಷಣ ಆಯೋಗವು (1964) 3 ವರ್ಷ ಮಾಧ್ಯಮಿಕ ಮತ್ತು 3 ವರ್ಷದ ಗೌರವ ಪದವಿ ಕೋರ್ಸನ್ನು ಪರಿಚಯಿಸಿತು. ಭಾರತೀಯ ಶಿಕ್ಷಣದ ರಾಷ್ಟ್ರೀಯ ನೀತಿಯು (1968) ಉನ್ನತ ಶಿಕ್ಷಣ ಮಟ್ಟದಲ್ಲಿ ಗುಣಾತ್ಮಕ ಸುಧಾರಣೆಗೆ ಒತ್ತಾಯಿಸಿತು. 1986 ರ ಶಿಕ್ಷಣದ ರಾಷ್ಟ್ರೀಯ ನೀತಿಯು 10+2+3 ಮಾದರಿಯ ಶೈಕ್ಷಣಿಕ ವ್ಯವಸ್ಥೆಯನ್ನು ಶಿಫಾರಸ್ಸು ಮಾಡಿದೆ. ಈ ಆಯೋಗಗಳ ಶಿಫಾರಸ್ಸಿನ ಪರಿಣಾಮಗಳನ್ನು ಪ್ರಸ್ತುತ ಭಾರತದ ಶಿಕ್ಷಣದ ವ್ಯವಸ್ಥೆಯಲ್ಲಿ ಕಾಣಬಹುದಾಗಿದೆ. ಸ್ವಾತಂತ್ರ್ಯದ ನಂತರ ಭಾರತದ ಉನ್ನತ ಶಿಕ್ಷಣದ ಅಭಿವೃದ್ಧಿ ಗಮನಾರ್ಹವಾಗಿದೆ. ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು ಶೈಕ್ಷಣಿಕ ಆಡಳಿತದ ಅತ್ಯುನ್ನತ ಸಂಸ್ಥೆಯಾಗಿದೆ. ವಾಸ್ತವವಾಗಿ ವಿಶ್ವವಿದ್ಯಾಲಯ ಧನಸಹಾಯ ಆಯೋಗ (ಯು.ಜಿ.ಸಿ)ವು ಭಾರತದಲ್ಲಿ ಉನ್ನತ ಶಿಕ್ಷಣವನ್ನು ನಿಯಂತ್ರಿಸುತ್ತದೆ.

ಯು.ಜಿ.ಸಿ ವರದಿ 2012ರ ಪ್ರಕಾರ ಸುಮಾರು 43 ಕೇಂದ್ರ ವಿಶ್ವವಿದ್ಯಾಲಯಗಳು, 272 ರಾಜ್ಯ ವಿಶ್ವವಿದ್ಯಾಲಯಗಳು, 130 ಸ್ವಾಯತ್ತ ವಿಶ್ವವಿದ್ಯಾಲಯಗಳು, 95 ಖಾಸಗಿ ವಿಶ್ವವಿದ್ಯಾಲಯಗಳು, ರಾಷ್ಟ್ರೀಯ ಪ್ರಾಮುಖ್ಯತೆಯ 5 ಸಂಸ್ಥೆಗಳು ಮತ್ತು ಭಾರತದಲ್ಲಿ ಸುಮಾರು 34,000 ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ.

### • ಭಾರತೀಯ ಉನ್ನತ ಶಿಕ್ಷಣದಲ್ಲಿನ ಇತ್ತೀಚಿನ ಪ್ರವೃತ್ತಿಗಳು

ಉನ್ನತ ಶಿಕ್ಷಣದ ವಿಷಯದಲ್ಲಿ ಭಾರತವು ಒಂದು ಪ್ರಮುಖ ಸ್ಥಾನವನ್ನು ಹೊಂದಿದೆ. ಉನ್ನತ ಶೈಕ್ಷಣಿಕ ಸಂಸ್ಥೆಗಳು ಮತ್ತು ವಿದ್ಯಾರ್ಥಿಗಳ ದಾಖಲಾತಿ ಸಂಖ್ಯೆ ಸ್ವಾತಂತ್ರ್ಯದ ನಂತರ ಹೆಚ್ಚುತ್ತಿದೆ. ಹೀಗಾಗಿ ಭಾರತದಲ್ಲಿ ಸ್ವಾತಂತ್ರ್ಯದ ನಂತರ ಉನ್ನತ ಶಿಕ್ಷಣವು ಭಾರತದೆಲ್ಲೆಡೆ ವೇಗವಾಗಿ ಹರಡಿದೆ. ಭಾರತದ ಉನ್ನತ ಶಿಕ್ಷಣ ಕ್ಷೇತ್ರದ ವಿಸ್ತರಣೆ ವಿಶೇಷವಾಗಿ ಇತ್ತೀಚಿನ ದಿನಗಳಲ್ಲಿ ಬಹಳ ಪ್ರಭಾವಶಾಲಿಯಾಗಿದೆ. 1951 ಮತ್ತು 2012ರ ನಡುವೆ ರಾಷ್ಟ್ರೀಯ ಪ್ರಾಮುಖ್ಯತೆಯ ವಿಶ್ವವಿದ್ಯಾಲಯಗಳ ಮತ್ತು ಸಂಸ್ಥೆಗಳ ಸಂಖ್ಯೆ 27 ರಿಂದ 621 ಕ್ಕೆ ಏರಿತು. ದಾಖಲಾತಿಯು 2001–02 ರಲ್ಲಿ 8.8 ದಶಲಕ್ಷದಿಂದ 2011–12 ರಲ್ಲಿ 28.5 ದಶಲಕ್ಷಕ್ಕೆ ಏರಿತು. ಉನ್ನತ ಶಿಕ್ಷಣದಲ್ಲಿ ಬಾಲಕಿಯರ ನೋಂದಣಿ 2007 ರಿಂದ 2014 ರವರೆಗೆ 39% ರಿಂದ 46% ಕ್ಕೆ ಏರಿತು.

ಈ ಮುಂದಿನ ಕೋಷ್ಟಕ ತಿಳಿಸುವ ಚಿತ್ರಣವೇನೆಂದರೆ, ಭಾರತದಲ್ಲಿ 2002ರಲ್ಲಿ ಕೇವಲ 25 ವಿಶ್ವವಿದ್ಯಾಲಯ ಮಟ್ಟದ ಶಿಕ್ಷಣ ಸಂಸ್ಥೆಗಳಿದ್ದವು, 2011ರಲ್ಲಿ ಅವುಗಳ ಸಂಖ್ಯೆ 544ಕ್ಕೆ ಏರಿಕೆಯಾಗಿದೆ. ಕಾಲೇಜುಗಳ ಸಂಖ್ಯೆ 2002 ರಲ್ಲಿ 700 ರಿಂದ 2011ಕ್ಕೆ 31,324ಕ್ಕೆ ಏರಿತು. ಹಾಗೆಯೇ ಶಿಕ್ಷಕರ/ ಉಪನ್ಯಾಸಕರ ಸಂಖ್ಯೆ 2002ರಲ್ಲಿ 15,000 ರಷ್ಟಿತ್ತು, 2011 ರಲ್ಲಿ 6,99,000ಕ್ಕೆ ಹೆಚ್ಚಿತು. ಭಾರತದ ಉನ್ನತ ಶಿಕ್ಷಣದಲ್ಲಿ ವಿದ್ಯಾರ್ಥಿಗಳ ದಾಖಲಾತಿ ಸಂಖ್ಯೆ 2002 ರಲ್ಲಿ 0.1 ದಶಲಕ್ಷದಷ್ಟಿತ್ತು. ನಂತರ 2011 ರಲ್ಲಿ 14.6 ದಶಲಕ್ಷಕ್ಕೆ ಏರಿಕೆಯಾಯಿತು. ಈ ಅಂಕಿ–ಸಂಖ್ಯೆಗಳಿಂದ ತಿಳಿಯುವುದೇನೆಂದರೆ ಭಾರತದಲ್ಲಿ ಉನ್ನತ ಶಿಕ್ಷಣ ತುಂಬಾ ಪ್ರಾಮುಖ್ಯತೆಯನ್ನು ಪಡೆದಿದೆ.

### • ಭಾರತದಲ್ಲಿನ ಉನ್ನತ ಶಿಕ್ಷಣವು ಎದುರಿಸುತ್ತಿರುವ ಸವಾಲುಗಳು

ಭಾರತವು ಸ್ವಾತಂತ್ರ್ಯವಾಗಿ ಎಂಟು ದಶಕಗಳು ಕಳೆದಿವೆಯಾದರೂ

ISSN : 2249-2429 ಸಂಶೋಧನೆ RNI REG.NO.KARKAN/2011/38712

ಉನ್ನತ ಶಿಕ್ಷಣ ಸಂಸ್ಥೆಗಳು ಮತ್ತು ಅವುಗಳ ಸಾಮರ್ಥ್ಯ

| ವರ್ಷಗಳು | 2002 | 2006 | 2007 | 2009 | 2010 | 2011 |
|---|---|---|---|---|---|---|
| ವಿಶ್ವವಿದ್ಯಾಲಯಗಳ ಮಟ್ಟದ ಸಂಸ್ಥೆಗಳ ಸಂಖ್ಯೆ | 25 | 117 | 320 | 367 | 467 | 544 |
| ಕಾಲೇಜುಗಳ ಸಂಖ್ಯೆ | 700 | 7,346 | 16,885 | 18,064 | 25,951 | 31,324 |
| ಶಿಕ್ಷಕರ ಸಂಖ್ಯೆ (ಸಾವಿರಗಳಲ್ಲಿ) | 15 | 272 | 457 | 488 | 588 | 699 |
| ವಿದ್ಯಾರ್ಥಿಗಳ ದಾಖಲಾತಿ ಸಂಖ್ಯೆ (ಮಿಲಿಯನಗಳಲ್ಲಿ) | 0.1 | 4.9 | 9.95 | 11.2 | 13.6 | 14.6 |

**Source:** Higher Education in India (strategies and Schemes during 11th Plan Period (2007-12) for universities and colleges) UGC Report January 2011 Chapter 1 and 2 pp,1 and 3. Total University level institutions by 01-07-2010.

ಇನ್ನೂ ನಮ್ಮ ಶಿಕ್ಷಣ ವ್ಯವಸ್ಥೆಯನ್ನು ಸಂಪೂರ್ಣವಾಗಿ ಅಭಿವೃದ್ಧಿ ಪಡಿಸಲಾಗಿಲ್ಲ. ವಿಶ್ವದ 100 ವಿಶ್ವವಿದ್ಯಾಲಯಗಳಲ್ಲಿ ನಮ್ಮ ದೇಶದ ಒಂದೇ ಒಂದು ವಿಶ್ವವಿದ್ಯಾಲಯವು ಶ್ರೇಷ್ಠ ವಿಶ್ವವಿದ್ಯಾಲಯ ಎಂದು ಆಯ್ಕೆಯಾಗಲು ಸಾಧ್ಯವಾಗಿಲ್ಲ. ಕಾಲಾಂತರದಲ್ಲಿ ವಿವಿಧ ಸರ್ಕಾರಗಳು ಎಷ್ಟೇ ಪ್ರಯತ್ನಿಸಿದರು ಜಾಗತೀಕ ಮಟ್ಟದ ಶ್ರೇಷ್ಠ ವಿಶ್ವವಿದ್ಯಾಲಯವನ್ನು ನಿರ್ಮಿಸಲು ಸಾಧ್ಯವಾಗಿಲ್ಲ. ಯು.ಜಿ.ಸಿ ನಿರಂತರವಾಗಿ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಕೇಂದ್ರಿಕರಿಸುತ್ತಿದೆ. ಆದರೂ ಉನ್ನತ ಶಿಕ್ಷಣ ವ್ಯವಸ್ಥೆಯು ಬಹಳಷ್ಟು ಸಮಸ್ಯೆಗಳನ್ನು ಮತ್ತು ಸವಾಲುಗಳನ್ನು ಎದುರಿಸುತ್ತಿವೆ, ಅವು ಈ ಮುಂದಿನಂತಿವೆ.

## 1. ಉನ್ನತ ಶಿಕ್ಷಣ ಸಂಸ್ಥೆಗಳ ಕೊರತೆ

ಭಾರತದಲ್ಲಿ ಉನ್ನತ ಶಿಕ್ಷಣದ ಒಟ್ಟು ದಾಖಲಾತಿ ಅನುಪಾತ ಕೇವಲ 15% ಆಗಿದೆ. ಇದು ಅಭಿವೃದ್ಧಿ ಹೊಂದಿದ ದೇಶಗಳಿಗೆ ಹೊಲಿಸಿದರೆ ತುಂಬಾ ಕಡಿಮೆಯಾಗಿದೆ. ಆದರೂ ದೇಶದಲ್ಲಿ ಶಾಲಾ ಮಟ್ಟದಲ್ಲಿ ದಾಖಲಾತಿಗಳ ಹೆಚ್ಚಳದಿಂದ ದೇಶದಲ್ಲಿ ಬೆಳೆಯುತ್ತಿರುವ ಶಿಕ್ಷಣದ ಬೇಡಿಕೆಯನ್ನು ಪೂರೈಸುವ ಉನ್ನತ ಶಿಕ್ಷಣ ಸಂಸ್ಥೆಗಳ ಪೂರೈಕೆ ಸಾಕಷ್ಟಿಲ್ಲವೆಂದು ಹೇಳಬಹುದಾಗಿದೆ.

## 2. ದಾಖಲಾತಿ ಅನುಪಾತದಲ್ಲಿ ಅಸಮಾನತೆ

ಸಮಾಜದ ವಿವಿಧ ವರ್ಗಗಳಲ್ಲಿ ಒಟ್ಟು ದಾಖಲಾತಿಯ ಅನುಪಾತದಲ್ಲಿ ಸಮಾನತೆ ಇಲ್ಲ. ಭಾರತದ ಹಿಂದುಳಿದ ವರ್ಗಗಳ ಉನ್ನತ ಶಿಕ್ಷಣದ ದಾಖಲಾತಿ ಬಹಳಷ್ಟು ಕಡಿಮೆಯಿದೆ. ಹಾಗೆಯೇ ಸ್ತ್ರೀಯರ ದಾಖಲಾತಿ ಪ್ರಮಾಣವು ಕಡಿಮೆ ಇದ್ದದ್ದು ಕಂಡು ಬರುತ್ತದೆ. ದೇಶದ ಕೆಲವು ರಾಜ್ಯಗಳು ಹೆಚ್ಚಿನ ದಾಖಲಾತಿಯನ್ನು ಹೊಂದಿದ್ದು, ಇನ್ನು ಕೆಲವು ರಾಜ್ಯಗಳು ಕಡಿಮೆ ದಾಖಲಾತಿಯನ್ನು ಹೊಂದಿವೆ. ಇದು ಉನ್ನತ ಶಿಕ್ಷಣ ವ್ಯವಸ್ಥೆಯೊಳಗಿನ ಮಹತ್ವದ ಅಸಮತೋಲನವನ್ನು ಪ್ರತಿಬಿಂಬಿಸುತ್ತದೆ.

## 3. ಉನ್ನತ ಶಿಕ್ಷಣದಲ್ಲಿ ಗುಣಮಟ್ಟದ ಕೊರತೆ

ಉನ್ನತ ಶಿಕ್ಷಣದಲ್ಲಿನ ಗುಣಮಟ್ಟ ಬಹು ಆಯಾಮದ್ದಾಗಿದೆ. ಸರ್ಕಾರಗಳು ನಿರಂತರವಾಗಿ ಗುಣಮಟ್ಟದ ಶಿಕ್ಷಣವನ್ನು ಕೇಂದ್ರೀಕರಿಸುತ್ತಿವೆ. ಆದಾಗ್ಯೂ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳು ಯು.ಜಿ.ಸಿ.ಯಿಂದ ನೀಡಲ್ಪಟ್ಟ ಕನಿಷ್ಟ ಅವಶ್ಯಕತೆಗಳನ್ನು ಪೂರೈಸಲು ಅಸಮರ್ಥವಾಗಿವೆ. ಎನ್.ಎ.ಎ.ಸಿ. (NAAC) ಒದಗಿಸಿದ ಮಾಹಿತಿಯ ಪ್ರಕಾರ (2010) ದೇಶದ ಒಟ್ಟು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ 25% ರಷ್ಟು ಸಹ ಮಾನ್ಯತೆ ಪಡೆಯಲಿಲ್ಲ, ಹಾಗೂ ಮಾನ್ಯತೆ ಪಡೆದವುಗಳಲ್ಲಿ ಕೇವಲ 30% ರಷ್ಟು ವಿಶ್ವವಿದ್ಯಾಲಯಗಳು ಮತ್ತು 45% ರಷ್ಟು ಕಾಲೇಜುಗಳು 'ಎ' ಮಟ್ಟದ ಶ್ರೇಣಿಯನ್ನು ಪಡೆಯುವ ಗುಣಮಟ್ಟದವೆಂದು ಕಂಡುಬಂದಿದೆ.

## 4. ಕಳಪೆ ಮೂಲಭೂತ ಸೌಕರ್ಯಗಳು

ಭಾರತದ ಉನ್ನತ ಶಿಕ್ಷಣ ವ್ಯವಸ್ಥೆಗೆ ಕಳಪೆ ಮೂಲಭೂತ ಸೌಕರ್ಯಗಳು ಮತ್ತೊಂದು ಸವಾಲಾಗಿದೆ. ವಿಶೇಷವಾಗಿ ಸಾರ್ವಜನಿಕ ಅಥವಾ ಸರ್ಕಾರಿ ವಲಯವು ನಡೆಸುತ್ತಿರುವ ಸಂಸ್ಥೆಗಳು ಕಳಪೆ ಭೌತಿಕ ಸೌಲಭ್ಯಗಳು ಮತ್ತು ಮೂಲಭೂತ ಸೌಕರ್ಯಗಳಿಂದ ಬಳಲುತ್ತಿವೆ. ಹಲವಾರು ಶಿಕ್ಷಣ ಸಂಸ್ಥೆಗಳು ಕುಡಿಯುವ ನೀರು, ಗ್ರಂಥಾಲಯ, ಶೌಚಾಲಯ, ಆಟದ ಮೈದಾನ, ಸುಸಜ್ಜಿತ ವರ್ಗ ಕೊಠಡಿಗಳು ಮುಂತಾದವುಗಳ ಕೊರತೆಯನ್ನು ಅನುಭವಿಸುತ್ತಿವೆ. ಕೆಲವು ಖಾಸಗಿ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವರ್ಗಕೊಠಡಿಗಳ ಜೊತೆಗೆ ವಾಣಿಜ್ಯ ಸಂಕೀರ್ಣಗಳು ನಿರ್ಮಾಣವಾಗುತ್ತಿರುವುದು ಒಂದು ವಿಪರ್ಯಾಸದ ಸಂಗತಿಯೇ ಸರಿ ಎನ್ನಬಹುದು.

## 5. ರಾಜಕೀಯ ಹಸ್ತಕ್ಷೇಪ

ಭಾರತದಲ್ಲಿ ರಾಜಕೀಯ ನಾಯಕರು ಹಲವು ಶೈಕ್ಷಣಿಕ ಸಂಸ್ಥೆಗಳನ್ನು ಹೊಂದಿದ್ದು, ವಿಶ್ವವಿದ್ಯಾಲಯಗಳ ಆಡಳಿತ ಮಂಡಳಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ರಾಜಕೀಯ ನಾಯಕರು ತಮ್ಮ ಸ್ವಾರ್ಥಕ್ಕಾಗಿ ಮುಗ್ಧ ವಿದ್ಯಾರ್ಥಿಗಳನ್ನು ಬಳಸಿಕೊಳ್ಳುತ್ತಿದ್ದಾರೆ. ಕೆಲವು ರಾಜಕಾರಣಿಗಳು ಸ್ವಂತ ಲಾಭಕ್ಕಾಗಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುತ್ತಿದ್ದಾರೆ. ಅದಕ್ಕಾಗಿ ಗುಣಮಟ್ಟದ ಶಿಕ್ಷಣ ಸಂಸ್ಥೆಗಳ ಕೊರತೆ ಕಾಣಬರುತ್ತದೆ. ರಾಜಕೀಯ ನಾಯಕರುಗಳಿಗೆ ಯಾವುದೇ ಸಾಮಾಜಿಕ ಸೇವೆಯ ಮನೋಭಾವನೆ ಕಂಡು ಬರುತ್ತಿಲ್ಲವೆಂದು ಹೇಳಬಹುದು.

## 6. ಬೋಧಕ ವರ್ಗ

ಬೋಧನಾ ವರ್ಗದ ಕೊರತೆಗಳು ಮತ್ತು ಉತ್ತಮ ವಿದ್ಯಾರ್ಹತೆಯನ್ನು ಹೊಂದಿದ ಬೋಧಕರನ್ನು ಆಕರ್ಷಿಸುವ ಮತ್ತು ಉಳಿಸಿಕೊಳ್ಳಲು ರಾಜ್ಯ ಶೈಕ್ಷಣಿಕ ವ್ಯವಸ್ಥೆಯ ಅಸಾಮರ್ಥ್ಯವು ಅನೇಕ ವರ್ಷಗಳವರೆಗೆ ಗುಣಮಟ್ಟದ ಶಿಕ್ಷಣಕ್ಕೆ ಸವಾಲುಗಳನ್ನು ಉಂಟುಮಾಡಿದೆ. ಖಾಸಗಿ ಶಿಕ್ಷಣ ಸಂಸ್ಥೆಗಳು ಬೋಧಕ ವರ್ಗಕ್ಕೆ ಕಡಿಮೆ ಸಂಬಳ ನೀಡಿ ಶೋಷಿಸುತ್ತಿರುವುದರಿಂದ ಬೋಧಕರು ತಮ್ಮನ್ನು ಬೋಧನೆಯಲ್ಲಿ ಸಮರ್ಪಕವಾಗಿ ತೊಡಗಿಸಿಕೊಳ್ಳುತ್ತಿಲ್ಲವೆನ್ನಬಹುದು. ಇನ್ನೂ ಕೆಲವು ಶಿಕ್ಷಣ ಸಂಸ್ಥೆಗಳು ಅನರ್ಹ ಬೋಧಕರನ್ನು ನೇಮಕ ಮಾಡಿಕೊಳ್ಳುತ್ತಿವೆ.

## 7. ಉನ್ನತ ಶಿಕ್ಷಣದ ಅಸಮರ್ಪಕ ರಚನೆ

ಭಾರತೀಯ ಶಿಕ್ಷಣದ ನಿರ್ವಹಣೆಯು ಕೇಂದ್ರಿಕರಣ, ಅಧಿಕಾರಶಾಹಿ ರಚನೆಗಳು ಮತ್ತು ಹೊಣೆಗಾರಿಕೆಯ ಕೊರತೆ, ಪಾರದರ್ಶಕತೆ, ವೃತ್ತಿಪರತೆಯ ಸವಾಲುಗಳನ್ನು ಎದುರಿಸುತ್ತಿದೆ. ಸಂಯೋಜಿತ ಕಾಲೇಜುಗಳು ಮತ್ತು ವಿದ್ಯಾರ್ಥಿಗಳ ಸಂಖ್ಯೆಯ ಹೆಚ್ಚಳದ ಪರಿಣಾಮವಾಗಿ ವಿಶ್ವವಿದ್ಯಾಲಯಗಳ ಆಡಳಿತಾತ್ಮಕ ಹೊರೆ ಗಣನೀಯವಾಗಿ ಏರಿಕೆಯಾಗಿದೆ. ಉನ್ನತ ಶಿಕ್ಷಣದಲ್ಲಿನ

ISSN : 2249-2429 ಸಂಶೋಧನೆ RNI REG.NO.KARKAN/2011/38712

ನೌಕರಶಾಹಿ ವ್ಯವಸ್ಥೆಯ ಅಸಮರ್ಪಕ ಕಾರ್ಯನಿರ್ವಹಣೆಯು ಒಂದು ಪ್ರಮುಖ ಸವಾಲಾಗಿದೆ.

## 8. ಆರ್ಥಿಕ ದುರವಸ್ಥೆ

ಭಾರತದಲ್ಲಿ ಹೆಚ್ಚಿನ ಜನರು ಆರ್ಥಿಕವಾಗಿ ಹಿಂದುಳಿದವರಾಗಿದ್ದಾರೆ. ಬಡತನ ಕೌಟುಂಬಿಕ ಹಿನ್ನೆಲೆ ಹೊಂದಿದ ಜನರು ಉನ್ನತ ಶಿಕ್ಷಣ ಪಡೆಯಲು ಅಸಮರ್ಥರಾಗಿದ್ದಾರೆ. ಪ್ರಸ್ತುತ ಉನ್ನತ ಶಿಕ್ಷಣವು ದುಬಾರಿಯಾಗಿದ್ದರಿಂದ ಸಾಮಾನ್ಯ ಬಡ ವರ್ಗದ ಜನರಿಗೆ ಉನ್ನತ ಶಿಕ್ಷಣ ಪಡೆಯಲು ಸಾಧ್ಯವಾಗುತ್ತಿಲ್ಲ. ವೈದ್ಯಕೀಯ, ಇಂಜನಿಯರಿಂಗ್, ವೃತ್ತಿಪರ ಕೋರ್ಸಗಳು ಬಹಳಷ್ಟು ವೆಚ್ಚದಾಯಕವಾಗಿವೆ.ಆದ್ದರಿಂದ ಉನ್ನತ ಶಿಕ್ಷಣ ಪಡೆಯಲು ಬಡವರಿಗೆ ಸಾಧ್ಯವಾಗುತ್ತಿಲ್ಲ.

## ಉನ್ನತ ಶಿಕ್ಷಣ ವ್ಯವಸ್ಥೆಗೆ ಸುಧಾರಣೆಯ ಪರಿಹಾರೋಪಾಯಗಳು

1. ಉನ್ನತ ಶಿಕ್ಷಣ ವ್ಯವಸ್ಥೆಯನ್ನು ಜಾಗತಿಕವಾಗಿ ಹೆಚ್ಚು ಸೂಕ್ತ ಮತ್ತು ಸ್ಪರ್ಧಾತ್ಮಕವಾಗಿಸಲು ಅದಕ್ಕೆ ನವೀನ ಮತ್ತು ಪರಿವರ್ತನೆಯ ವಿಧಾನವನ್ನು ಅಳವಡಿಸುವ ಅಗತ್ಯವಿರುತ್ತದೆ.
2. ಉನ್ನತ ಶಿಕ್ಷಣ ಸಂಸ್ಥೆಗಳ ಗುಣಮಟ್ಟವನ್ನು ಸುಧಾರಿಸುವುದು.
3. ವಿದ್ಯಾರ್ಥಿಗಳಿಗೆ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು.
4. ಭಾರತವು ಉನ್ನತ ಶಿಕ್ಷಣ ಸಂಸ್ಥೆಗಳು ಮತ್ತು ಅಂತರ್‌ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳ ನಡುವೆ ಸಹಯೋಗವನ್ನು ಉತ್ತೇಜಿಸಬೇಕು.
5. ವಿದ್ಯಾರ್ಥಿಗಳಿಗೆ ವಿಷಯದ ಆಳವಾದ ಜ್ಞಾನವನ್ನು ಪಡೆದುಕೊಳ್ಳಲು ಪ್ರೋತ್ಸಾಹಿಸಬೇಕು.
6. ಸರ್ಕಾರಿ, ಖಾಸಗಿ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳು ರಾಜಕೀಯ ಸಂಬಂಧ ಮತ್ತು ಹಸ್ತಕ್ಷೇಪದಿಂದ ದೂರವಿರಬೇಕು.
7. ಭಾರತದಲ್ಲಿ ಹೆಚ್ಚಿನ ಶಿಕ್ಷಣ ಸಂಸ್ಥೆಗಳು ಹಣ ಮಾಡುವ ಪ್ರಕ್ರಿಯೆಯಲ್ಲಿ ತೊಡಗಿದ್ದು, ಅದು ಶೈಕ್ಷಣಿಕ ವ್ಯವಸ್ಥೆಯಿಂದ ಹೊರಗಿರಬೇಕು.
8. ಉನ್ನತ ಶಿಕ್ಷಣದಲ್ಲಿ ಸಾಮಾಜಿಕ ಮೌಲ್ಯಗಳು, ವ್ಯಕ್ತಿತ್ವ ವಿಕಸನ, ಉದ್ಯೋಗಾಧಾರಿತ ಶಿಕ್ಷಣ ವಿಧಾನಗಳನ್ನು ಕಲಿಯಬೇಕು ಹಾಗೂ ವಿದ್ಯಾರ್ಥಿಗಳ ಜ್ಞಾನವು ಕೆಲವೇ ವಿಷಯಗಳಿಗೆ ಮಾತ್ರ ಸೀಮಿತವಾಗಿರಬಾರದು.
9. ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗದ ಜನರಿಗೆ ಉನ್ನತ ಶಿಕ್ಷಣ ಪಡೆಯಲು ಸಾಕಷ್ಟು ಹಣಕಾಸಿನ ನೆರವನ್ನು ನೀಡಬೇಕು.
10. ಅಂಗವಿಕಲರಿಗೆ, ಮಹಿಳೆಯರಿಗೆ ಉನ್ನತ ಶಿಕ್ಷಣ ಪಡೆಯಲು ಹೆಚ್ಚಿನ ಸೌಲಭ್ಯಗಳನ್ನು ಮತ್ತು ಪ್ರೋತ್ಸಾಹವನ್ನು ದೊರಕಿಸಬೇಕು.
11. ಸಾಮಾನ್ಯವಾಗಿ ಉನ್ನತ ದರ್ಜೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ, ಬಹುಮಾನ, ಪಾರಿತೋಷಕ, ಉನ್ನತ ಹುದ್ದೆಗಳನ್ನು ನೀಡಬೇಕು.
12. ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗಾಗಿ ಶ್ರಮಿಸಿದ ಶಿಕ್ಷಕ–ಪ್ರಾಧ್ಯಾಪಕರಿಗೆ ಪ್ರೋತ್ಸಾಹಿಸಿ ಗೌರವಿಸುವ ಕಾರ್ಯಕ್ರಮಗಳನ್ನು ಜಾರಿಗೆ ತರಬೇಕು.

## ಉಪಸಂಹಾರ

'ಶಿಕ್ಷಣವು ಎಲ್ಲಾ ಸಮಸ್ಯೆಗಳ ಪರಿಹಾರಕ್ಕೆ ಮದ್ದು' ಎಂಬುದನ್ನು ಅರಿತಿರುವ ಸರ್ಕಾರಗಳು ಶಿಕ್ಷಣ ವ್ಯವಸ್ಥೆಯ ಸುಧಾರಣೆಗೆ ಹೆಚ್ಚಿನ ಕಾಳಜಿಯನ್ನು ಹೊಂದುತ್ತಿವೆ. ಭಾರತ ಸ್ವಾತಂತ್ರ್ಯದ ನಂತರ ಎಂಟು ದಶಕಗಳಲ್ಲಿ ಉನ್ನತ ಶಿಕ್ಷಣವು ಬಹಳ ವೇಗವಾಗಿ ವಿಸ್ತರಿಸಿದೆ. ಆದರೆ ಶಿಕ್ಷಣವು ಎಲ್ಲರಿಗೂ ಸಮಾನವಾಗಿ ದೊರೆಯುತ್ತಿಲ್ಲ. ಅದು ಹಲವಾರು ಸವಾಲುಗಳನ್ನು ಎದುರುಸುತ್ತಿದೆ. ಅಸಮರ್ಪಕ ಆಡಳಿತ, ಅನುತ್ಪಾದಕ ಶಿಕ್ಷಣ ಕ್ರಮ, ಭ್ರಷ್ಟಾಚಾರ ಮತ್ತು ಶೈಕ್ಷಣಿಕ ನಿಧಿಯ ಅಲಭ್ಯತೆಯು ಶೈಕ್ಷಣಿಕ ವ್ಯವಸ್ಥೆಯು ಬಹಳಷ್ಟು ಸಮಸ್ಯೆಗಳನ್ನು ಎದುರಿಸಲು ಕಾರಣವಾಗುತ್ತಿವೆ. ಭಾರತದ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಉದಾರೀಕರಣ, ಖಾಸಗೀಕರಣ, ಜಾಗತೀಕರಣ ಪ್ರಕ್ರಿಯೆಗಳ ಸಹಭಾಗಿತ್ವದಿಂದಾಗಿ ಹಿಂದಿನ ಶಿಕ್ಷಣ ವ್ಯವಸ್ಥೆಗಿಂತ ಪ್ರಸ್ತುತ ಶಿಕ್ಷಣ ವ್ಯವಸ್ಥೆಯು ಬಹಳಷ್ಟು ಸುಧಾರಣೆ ಯಾಗಿರುವುದನ್ನು ಕಾಣಬಹುದು.

## ಆಕರ ಗ್ರಂಥಗಳು


- **Agarwal Pawan** 2006 **:** Higher Education in India: The Need for Change, Working Paper no. 180, New Delhi, ICREAR.Workin . 180
- **Agarwal Pawan** 2007 **:** Private higher education in India: Status and Prospects, London, Observatory of Borderless Higher Education (OBHE).
- **Agarwal Pawan** 2009 **:** Indian Higher Education Envisioning the Future, New Delhi, Sage.
- **MHRD :** Ministry of Human Resource Development 2011 Educational Statistics at a glance, New Delhi, MHRD.
- **Varghese N. V.** 2013 **:** 'Globalization and higher education' Analytical Reports on International Education, vol.5, no.1, pp. 7-20.
- Shaguri, Obadya Ray, Higher Education in India Access, Equity, Quality, EAN World Congress Scholar, Global Access to Postsecondary education, 2013.
- **Kumar, Anuj & Ambrish, Higher Education:** Growth, Challenges And Opportunities, International Journal of Arts, Humanities and Management Studies, Volume 01, No.2, Feb 2015.
- **Balachander K. K. :** "Higher education in India: Quest for Equality and Equity", Mainstream, 1986.
- **British Council, Understanding India :** The Future of Higher Education and Opportunities for International Cooperation, 2014.


■■

ISSN : 2249-2429 ಸಂಶೋಧನೆ RNI REG.NO.KARKAN/2011/38712

# ಗ್ರಾಮೀಣ ಪ್ರೌಢಶಾಲಾ ಮುಖ್ಯೋಪಾಧ್ಯಾಯರುಗಳ ತೀರ್ಮಾನ ಶೈಲಿಗಳ ಮೇಲೆ ಪ್ರಭಾವ ಬೀರುವ ಅಂಶಗಳ ಒಂದು ಅಧ್ಯಯನ

✍ **ಡಾ. ಆರ್. ರುದ್ರಾರಾಧ್ಯರು,** ಪ್ರಾಚಾರ್ಯರು, ಶ್ರೀ ಸಿದ್ಧಗಂಗಾ ಶಿಕ್ಷಣ ಮಹಾವಿದ್ಯಾಲಯ, ತುಮಕೂರು.

## ಪೀಠಿಕೆ

ಶೈಕ್ಷಣಿಕ ಇತಿಹಾಸ ಆಡಳಿತದಲ್ಲಿ ಶಾಲಾ ಆಡಳಿತವು ತನ್ನದೇ ಆದ ಪೂರ್ವ ಇತಿಹಾಸವನ್ನು ಹೊಂದಿದೆ. ಅನಾದಿ ಕಾಲದಿಂದ ಶಿಕ್ಷಣ ಕಾರ್ಯವು ಒಂದಿಲ್ಲೊಂದು ಶಿಕ್ಷಣ ಸಂಸ್ಥೆಯ ಮುಖಾಂತರ ನಡೆದುಕೊಂಡು ಬಂದಿದೆ. ಪುರಾತನ ಕಾಲದಲ್ಲಿ ಕುಟುಂಬವು ಶಿಕ್ಷಣವನ್ನು ನೀಡುತ್ತಿತ್ತು. ಸಮಾಜದ ಅವಶ್ಯಕತೆಗಳು ಮತ್ತು ಬೇಡಿಕೆಗಳು ಹೆಚ್ಚಾದಂತೆ, ಸಮಾಜದ ಅಭಿವೃದ್ಧಿ ಮತ್ತು ಬದಲಾವಣೆಗೆ ತಕ್ಕಂತೆ ಶಿಕ್ಷಣ ಸಂಸ್ಥೆಗಳು ಸಂಪ್ರದಾಯಿತ ಶಿಕ್ಷಣ ನೀಡುವ ಸಂಸ್ಥೆಗಳಾಗಿವೆ.

ಯಾವುದೇ ಸಂಸ್ಥೆಯು ಸೂಕ್ತ ರೀತಿಯಲ್ಲಿ ನಿರ್ವಹಣೆ ಮಾಡಬೇಕಾದ ಅತಿಮುಖ್ಯವಾದ ಅಂಶಗಳೆಂದರೆ ವ್ಯವಸ್ಥಿತ ರೀತಿಯಲ್ಲಿ ಆಡಳಿತ, ಹಣಕಾಸಿನ ಲಭ್ಯತೆ, ಸೂಕ್ತ ನಿರ್ವಹಣೆ, ಕಾರ್ಯದಕ್ಷತೆ ಮತ್ತು ಜವಾಬ್ದಾರಿಯುತ ನಡವಳಿಕೆಗಳು ಅವಶ್ಯಕ ಎಂದು ಶಿಕ್ಷಣ ತಜ್ಞರು ಗುರುತಿಸಿದ್ದಾರೆ. ಅವುಗಳೆಂದರೆ –

1. ಆಯೋಜನೆ
2. ಸಂಘಟನೆ
3. ತೀರ್ಮಾನ ಕೈಗೊಳ್ಳುವಿಕೆ
4. ಪ್ರೇರೇಪಣೆ
5. ಸಮನಾಧಿಕರಣ
6. ವರದಿ
7. ಮೌಲ್ಯಮಾಪನಗಳಾಗಿವೆ.

ಪ್ರಸ್ತುತ ಅಧ್ಯಯನದಲ್ಲಿ ತೀರ್ಮಾನ ನಿರ್ಧಾರ ಅಥವಾ ನಿರ್ಣಯ ಕೈಗೊಳ್ಳುವಿಕೆ ಎಂಬ ಪ್ರಕ್ರಿಯೆಯನ್ನು ಕುರಿತು ಅಧ್ಯಯನ ಮಾಡಲಾಗಿದೆ.

ಪ್ರಭಾವಿತ ಮತ್ತು ಸೂಕ್ತ ತೀರ್ಮಾನವನ್ನು ಕೈಗೊಳ್ಳಬೇಕಾದರೆ ಆಡಳಿತಗಾರನ ಅಥವಾ ಶಾಲಾ ಮುಖ್ಯೋಪಾಧ್ಯಾಯನ ವ್ಯಕ್ತಿತ್ವ, ಪಾತ್ರ ಮತ್ತು ಅವನು ಬೆಳೆಸಿಕೊಂಡಿರುವ ತೀರ್ಮಾನ ನಿರ್ಧಾರಣಾ ಶೈಲಿ, ತೀರ್ಮಾನ ಕೈಗೊಳ್ಳುವಾಗ ಪ್ರಭಾವ ಬೀರುವ ಅಂಶಗಳು ಮುಖ್ಯವಾಗಿವೆ.

ಮುಖ್ಯೋಪಾಧ್ಯಾಯರು ಶಾಲೆಯಲ್ಲಿ –

1. ಬೋಧನೆ
2. ಯೋಜನೆ ತಯಾರಿಕೆ
3. ಸಂಘಟನೆ
4. ಆಡಳಿತ
5. ಮೇಲ್ವಿಚಾರಣೆ
6. ಮಾರ್ಗದರ್ಶನ
7. ಉತ್ತಮ ಸಂಬಂಧ ಬೆಳೆಸುವುದು
8. ಸಮತೋಲನ ನಿರ್ಣಯ ಕೈಗೊಳ್ಳುವುದು
9. ವ್ಯವಹಾರಿಕ ದಕ್ಷತೆಗಳಾಗಿವೆ.

ಪ್ರಸ್ತುತ ಶಾಲಾ ಜೀವನದಲ್ಲಿ ತೀರ್ಮಾನ ತೆಗೆದುಕೊಳ್ಳುವುದು ಬಹಳ ಮಹತ್ವ ಪಡೆದಿದೆ. ಈ ದೃಷ್ಟಿಯಿಂದ ಶಾಲೆಯ ಮುಖ್ಯೋಪಾಧ್ಯಾಯರ ತೀರ್ಮಾನ ಶೈಲಿ ಮತ್ತು ಅದರ ಮೇಲೆ ಪ್ರಭಾವ ಬೀರುವ ಅಂಶಗಳ ಅಧ್ಯಯನ ಮಾಡಲಾಗಿದೆ.

## ಸಂಶೋಧನೆಯ ಉದ್ದೇಶಗಳು

1. ಗ್ರಾಮಾಂತರ ಪ್ರೌಢಶಾಲಾ ಮುಖ್ಯೋಪಾಧ್ಯಾಯರ ತೀರ್ಮಾನ ಶೈಲಿಯನ್ನು ಅಧ್ಯಯನ ಮಾಡುವುದು.
2. ಮುಖ್ಯೋಪಾಧ್ಯಾಯರ ತೀರ್ಮಾನ ಶೈಲಿಯ ಮೇಲೆ ವೈಯಕ್ತಿಕ, ಸಾಂಸ್ಥಿಕ, ರಾಜಕೀಯ ಮತ್ತು ಶೈಕ್ಷಣಿಕ ಅಂಶಗಳ ಪ್ರಭಾವವನ್ನು ವಿಶ್ಲೇಷಿಸುವುದು.
3. ಮುಖ್ಯೋಪಾಧ್ಯಾಯರ ತೀರ್ಮಾನ ಶೈಲಿಯಲ್ಲಿ ಅವರ ವಯಸ್ಸಿಗನುಗುಣವಾಗಿ ಉಂಟಾಗಬಹುದಾದ ವ್ಯತ್ಯಾಸವನ್ನು ಗುರ್ತಿಸುವುದು.
4. ತೀರ್ಮಾನ ಶೈಲಿಯಲ್ಲಿ ಅವರ ಬೋಧನಾನುಭವದ ಪ್ರಭಾವ ಉಂಟುಮಾಡಬಹುದಾದ ವ್ಯತ್ಯಾಸವನ್ನು ಗುರ್ತಿಸುವುದು.
5. ಸರ್ಕಾರಿ ಮತ್ತು ಖಾಸಗಿ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಮುಖ್ಯೋಪಾಧ್ಯಾಯರ ತೀರ್ಮಾನ ಶೈಲಿಯಲ್ಲಿನ ವ್ಯತ್ಯಾಸವನ್ನು ಕಂಡುಹಿಡಿಯುವುದು.
6. ತೀರ್ಮಾನ ಶೈಲಿಯಲ್ಲಿ ಮುಖ್ಯೋಪಾಧ್ಯಾಯರ ಶೈಕ್ಷಣಿಕ ಮಟ್ಟದಿಂದಾಗಿ ಉಂಟಾಗಬಹುದಾದ ವ್ಯತ್ಯಾಸವನ್ನು ವಿಶ್ಲೇಷಿಸುವುದು.

## ಸಂಬಂಧಿತ ಅಧ್ಯಯನಗಳ ಸಾಹಿತ್ಯಾವಲೋಕನ

ತೀರ್ಮಾನ ಕೈಗೊಳ್ಳುವಿಕೆಯ ಪರಿಕಲ್ಪನೆ ಅತ್ಯಂತ ಆಧುನಿಕ ಹಾಗೂ ಇತ್ತೀಚಿನದಾದುದರಿಂದ ಈ ಕ್ಷೇತ್ರದಲ್ಲಿ ನಡೆದಿರುವ ಸಂಶೋಧನೆಗಳು ಬಹಳ ಕಡಿಮೆ ಬಹಳಷ್ಟು ಸಂಶೋಧನೆಗಳು ಹೊರನಾಡಿನಲ್ಲಿ ಅದರಲ್ಲೂ ಅಮೆರಿಕಾ ದೇಶದಲ್ಲಿ ನಡೆದಿರುವುದು ಸ್ಪಷ್ಟ. ಭಾರತ ಹಾಗೂ ಕರ್ನಾಟಕದಲ್ಲಿ ಕಡಿಮೆ ಮುಖ್ಯವಾಗಿ ಅನೇಕ ಸಂಶೋಧನೆಗಳು ಶಾಲೆಯ ಮುಖ್ಯಸ್ಥರು ತಮ್ಮ ಕಾರ್ಯ ಕ್ಷೇತ್ರದಲ್ಲಿ ಕೈಗೊಳ್ಳುವ ತೀರ್ಮಾನಗಳ ಬಗ್ಗೆ ಅಧ್ಯಯನಗಳಿಗೆ ಸೀಮಿತವಾಗಿವೆ.

## ಅವುಗಳಲ್ಲಿ ಕೆಲವು ಕೆಳಗಿನಂತೆ ಇವೆ.

**ಗ್ರಾಸೆ,** 1958ರಲ್ಲಿ ಶಾಲಾ ಅಧೀಕ್ಷಕರು ಮತ್ತು ಶಾಲಾ ಸಮಿತಿಯ ಸದಸ್ಯರುಗಳ ತೀರ್ಮಾನ ನಿರ್ಧಾರವನ್ನು ತೆಗೆದುಕೊಳ್ಳುವುದರ ಬಗ್ಗೆ ಅಧ್ಯಯನ ನಡೆಸಿದ್ದಾರೆ.

**ವೈಟ್** 1981ರವರು ಪ್ರೌಢಶಾಲಾ ಉಪಾಧ್ಯಾಯರು ಶಾಲಾ ನಿರ್ಧಾರದಲ್ಲಿ ಭಾಗವಹಿಸುವಿಕೆ ಮತ್ತು ಅದಕ್ಕೆ ಸಂಬಂಧಿಸಿದಂತೆ ಪ್ರಾಚಾರ್ಯರ ನಾಯಕತ್ವ ಗುಣ ಮತ್ತು ಸಾಮರ್ಥ್ಯದ ಬಗ್ಗೆ ಅಧ್ಯಯನ ನಡೆಸಿದ್ದಾರೆ.

**ವೆನ್ಸಿಲೆವೇನಿಯ** ವಿಶ್ವವಿದ್ಯಾಲಯದ, ಜಿಮ್ಮದರ್ (1980) ರವರು ಚಿಕ್ಕಪಟ್ಟಣ ಜಿಲ್ಲಾ ಶಾಲೆಗಳ ಆಡಳಿತ ವರ್ಗವು ಅನುಸರಿಸುವ ತೀರ್ಮಾನ ಶೈಲಿಯ ಬಗ್ಗೆ ಅಧ್ಯಯನ ನಡೆಸಲಾಗಿದೆ.

**ಗ್ರಹ್ಯಾಂ** 1981ರವರು ಶಾಲೆಯ ಧೋರಣೆಗಳನ್ನು ಆಡಳಿತಗಾರರು ಮತ್ತು ಶಿಕ್ಷಕರು ಹೇಗೆ ಕಾರ್ಯರೂಪಕ್ಕೆ ತರುವರು ಎಂಬುದನ್ನು ಕುರಿತು ಅಧ್ಯಯನ ನಡೆಸಿದ್ದಾರೆ.

ISSN : 2249-2429 ಸಂಶೋಧನೆ RNI REG.NO.KARKAN/2011/38712

**ಡೊನೊವನೆ** 1983, ರವರು ಶಾಲಾ ತೀರ್ಮಾನ ಕೈಗೊಳುವುದರಲ್ಲಿ ಪೋಷಕರ ಸಹಭಾಗಿತ್ವದ ಬಗ್ಗೆ ಬೋಸ್ಟನ್ ಸಾರ್ವಜನಿಕ ಶಾಲಾ ಪ್ರಾಚಾರ್ಯರ ಮನೋವೃತ್ತಿಯನ್ನು ಕುರಿತು ಅಧ್ಯಯನ ನಡೆಸಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ರಾಮಶೇಷರವರು 1972ರಲ್ಲಿ ಜಂಟಿ ನಿರ್ದೇಶಕ ಕಛೇರಿಯಲ್ಲಿ ನಿರ್ಧಾರವನ್ನು ಯಾವ ರೀತಿ ಕೈಗೊಳ್ಳುತ್ತಾರೆ ಎಂಬ ಅಂಶದ ಬಗ್ಗೆ ಅಧ್ಯಯನ ಮಾಡಿದ್ದಾರೆ. ವರ್ಜಿನೀಯ ವಿಶ್ವವಿದ್ಯಾಲಯದ ಲಾಸಿಷರ್ 1979ರಲ್ಲಿ ಪ್ರಾಥಮಿಕ ಶಾಲೆಯ ತರಗತಿಗಳಲ್ಲಿ ತೀರ್ಮಾನ ನಿರ್ಧಾರಣಾ ಚಟುವಟಿಕೆಗಳ ಸ್ವರೂಪವನ್ನು ಅಧ್ಯಯನ ಮಾಡಿದ್ದಾರೆ ಯೊಲೆರೆಹೊ ವಿಶ್ವವಿದ್ಯಾನಿಲಯದ ಖಾಯಂರವರು 1980 ಜಿಲ್ಲಾವಾರು ಸಂಘಟನಾ ತೀರ್ಮಾನ ಕೈಗೊಳ್ಳುವುದರಲ್ಲಿ ಸಾರ್ವಜನಿಕ ಶಾಲಾ ಮುಖ್ಯಸ್ಥರ ಸಹಭಾಗಿತನ ಮತ್ತು ಅದರ ಪ್ರಭಾವವನ್ನು ಅಧ್ಯಯನ ಮಾಡಿದ್ದಾರೆ.

## ಸಂಶೋಧನಾ ವಿಧಾನ

ಪ್ರಸ್ತುತ ಅಧ್ಯಯನವು ಪ್ರೌಢಶಾಲಾ ಮುಖ್ಯೋಪಾಧ್ಯಾಯರ ತೀರ್ಮಾನ ಕೈಗೊಳ್ಳುವ ಶೈಲಿ ಮತ್ತು ಅದರ ಮೇಲೆ ಪ್ರಭಾವ ಬೀರುವ ಅಂಶಗಳನ್ನು ಕುರಿತದ್ದಾಗಿದೆ. ಈ ಸಂಶೋಧನೆಯು ಮುಖ್ಯವಾಗಿ ಎರಡು ಕಲ್ಪನೆಗಳನ್ನು ಒಳಗೊಂಡಿದೆ.

1. ತೀರ್ಮಾನ ಕೈಗೊಳ್ಳುವ ಶೈಲಿ
2. ಅದರ ಮೇಲೆ ಪ್ರಭಾವ ಬೀರುವ ಅಂಶಗಳು

ತೀರ್ಮಾನ ಕೈಗೊಳ್ಳುವಿಕೆ ಎಂದರೆ ಗ್ರಾಮೀಣ ಪ್ರೌಢಶಾಲಾ ಮುಖ್ಯೋಪಾಧ್ಯಾಯರು ತಮ್ಮ ದೈನಂದಿನ ಆಡಳಿತದಲ್ಲಿ ಎದುರಿಸುವ ಸಮಸ್ಯೆಗಳನ್ನು ಬಿಡಿಸುವ ಸಲುವಾಗಿ ಕೈಗೊಳ್ಳುವ ಹಾಗೂ ಆಚರಣೆಗೆ ತರುವ ಮಾನಸಿಕ ನಿರ್ಧಾರ, ಯೋಜನಾ ಶಕ್ತಿ ಮತ್ತು ವ್ಯಕ್ತಿತ್ವವನ್ನು ಅವಲಂಭಿಸಿದೆ. ತೀರ್ಮಾನ ಶೈಲಿಯಲ್ಲಿ ನಾಲ್ಕು ರೀತಿಯಲ್ಲಿ ವಿಂಗಡಿಸ ಬಹುದಾಗಿದೆ.

**1. ನಿರಂಕುಶ ತೀರ್ಮಾನ ಶೈಲಿ :** ನಿರಂಕುಶಮತಿಗಳಾಗಿದ್ದು ಯಾರ ಸಲಹೆಯನ್ನು ಪಡೆಯದೆ ತೀರ್ಮಾನಗಳನ್ನು ಕೈಗೊಳ್ಳುವವರಾಗಿರುತ್ತಾರೆ. ಅಧಿಕಾರ, ಬಲ ಹಾಗೂ ದರ್ಪವನ್ನು ಬಳಸುವವರಾಗಿರುತ್ತಾರೆ.

**2. ನೌಕರಶಾಹಿ ತೀರ್ಮಾನ ಶೈಲಿ :** ಇವರು ಪ್ರಜ್ಞೆಯುಳ್ಳವರಾಗಿದ್ದು ತಮ್ಮ ಎಲ್ಲಾ ತೀರ್ಮಾನಗಳನ್ನು ಕಾನೂನಿನ ಚೌಕಟ್ಟಿನಲ್ಲಿ ತೀರ್ಮಾನ ಕೈಗೊಳ್ಳುವವರಾಗಿರುತ್ತಾರೆ.

**3. ಪ್ರಜಾಪ್ರಭುತ್ವ ತೀರ್ಮಾನ ಶೈಲಿ :** ಇವರು ಸಮಸ್ಯೆಗೆ ಪರಿಹಾರ ನೀಡುವಾಗ ತೆರೆದ ಮನಸ್ಸುಳ್ಳವರಾಗಿದ್ದು ತಾವು ತೆಗೆದುಕೊಳ್ಳುವ ಎಲ್ಲಾ ತೀರ್ಮಾನಗಳನ್ನು ತನ್ನ ಸಹೋದ್ಯೋಗಿಗಳೊಂದಿಗೆ ಕೂಲಂಕುಶವಾಗಿ ಚರ್ಚಿಸಿ, ಆಳವಾಗಿ ಪರಿಶೀಲಿಸಿ ತೀರ್ಮಾನ ತೆಗೆದುಕೊಳ್ಳುತ್ತಾರೆ.

**4. ಮಾನವೀಯ ತೀರ್ಮಾನ ಶೈಲಿ :** ಇವರು ಸಂಸ್ಥೆಯ ಧ್ಯೇಯ ಮತ್ತು ಗುರಿ ಮತ್ತು ವ್ಯಕ್ತಿತ್ವವನ್ನು ಬೆಳೆಸುವುದರಲ್ಲಿ ಬಳಸುತ್ತಾರೆ. ಇತರರಿಗೆ ನೋವಾಗದಂತೆ ತೀರ್ಮಾನ ತೆಗೆದುಕೊಳ್ಳುವವರಾಗಿರುತ್ತಾರೆ.

ತೀರ್ಮಾನ ಶೈಲಿಗಳ ಮೇಲೆ ಪ್ರಭಾವ ಬೀರುವ ಅನೇಕ ಅಂಶಗಳಲ್ಲಿ ಸಂಶೋಧನೆಗೆ ನಾಲ್ಕು ಅಂಶಗಳನ್ನು ಪರಿಗಣಿಸಲಾಗಿದೆ.

1. ಶೈಕ್ಷಣಿಕ ಅಂಶಗಳು
2. ವೈಯಕ್ತಿಕ ಅಂಶಗಳು
3. ಸಂಸ್ಥೆಯ ಅಂಶಗಳು
4. ರಾಜಕೀಯ ಅಂಶಗಳು

1. **ಶೈಕ್ಷಣಿಕ ಅಂಶಗಳು :** ಶಿಕ್ಷಣಕ್ಕೆ ಸಂಬಂಧಪಟ್ಟಂತೆ, ವಿದ್ಯಾರ್ಥಿಗಳ ಪ್ರಗತಿ, ಸಹೋದ್ಯೋಗಿಗಳ ಒಳಿತು, ಶೈಕ್ಷಣಿಕ ಪ್ರಗತಿಯ ಚೌಕಟ್ಟಿನಲ್ಲಿ ಪ್ರಭಾವ ಬೀರುತ್ತದೆ.
2. **ವೈಯಕ್ತಿಕ ಅಂಶಗಳು :** ಇದು ಮುಖ್ಯೋಪಾಧ್ಯಾಯರ ಭಾವನೆ, ಪ್ರತಿಷ್ಠೆ ಹಾಗೂ ತಮ್ಮ ಅನುಕೂಲಗಳನ್ನು ಗಮನದಲ್ಲಿಟ್ಟುಕೊಂಡು ತೀರ್ಮಾನ ತೆಗೆದುಕೊಳ್ಳುವುದು.
3. **ಸಂಸ್ಥೆಯ ಅಂಶಗಳು :** ಇಲ್ಲಿ ಮುಖ್ಯೋಪಾಧ್ಯಾಯರು ತೀರ್ಮಾನವನ್ನು ಕೈಗೊಳ್ಳುವಾಗ ಎಲ್ಲಕ್ಕಿಂತ ಹೆಚ್ಚಾಗಿ ಸಂಸ್ಥೆಯ ಪ್ರಗತಿ, ಏಳಿಗೆ, ಸಂಸ್ಥೆಯ ಸದಸ್ಯರ ಅನಿಸಿಕೆ, ಆಶೋತ್ತರಗಳು ಸಂಸ್ಥೆಯ ದೃಷ್ಠಿಯಲ್ಲಿ ಕೈಗೊಳ್ಳುವುದಾಗಿದೆ.
4. **ರಾಜಕೀಯ ಅಂಶಗಳು :** ಶಾಲೆಯ ಮುಖ್ಯಸ್ಥರು ತೀರ್ಮಾನಗಳನ್ನು ಕೈಗೊಳ್ಳುವಾಗ ಮುಖ್ಯವಾಗಿ ಸಮಾಜದ ಗಣ್ಯವ್ಯಕ್ತಿಗಳು, ರಾಜಕೀಯ ವ್ಯಕ್ತಿಗಳು, ಪ್ರಭಾವಿತ ಅಧಿಕಾರಿಗಳು ಮತ್ತು ಇತರ ಶಕ್ತಿಯುತ ವ್ಯಕ್ತಿಗಳ ಅನಿಸಿಕೆಯನ್ನು ಮನಸ್ಸಿನಲ್ಲಿ ಇರಿಸಬೇಕು. ಅಂತಹವನ್ನು ಮೆಚ್ಚಿಸಲುಜನ ಅವರ ಮರ್ಜಿಗನುಸಾರವಾಗಿ ತೀರ್ಮಾನ ಕೈಗೊಳ್ಳುತ್ತಾರೆ. ಇವುಗಳ ಬಗ್ಗೆ ಸಂಶೋಧನೆಯಲ್ಲಿ ವಿಶ್ಲೇಷಿಸಲಾಗಿದೆ.

## ಪ್ರಸ್ತುತ ಅಧ್ಯಯನದ ಚಲಕಾಂಶಗಳು

ಪ್ರಸ್ತುತ ಸಂಶೋಧನೆಯಲ್ಲಿ ಮುಖ್ಯೋಪಾಧ್ಯಾಯರು ತೀರ್ಮಾನ ಕೈಗೊಳ್ಳುವ ನಾಲ್ಕು ವಿಧವಾದ ಶೈಲಿಯನ್ನು ಪರತಂತ್ರಚಲಕಗಳನ್ನಾಗಿ ಅಭ್ಯಾಸ ಮಾಡಲಾಗಿದೆ.

1. ನಿರಂಕುಶ ತೀರ್ಮಾನ ಶೈಲಿ
2. ನೌಕರಶಾಹಿ ತೀರ್ಮಾನ ಶೈಲಿ
3. ಪ್ರಜಾಪ್ರಭುತ್ವ ತೀರ್ಮಾನ ಶೈಲಿ
4. ಮಾನವೀಯ ತೀರ್ಮಾನ ಶೈಲಿ

ಗ್ರಾಮೀಣ ಮುಖ್ಯೋಪಾಧ್ಯಾಯರು ತೀರ್ಮಾನ ಕೈಗೊಳ್ಳುವ ಶೈಲಿಯ ಮೇಲೆ ಪ್ರಭಾವ ಬೀರುವ ನಾಲ್ಕು ಮುಖ್ಯ ಅಂಶಗಳನ್ನು ಸ್ವತಂತ್ರ ಚಲನಗಳನ್ನಾಗಿ ಪರಿಗಣಿಸಲಾಗಿದೆ. ಅವುಗಳೆಂದರೆ–

1. ಶೈಕ್ಷಣಿಕ ಅಂಶಗಳು
2. ವೈಯಕ್ತಿಕ ಅಂಶಗಳು
3. ಸಂಸ್ಥೆಯ ಅಂಶಗಳು
4. ರಾಜಕೀಯ ಅಂಶಗಳು

ಇವುಗಳ ಜೊತೆಯಲ್ಲಿ – ಮುಖ್ಯೋಪಾಧ್ಯಾಯರ–ವಯಸ್ಸು ಇದರಲ್ಲಿ ಮೂರು ಗುಂಪುಗಳಾಗಿ ವಿಂಗಡಿಸಲಾಗಿದೆ. ಅಂದರೆ 40 ವರ್ಷ ವಯಸ್ಸಿಗಿಂತ ಕಡಿಮೆ ಇರುವ 62 ಜನ ಮುಖ್ಯೋಪಾಧ್ಯಾಯರು 41 ರಿಂದ 50 ವರ್ಷದವರೆಗಿನ 120 ಜನ ಮುಖ್ಯೋಪಾಧ್ಯಾಯರು, 51 ವರ್ಷದಿಂದ 60 ವರ್ಷದವರೆಗಿನ 29 ಜನ ಉಪಾಧ್ಯಾಯರನ್ನು ಪರಿಗಣಿಸಲಾಗಿದೆ.

ಸೇವಾವಧಿಯನ್ನು ಆಧಾರವಾಗಿ ಪರಿಗಣಿಸಿ ಮೂರು ಗುಂಪುಗಳಾಗಿ ವಿಂಗಡಿಸಲಾಗಿದೆ. ಒಂದನೇ ಗುಂಪಿನಲ್ಲಿ 5 ವರ್ಷಗಳಿಗೂ ಕಡಿಮೆ ಸೇವಾವಧಿಯ 78 ಜನರು ಇರುತ್ತಾರೆ. ಎರಡನೇಯ ಗುಂಪಿನಲ್ಲಿ 6 ರಿಂದ 12 ವರ್ಷ ಸೇವಾವಧಿಯುಳ್ಳ ಮುಖ್ಯೋಪಾಧ್ಯಾಯರು 108 ಜನ, ಮೂರನೇ ಗುಂಪಿನಲ್ಲಿ ಗರಿಷ್ಠ ಸೇವಾವಧಿಯಾದ 13 ವರ್ಷಗಳಿಗೂ ಹೆಚ್ಚು 54 ಜನ ಮುಖ್ಯೋಪಾಧ್ಯಾಯರು ಇರುತ್ತಾರೆ.

**3. ಶಿಕ್ಷಣ ಮಟ್ಟ :** 240 ಮುಖ್ಯೋಪಾಧ್ಯಾಯರಲ್ಲಿ ಪದವಿ ಮತ್ತು ಬಿ.ಇಡಿ., ಪದವಿಯನ್ನು ಪಡೆದ ಮುಖ್ಯೋಪಾಧ್ಯಾಯರು 176 ಜನರು, ಸ್ನಾತಕ ಪದವಿ ಮತ್ತು ಬಿ.ಇಡಿ ಪದವಿ ಪಡೆದ 64 ಜನ ಮುಖ್ಯೋಪಾಧ್ಯಾಯರನ್ನು ಪರಿಗಣಿಸಲಾಗಿದೆ.

**4. ಸಂಸ್ಥೆಯ ಮಾದರಿ :** ಮುಖ್ಯೋಪಾಧ್ಯಾಯರು ಕೆಲಸ ಮಾಡುತ್ತಿರುವ ಸಂಸ್ಥೆಯನ್ನಾಧರಿಸಿ ಸರ್ಕಾರಿ ಶಾಲೆಯಲ್ಲಿ ಕಾರ್ಯನಿರ್ವಹಿಸುವ 80 ಜನರನ್ನು ಖಾಸಗಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುವ 160 ಜನರನ್ನು ಪರಿಗಣಿಸಲಾಗಿದೆ.

## ಪರಿಕಲ್ಪನೆಗಳು

1. ಗ್ರಾಮೀಣ ಮುಖ್ಯೋಪಾಧ್ಯಾಯರ (ನಾಲ್ಕು) ವಿಧವಾದ ತೀರ್ಮಾನ ಶೈಲಿಯ ಅಂಶಗಳಿಗೂ ಮತ್ತು ಶೈಲಿಯ ಮೇಲೆ ಪ್ರಭಾವ ಬೀರುವ (ನಾಲ್ಕು) ಅಂಶಗಳಿಗೂ ಯಾವುದೇ ನಿರ್ದಿಷ್ಟವಾದ ಸಹ ಸಂಬಂಧವಿಲ್ಲ.
2. ಗ್ರಾಮೀಣ ಮುಖ್ಯೋಪಾಧ್ಯಾಯರ ವಿವಿಧ ತೀರ್ಮಾನ ಶೈಲಿಗಳ ಮೇಲೆ ಶೈಕ್ಷಣಿಕ ಅಂಶದ ನಿರ್ದಿಷ್ಟ ಪ್ರಭಾವವಿರುವುದಿಲ್ಲ.
3. ಗ್ರಾಮೀಣ ಮುಖ್ಯೋಪಾಧ್ಯಾಯರ ವಿವಿಧ ತೀರ್ಮಾನ ಶೈಲಿಗಳ ಮೇಲೆ ವೈಯಕ್ತಿಕ ಅಂಶದ ನಿರ್ದಿಷ್ಟ ಪ್ರಭಾವವಿರುವುದಿಲ್ಲ.
4. ಗ್ರಾಮೀಣ ಮುಖ್ಯೋಪಾಧ್ಯಾಯರ ವಿವಿಧ ತೀರ್ಮಾನ ಶೈಲಿಗಳ ಮೇಲೆ ಸಂಸ್ಥೆಯ ಮಾದರಿಯ ಅಂಶದ ನಿರ್ದಿಷ್ಟ ಪ್ರಭಾವವಿರುವುದಿಲ್ಲ.
5. ಗ್ರಾಮೀಣ ಮುಖ್ಯೋಪಾಧ್ಯಾಯರ ವಿವಿಧ ತೀರ್ಮಾನ ಶೈಲಿಗಳ ಮೇಲೆ ರಾಜಕೀಯ ಅಂಶದ ನಿರ್ದಿಷ್ಟ ಪ್ರಭಾವವಿರುವುದಿಲ್ಲ.
6. ಗ್ರಾಮೀಣ ಮುಖ್ಯೋಪಾಧ್ಯಾಯರ ವಿವಿಧ ತೀರ್ಮಾನ ಶೈಲಿಗಳ ಮೇಲೆ ಮುಖ್ಯೋಪಾಧ್ಯಾಯರ ವಿವಿಧ ವಯಸ್ಸಿನ ಅಂಶಗಳ ನಡುವೆ ನಿರ್ದಿಷ್ಟವಾದ ವ್ಯತ್ಯಾಸವಿರುವುದಿಲ್ಲ.
7. ಗ್ರಾಮೀಣ ಮುಖ್ಯೋಪಾಧ್ಯಾಯರ ವಿವಿಧ ತೀರ್ಮಾನ ಶೈಲಿಗಳ ಮೇಲೆ ಅವರ ಸೇವಾವಧಿಯು ಯಾವುದೇ ನಿರ್ದಿಷ್ಟ ಪ್ರಭಾವವನ್ನು ಬೀರುವುದಿಲ್ಲ.
8. ಗ್ರಾಮೀಣ ಸರ್ಕಾರಿ ಮತ್ತು ಖಾಸಗಿ ಶಾಲೆಗಳ ಮುಖ್ಯೋಪಾಧ್ಯಾಯರ ತೀರ್ಮಾನ ಶೈಲಿಗಳಲ್ಲಿ ಯಾವುದೇ ನಿರ್ದಿಷ್ಟವಾದ ವ್ಯತ್ಯಾಸವಿರುವುದಿಲ್ಲ.

## ನಮೂನೆ

ಪ್ರಸ್ತುತ ಸಂಶೋಧನೆಯು ಬೆಂಗಳೂರು ಗ್ರಾಮಾಂತರ ಜಿಲ್ಲೆ, ರಾಮನಗರ ಜಿಲ್ಲೆ ಹಾಗೂ ತುಮಕೂರು ಜಿಲ್ಲೆಗಳ ಗ್ರಾಮೀಣ ಪ್ರೌಢಶಾಲಾ ಮುಖ್ಯೋಪಾಧ್ಯಾಯರ ತೀರ್ಮಾನ ಶೈಲಿಯನ್ನು ಕುರಿತು ಅಧ್ಯಯನ ಮಾಡಲಾಗಿದೆ.

ಪ್ರಸ್ತುತ ಅಧ್ಯಯನವು 240 ಗ್ರಾಮೀಣ ಪ್ರೌಢಶಾಲೆಗಳ ಮುಖ್ಯೋಪಾಧ್ಯಾಯರಿಗೆ ಸೀಮಿತವಾಗಿದೆ. ಇದರಲ್ಲಿ ಪ್ರೌಢಶಾಲೆ, ಉನ್ನತ ಪ್ರೌಢಶಾಲೆಗಳೂ ಸೇರಿದೆ, ಖಾಸಗಿ ಮತ್ತು ಸರ್ಕಾರಿ ಶಾಲೆಗಳು ಸೇರಿವೆ. ಮಾದರಿಯನ್ನು ಆಯ್ಕೆ ಮಾಡಲು ವರ್ಗೀಕೃತ ಯಾದೃಚ್ಛಿತ ತಂತ್ರವನ್ನು ಬಳಸಲಾಗಿದೆ.

## ದತ್ತಾಂಶ ಸಂಗ್ರಹನೆಯ ಮಾಪಕಗಳು

ಪ್ರಸ್ತುತ ಸಂಶೋಧನೆಯಲ್ಲಿ ಎರಡು ಮಾಪಕಗಳನ್ನು ಬಳಸಲಾಗಿದೆ.

1. ಮುಖ್ಯೋಪಾಧ್ಯಾಯರ ತೀರ್ಮಾನ ಶೈಲಿಯ ಮಾಪಕ
2. ತೀರ್ಮಾನ ಶೈಲಿಗಳ ಮೇಲೆ ಪ್ರಭಾವ ಬೀರುವ ಅಂಶಗಳ ಮಾಪಕವನ್ನು ಬಳಸಲಾಗಿದೆ.

## ದತ್ತಾಂಶದ ವಿಶ್ಲೇಷಣೆ

ಗ್ರಾಮೀಣ ಮುಖ್ಯೋಪಾಧ್ಯಾಯರ ತೀರ್ಮಾನ ಶೈಲಿಗಳ ಮೇಲೆ ಪ್ರಭಾವ ಬೀರುವ ಅಂಶಗಳ ಮಾಪನದಿಂದ ದೊರೆತ ದತ್ತಾಂಶವನ್ನು ಕನಿಷ್ಠ, ಮಧ್ಯಮ ಮತ್ತು ಗರಿಷ್ಠ ಎಂದು ಮೂರು ಗುಂಪುಗಳಾಗಿ ವಿಂಗಡಣೆ ಮಾಡಿ, ಮುಖ್ಯೋಪಾಧ್ಯಾಯರ ತೀರ್ಮಾನ ಶೈಲಿಗಳ ಅಂಶಗಳ ಸರಾಸರಿ ಹಾಗೂ ವಿತರಣಾಂಕವನ್ನು ಗುಣಿಸಿ ಅವುಗಳ ತುಲನೆಯನ್ನು ಮಾಡಲಾಯಿತು. ಹಾಗೂ ಮುಖ್ಯೋಪಾಧ್ಯಾಯರ ಶೈಲಿಗಳ ಅಂಕಗಳು ಮತ್ತು ಪ್ರಭಾವ ಬೀರುವ ಅಂಶಗಳ ನಡುವಿನ ಸಹ ಸಂಬಂಧ ಸೂಚ್ಯಂಕಗಳನ್ನು ಕಂಡುಹಿಡಿಯಲಾಗಿದೆ. ಇದಕ್ಕಾಗಿ ಪಿಯರ್‌ಸನ್‌ರವರ ಗುಣಕಚಲನಾ ತಂತ್ರವನ್ನು ಬಳಸಲಾಗಿದೆ.

## ಸಂಶೋಧನೆಯ ಇತಿ ಮಿತಿಗಳು

1. ಪ್ರಸ್ತುತ ಸಂಶೋಧನೆಯು ಬೆಂಗಳೂರು ಗ್ರಾಮಾಂತರ, ರಾಮನಗರ ಮತ್ತು ತುಮಕೂರು ಗ್ರಾಮೀಣ ಮುಖ್ಯೋಪಾಧ್ಯಾಯರ ತೀರ್ಮಾನ ಶೈಲಿಗೆ ಸೀಮಿತವಾಗಿದೆ.
2. ಪ್ರಸ್ತುತ ಅಧ್ಯಯನವು ಪ್ರೌಢಶಾಲೆ ಮತ್ತು ಉನ್ನತ ಪ್ರೌಢಶಾಲಾ ಮುಖ್ಯೋಪಾಧ್ಯಾಯರ ತೀರ್ಮಾನ ಶೈಲಿಗೆ ಸೀಮಿತವಾಗಿದೆ.
3. ಪ್ರಸ್ತುತ ಅಧ್ಯಯನವು ಕೇವಲ 240 ಮುಖ್ಯೋಪಾಧ್ಯಾಯರಿಗೆ ಮಾತ್ರ ಸೀಮಿತವಾಗಿದೆ.
4. ಪ್ರಸ್ತುತ ಅಧ್ಯಯನದ ಮಾಪನವು ಕನ್ನಡ ಭಾಷಾ ಮಾಧ್ಯಮದ ಶಾಲೆಗಳಲ್ಲಿ ಕಾರ್ಯನಿರ್ವಹಿಸುವ ಮುಖ್ಯೋಪಾಧ್ಯಾಯರಿಗೆ ಸೀಮಿತವಾಗಿದೆ.

## ಅಧ್ಯಯನದಿಂದ ಕಂಡುಬರುವ ಫಲಿತಾಂಶಗಳು

ಪ್ರಸ್ತುತ ಸಂಶೋಧನೆಯಲ್ಲಿ ಮುಖ್ಯೋಪಾಧ್ಯಾಯರ ಶೈಲಿಯನ್ನು ಗಮನಿಸಿದಾಗ ರಾಜಕೀಯ ಅಂಶವನ್ನು ಬಿಟ್ಟು ಉಳಿದ ಯಾವ ಅಂಶವೂ ಪ್ರಭಾವ ಬೀರಿರುವುದಿಲ್ಲ. ಮುಖ್ಯೋಪಾಧ್ಯಾಯರ ಅನುಭವ, ಶಿಕ್ಷಣಮಟ್ಟ ಶಾಲೆಯ ಮಾದರಿಗಳು ಯಾವುದೇ ಪ್ರಭಾವ ಬೀರಿಲ್ಲ.

ವಯಸ್ಸಿನ ಪ್ರಭಾವವು ನೌಕರಶಾಹಿ ತೀರ್ಮಾನ ಶೈಲಿಯ ಮೇಲೆ ಪ್ರಭಾವ ಬೀರಿರುವುದು ಕಂಡುಬಂದಿದೆ. ಅಂದರೆ 40 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮುಖ್ಯೋಪಾಧ್ಯಾಯರ ನಿರಂಕುಶ ಶೈಲಿಯು 41 ವರ್ಷ ವಯಸ್ಸಿನ ಮೇಲ್ಪಟ್ಟ ಮುಖ್ಯೋಪಾಧ್ಯಾಯರ ನಿರಂಕುಶ ಶೈಲಿಗಿಂತ ಹೆಚ್ಚಾಗಿದೆ.

ರಾಜಕೀಯ ಮತ್ತು ಶೈಕ್ಷಣಿಕ ಅಂಶಗಳ ಪ್ರಭಾವವು ನೌಕರಶಾಹಿ ತೀರ್ಮಾನ ಶೈಲಿಯ ಮೇಲೆ ಯಾವುದೇ ಪ್ರಭಾವವಿರುವುದಿಲ್ಲ. ವೈಯಕ್ತಿಕ ಹಾಗೂ ಸಂಸ್ಥೆಯ ಅಂಶವು ತೀರ್ಮಾನ ಶೈಲಿಯ ಮೇಲೆ ಪ್ರಭಾವ ಬೀರಿರುವುದು ಕಂಡುಬರುತ್ತದೆ.

ಮುಖ್ಯೋಪಾಧ್ಯಾಯರ ತೀರ್ಮಾನ ಶೈಲಿಗಳ ಮೇಲೆ ಪ್ರಭಾವ ಬೀರುವ ಅಂಶಗಳಲ್ಲಿ ಮುಖ್ಯೋಪಾಧ್ಯಾಯರ ಅನುಭವವು ಅಂದರೆ 18 ವರ್ಷ ಅನುಭವವುಳ್ಳವರಿಗಿಂತ ಕಡಿಮೆ ಅನುಭವವುಳ್ಳ ಮುಖ್ಯೋಪಾಧ್ಯಾಯರಲ್ಲಿ ಹೆಚ್ಚು ಪ್ರಭಾವ ಕಂಡುಬಂದಿದೆ.

ಪ್ರಜಾಪ್ರಭುತ್ವ ತೀರ್ಮಾನ ಶೈಲಿಯ ಮೇಲೆ ಮುಖ್ಯೋಪಾಧ್ಯಾಯರ ಶೈಕ್ಷಣಿಕ ಸಂಸ್ಥೆಯ ಅಂಶ, ರಾಜಕೀಯ ಅಂಶಗಳು ಪ್ರಭಾವ ಬೀರಿರುವುದು ಕಂಡುಬಂದಿದೆ.

ಗ್ರಾಮೀಣ ಮುಖ್ಯೋಪಾಧ್ಯಾಯರ ಮಾನವೀಯ ತೀರ್ಮಾನ ತೆಗೆದುಕೊಳ್ಳುವಾಗ ಅನುಸರಿಸುವ ಶೈಲಿಯ ಮೇಲೆ ಮಾನವೀಯ ತೀರ್ಮಾನ ಶೈಲಿಯನ್ನು ಹೆಚ್ಚಾಗಿ ಅನುಸರಿಸುವವರಾಗಿದ್ದಾರೆ ಹಾಗೂ ನಿರಂಕುಶ ಶೈಲಿಯನ್ನು ಅತ್ಯಂತ ಕಡಿಮೆಯಾಗಿ ಬಳಸಿರುವುದು ಕಂಡುಬಂದಿದೆ.

## ಶೈಕ್ಷಣಿಕ ನಿಹಿತಾರ್ಥಗಳು

1. ಪ್ರಸ್ತುತ ಸಂಶೋಧನೆಯಿಂದ ಗ್ರಾಮೀಣ ಮುಖ್ಯೋಪಾಧ್ಯಾಯರ ತೀರ್ಮಾನ ಶೈಲಿ ಹಾಗೂ ಅದರ ಮೇಲೆ ಪ್ರಭಾವ ಬೀರುವ ಅಂಶಗಳ ಬಗ್ಗೆ ಅಧ್ಯಯನ ನಡೆಸಿದಾಗ ತಿಳಿದ ಬಂದ ಅಂಶವೆಂದರೆ ಮಾನವೀಯ ತೀರ್ಮಾನ ಶೈಲಿಯು ಹೆಚ್ಚಾಗಿದ್ದು ನಂತರದಲ್ಲಿ ಪ್ರಜಾಪ್ರಭುತ್ವ ಶೈಲಿ, ನಂತರ ನೌಕರಶಾಹಿ ಕೊನೆಯದಾಗಿ ನಿರಂಕುಶ ಶೈಲಿಯ ಪ್ರಭಾವವು ಇರುವುದು ಕಂಡುಬಂದಿದೆ. ಇದು ಒಂದು ಶುಭಸೂಚಕ. ಮುಖ್ಯೋಪಾಧ್ಯಾಯರು ಕೈಗೊಳ್ಳುವ ತೀರ್ಮಾನಗಳು ಸರ್ವಸಮ್ಮತ ಹಾಗೂ ಸರ್ವಹಿತವಾಗಿದೆ. ಪ್ರಜಾಪ್ರಭುತ್ವ ಹಾಗೂ ಮಾನವೀಯ ದೃಷ್ಟಿಕೋನದಿಂದ ಕೈಗೊಳ್ಳುವ ತೀರ್ಮಾನಗಳು ಶಾಲೆಯ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಅನುಕೂಲವಾಗುತ್ತದೆ. ಆದ್ದರಿಂದ ನಿರಂಕುಶ ತೀರ್ಮಾನ ಶೈಲಿಯುಳ್ಳ ಮುಖ್ಯೋಪಾಧ್ಯಾಯರಿಗೆ ಸೂಕ್ತ ಮಾರ್ಗದರ್ಶನ ನೀಡುವುದು ಅಗತ್ಯವಾಗಿದೆ. ಆದ್ದರಿಂದ ತೀರ್ಮಾನ ಶೈಲಿಯನ್ನು ಬೆಳೆಸಿಕೊಳ್ಳುವಲ್ಲಿ ಸೂಕ್ತ ತರಬೇತಿ ನೀಡಬಹುದಾಗಿದೆ.

ಗ್ರಾಮೀಣ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರ ತೀರ್ಮಾನ ಶೈಲಿಯ ಮೇಲೆ ಸಂಸ್ಥೆಯ ಪ್ರಭಾವವು ನೌಕರಶಾಹಿ ಶೈಲಿಯನ್ನು ನಿಯಂತ್ರಿಸುವಂತೆ ಕಾಣುತ್ತದೆ. ಈ ಅಂಶದ ಬಗ್ಗೆ ಹೆಚ್ಚಿನ ಅಧ್ಯಯನ ಅಗತ್ಯವಾಗಿದೆ.

ಗ್ರಾಮೀಣ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರ ತೀರ್ಮಾನ ಶೈಲಿಯ ಮೇಲೆ ರಾಜಕೀಯ ಪ್ರಭಾವ ಹಾಗೂ ನಿರಂಕುಶ ತೀರ್ಮಾನ ಶೈಲಿಗಳು ಹೆಚ್ಚು ಸಂಬಂಧವಿರುವಂತೆ ತಿಳಿದು ಬರುತ್ತದೆ. ಇದರ ಬಗ್ಗೆ ಹೆಚ್ಚಿನ ಅಧ್ಯಯನ ಅಗತ್ಯವಾಗಿದೆ.

ಗ್ರಾಮೀಣ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರ ತೀರ್ಮಾನ ಶೈಲಿಯಲ್ಲಿ ಕಡಿಮೆ ವಯಸ್ಸಿನವರಲ್ಲಿ ಮಾನವೀಯ ತೀರ್ಮಾನ ಕೈಗೊಳ್ಳುವುದರಲ್ಲಿ ತರಬೇತಿಯ ಅವಶ್ಯಕತೆ ಇದೆ ಎಂದು ಸ್ಪಷ್ಟವಾಗಿದೆ. ಹಿರಿಯ ವಯಸ್ಸಿನ ಮುಖ್ಯೋಪಾಧ್ಯಾಯರು ಸಹಜವಾಗಿ ವರ್ತಿಸುವ ಪ್ರವೃತ್ತಿಯುಳ್ಳವರಾಗಿರುವುದರಿಂದ ಆಗಾಗ್ಗೆ ಸೇವಾ ನಿರತ ತರಬೇತಿಗಳನ್ನು ಮಾನವ ಸಂಪನ್ಮೂಲ ಬೆಳವಣಿಗೆಗಳ ಬಗ್ಗೆ ಆಧುನಿಕ ಮಾಹಿತಿಗಳನ್ನು ಒದಗಿಸುವುದು ಅತ್ಯಂತ ಅವಶ್ಯಕ.

ಸ್ನಾತಕೋತ್ತರ ಪದವೀಧರ ಮುಖ್ಯೋಪಾಧ್ಯಾಯರು ಹೆಚ್ಚು ನೌಕರಶಾಹಿ ತೀರ್ಮಾನ ಶೈಲಿಯನ್ನು ಹೊಂದಿದ್ದು ಕಂಡುಬಂದಿದೆ. ಇವರಿಗೆ ಮಾನವೀಯ ಶೈಲಿಯ ಬಳಕೆಯ ಸೂಕ್ತ ತರಬೇತಿ ನೀಡಬಹುದಾಗಿದೆ.

ಸರ್ಕಾರಿ ಶಾಲೆಯಲ್ಲಿ ಕೆಲಸ ಮಾಡುವ ಮುಖ್ಯೋಪಾಧ್ಯಾಯರು ಖಾಸಗಿ ಶಾಲೆಯ ಮುಖ್ಯೋಪಾಧ್ಯಾಯರುಗಳಿಗಿಂತ ಹೆಚ್ಚು ನಿರಂಕುಶ ಶೈಲಿಯನ್ನು ಹೊಂದಿರುವುದು ತಿಳಿದುಬರುತ್ತದೆ. ಅವರಿಗೆ ಮಾನವೀಯ ಶೈಲಿಯ ತೀರ್ಮಾನವನ್ನು ಕೈಗೊಳ್ಳುವ ಪ್ರವೃತ್ತಿಯ ಸೂಕ್ತ ತರಬೇತಿ ಅವಶ್ಯಕವಾಗಿದೆ.

ಪ್ರಸ್ತುತ ಸಂಶೋಧನೆಯಿಂದ ತಿಳಿದುಬರುವ ಅಂಶವೆಂದರೆ ಶಿಕ್ಷಕ ತರಬೇತಿ ಕೇಂದ್ರಗಳಲ್ಲಿ ಆಡಳಿತ ಮತ್ತು ತೀರ್ಮಾನ ಕೈಗೊಳ್ಳುವುದರಲ್ಲಿ ಆಧುನಿಕ ತಂತ್ರಜ್ಞಾನದ ಬಳಕೆ ಹಾಗೂ ನಿಜವಾದ ನಾಯಕರನ್ನಾಗಿ ಮಾಡುವುದು ಬಹಳ ಅವಶ್ಯಕ, ಮನೋವಿಜ್ಞಾನ, ನಿರ್ವಹಣಾ ತಂತ್ರಗಳು, ಪರಸ್ಪರ ಸಂವಹನ ಮಾದರಿಗಳು, ವ್ಯಕ್ತಿ ಸಾಮರ್ಥ್ಯ ವಿಕಾಸ ಮುಂತಾದ ಅಂಶಗಳ ಬಗ್ಗೆ ತರಬೇತಿ ನೀಡಿ ನಿಜವಾದ ಪ್ರಭಾವಿತ ನಾಯಕರನ್ನಾಗಿ ಮಾಡಿ ಉತ್ತಮ ಶೈಕ್ಷಣಿಕ ಮುಂದಾಳುಗಳನ್ನಾಗಿ ತಯಾರಿ ಮಾಡಬಹುದಾಗಿದೆ.

## ಭಾವೀ ಸಂಶೋಧನೆಗೆ ಸಲಹೆಗಳು

1. ನಗರ ಹಾಗೂ ಪಟ್ಟಣ ಪ್ರದೇಶದ ಪ್ರೌಢಶಾಲೆಗಳಲ್ಲಿ ಕಾರ್ಯನಿರ್ವಹಿಸುವ ಮುಖ್ಯೋಪಾಧ್ಯಾಯರ ತೀರ್ಮಾನ ಶೈಲಿಗಳ ಮೇಲೆ ಪ್ರಭಾವ ಬೀರುವ ಅಂಶಗಳನ್ನು ಸಹ ಅಧ್ಯಯನ ಮಾಡಬಹುದಾಗಿದೆ.
2. ಮುಖ್ಯೋಪಾಧ್ಯಾಯರ ತೀರ್ಮಾನ ಶೈಲಿ ಮೇಲೆ ಅವರ ವ್ಯಕ್ತಿತ್ವದ ಪ್ರಭಾವವನ್ನು ಅಧ್ಯಯನ ಮಾಡಬಹುದು.
3. ಮಾನವ ಸಂಪನ್ಮೂಲ ವಿಕಾಸಗಳ ಯೋಜನೆಗಳಲ್ಲಿ ನಾಯಕತ್ವ ತರಬೇತಿ ಕಾರ್ಯಕ್ರಮ ಹಾಗೂ ತೀರ್ಮಾನ ಕೈಗೊಳ್ಳುವ ಶೈಲಿಗಳ ಬಗ್ಗೆ ಪ್ರಯೋಗಾತ್ಮಕ ಅಧ್ಯಯನಗಳನ್ನು ನಡೆಸಬಹುದು.
4. ಪದವಿಪೂರ್ವ ಶಿಕ್ಷಣ ಮಹಾವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುವ ಪ್ರಾಚಾರ್ಯರ ತೀರ್ಮಾನ ಶೈಲಿಯ ಮೇಲೆ ಪ್ರಭಾವ ಬೀರುವ ಅಂಶಗಳ ಬಗ್ಗೆ ಅಧ್ಯಯನ ಮಾಡಬಹುದಾಗಿದೆ.
5. ರಾಜ್ಯ ಮಟ್ಟದಲ್ಲಿನ ಪ್ರೌಢಶಾಲೆಗಳಲ್ಲಿ ಕಾರ್ಯನಿರ್ವಹಿಸುವ ಮುಖ್ಯೋಪಾಧ್ಯಾಯರ ತೀರ್ಮಾನ ಶೈಲಿಯ ಮೇಲೆ ಪ್ರಭಾವ ಬೀರುವ ಅಂಶಗಳ ಬಗ್ಗೆ ಅಧ್ಯಯನ ಮಾಡಬಹುದಾಗಿದೆ.

## ಆಕರ ಗ್ರಂಥಗಳು


- **ಇಂದಿರಾ ಆರ್**. 1986 – ಸಾಮಾಜಿಕ ಸಂಶೋಧನಾ ವಿಧಾನಗಳು, ವಿದ್ಯಾಸಾಗರ ಮುದ್ರಣ ಮತ್ತು ಪ್ರಕಾಶನಾಲಯ
- **ವೀರಭದ್ರಪ್ಪ ಎಂ. ಬಿ.** 1983 – ಶೈಕ್ಷಣಿಕ ಆಡಳಿತ ಮತ್ತು ಪ್ರಚಲಿತ ಸಮಸ್ಯೆಗಳು, ಭಾರತೀಯ ಪ್ರಕಾಶನ
- **Agarwal Y. P.** 1990 **:** "Statistical Methods" Sterling Publishers Pvt. Ltd.,
- **Arnald John D.** And **Jompkina Bert 1985, :** How to make the right decision J Ballantive Book New York
- **Bhalock M.** 1960 **:**"Social Statistics" Me graw-Hill Book Company
- **Buch M. B. :** Survey of Educational Research In India Vol. 1,2,3,4,5 C.A.S.E.Borada
- **Garett H. E.** 1981**:** "Statistics in psychology and Education" Vakils Feffer and Simons Ltd., Bombay
- **Dr. Rambhai N. Patel** 2002 **:** "Educational Evaluation" Himalaya Publishing House.
- **Tyasi A. R.** 1983 **:** "Public Administration principles and Practice" Atmaram and Sons Delhi.



■■

ISSN : 2249-2429 ಶಿಕ್ಷಣ ತಜ್ಞರು RNI REG.NO.KARKAN/2011/38712

# ವಿನೋಬಾ ಭಾವೆ (ಕ್ರಿ.ಶ. 1894–1986)

## (VINOBHA BHAVE - 1894-1986)

✍ **ಆರ್. ಎಸ್. ಪಾಟೀಲ,** ಎಚ್. ಸಿ. ಇ. ಎಸ್. ಕಾಲೇಜ್, ಗದಗ.



### ಜೀವನ

ಆಚಾರ್ಯ ವಿನೋಬಾ ಭಾವೆಯವರು 1894 ರಲ್ಲಿ ಮಹಾರಾಷ್ಟ್ರದ ಒಂದು ಹಳ್ಳಿಯಲ್ಲಿ ಜನಿಸಿದರು. ಚಿಕ್ಕಂದಿನಿಂದಲೂ ಶ್ರೀ ರಾಮದಾಸರ ಮತ್ತು ಶ್ರೀ ಶಂಕರಾಚಾರ್ಯರ ತತ್ವಗಳಿಂದ ಪ್ರಭಾವಿತರಾದರು. ಅಜೀವ ಪರ್ಯಂತ ಬ್ರಹ್ಮಚಾರಿಯಾಗಿಯೇ ಉಳಿದರು. 1916 ರಲ್ಲಿ ವಿನೋಬಾರವರು ಗಾಂಧಿಜಿಯವರ ಸಂಪರ್ಕದಲ್ಲಿ ಬಂದರು. ಅಂದಿನಿಂದ ಅವರ ಅನುಯಾಯಿಯಾದರು. ಅವರು ಸಾಬರಮತಿ ಆಶ್ರಮದಲ್ಲಿಯೇ ಗಾಂಧಿಜಿಯವರ ಜೊತೆಗೆ ವಾಸಿಸಹತ್ತಿದರು. 1940 ರಲ್ಲಿ ಅಸಹಕಾರ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದರು. ಸ್ವಾತಂತ್ರ್ಯಾನಂತರ ಅವರು ಯಾವುದೇ ಉನ್ನತ ಹುದ್ದೆಗಾಗಿ ಪ್ರಯತ್ನಿಸಲಿಲ್ಲ, ಗಾಂಧೀಜಿಯ ಮರಣದ ನಂತರ ಸರ್ವೋದಯ ಮತ್ತು ಭೂದಾನ ಚಳುವಳಿಗಳನ್ನು ಪ್ರಾರಂಭಿಸಿದರು.

### ಶೈಕ್ಷಣಿಕ ತತ್ವಜ್ಞಾನ

ಅವರು ಶಿಕ್ಷಣದ ಎರಡು ಮುಖಗಳ ಬಗ್ಗೆ ಹೇಳಿದ್ದಾರೆ. ಒಂದು ಮನುಷ್ಯನ ಆಂತರಿಕ ಶಿಕ್ಷಣ ಮತ್ತು ಇನ್ನೊಂದು ಅವನ ಬಾಹ್ಯ ಶಿಕ್ಷಣ. ಮನುಷ್ಯನ ಆತ್ಮವನ್ನು ಬಲಗೊಳಿಸುವುದೇ ಆಂತರಿಕ ಶಿಕ್ಷಣ. ಅವರ ಬಾಹ್ಯ ಶಿಕ್ಷಣದ ವಿಚಾರವು ಇಂದಿನ ಶಾಲೆಗಳಿಗೆ ಅನ್ವಯವಾಗುತ್ತದೆ. ಆದರೆ ನಿಜವಾಗಿಯೂ ವಿನೋಬಾರವರು ಎರಡು ಮುಖಗಳ ಸಮ್ಮಿಳನವನ್ನು ಬಯಸಿದ್ದರು. ಮಕ್ಕಳು ಸ್ವಾವಲಂಬಿಯಾಗಬೇಕೆಂಬುದನ್ನು ಅವರು ಪ್ರತಿಪಾದಿಸಿದರು. ಜ್ಞಾನ ಪಡೆಯುವುದರ ಜೊತೆಗೆ ಜೀವನದ ಅವಶ್ಯಕತೆಗಳನ್ನೂ ಪೂರೈಸಿಕೊಳ್ಳುವಂತಾಗಬೇಕು. ಹೀಗೆ ದೇಶದ ಮತ್ತು ಕಾಲದ ಪ್ರವಾಹಕ್ಕೆ ಹೊಂದಾಣಿಕೆಯಾಗುವ ಶಕ್ತಿಯನ್ನು ವಿದ್ಯಾರ್ಥಿಗಳು ಪಡೆಯುವುದವಶ್ಯ.

ವಿನೋಬಾರವರು ಮಹಾತ್ಮಾ ಗಾಂಧಿಯವರ ತತ್ವಗಳಿಂದ ಪ್ರಭಾವಿತರಾಗಿದ್ದರು. ಹಾಗೆಯೇ ಅವರ ಶೈಕ್ಷಣಿಕ ವಿಚಾರಗಳಲ್ಲಿಯೂ ಗಾಂಧೀಜಿಯವರ ಪ್ರಭಾವ ಬೀಳದಿರಲಿಲ್ಲ. ಗಾಂಧೀಜಿ ಹೇಳಿದ ಮೂಲ ಶಿಕ್ಷಣದ ತತ್ವಗಳನ್ನು ವಿನೋಭಾ ಒಪ್ಪಿಕೊಂಡರು ಮತ್ತು ಅರದಂತೆಯೇ ತಮ್ಮ ಶೈಕ್ಷಣಿಕ ತತ್ವಗಳನ್ನು ರೂಪಿಸಿದರು.

### ಶಿಕ್ಷಣದ ಗುರಿ

ವಿನೋಬಾರವರು ಸರ್ವೋದಯ ಸಮಾಜಕ್ಕೆ ಹೊಂದುವಂತೆ ಶಿಕ್ಷಣದ ಗುರಿಗಳನ್ನು ರೂಪಿಸಿದ್ದಾರೆ. ವಿದ್ಯಾರ್ಥಿಗಳು ಜ್ಞಾನದಾಹಿ, ಕರ್ತವ್ಯನಿಷ್ಠ, ವಿಚಾರಶೀಲ ಮತ್ತು ಸ್ವಾವಲಂಬಿಗಳಾಗುವ ಗುರಿಯನ್ನು ಹೊಂದಿರಬೇಕು. ಪರೋಪಕಾರ ಸಮಾಜ ಸೇವಾ ಗುಣಗಳೂ ಅವರಲ್ಲಿ ಬರುವುದವಶ್ಯ. ಈ ಎಲ್ಲ ಗುಣಗಳನ್ನು ವಿದ್ಯಾರ್ಥಿಗಳಲ್ಲಿ ತುಂಬುವ ಮಹತ್ವದ ಗುರಿಯನ್ನು ಶಿಕ್ಷಣವು ಹೊಂದಿರಬೇಕು. ಮಕ್ಕಳು ಸದಾ ಚಟುವಟಿಕೆ ಯಿಂದಿರಬೇಕು. ಸದಾ ಕಾರ್ಯದಲ್ಲಿ ತೊಡಗಿರುವುದರಿಂದ ಮಕ್ಕಳು ಜ್ಞಾನ ಪಡೆಯುತ್ತಾರೆ. ಆ ಜ್ಞಾನದಿಂದ ಮಾತ್ರ ಸತ್ಯವನ್ನು ತಿಳಿಯುತ್ತಾರೆ. ಈ ಸತ್ಯವನ್ನು ಮಕ್ಕಳಿಗೆ ತೋರಿಸುವದು ಶಿಕ್ಷಣದ ಪ್ರಮುಖ ಗುರಿಯಾಗಿರಬೇಕೆಂದು ವಿನೋಬಾ ಭಾವೆಯವರ ಅಭಿಪ್ರಾಯವಾಗಿತ್ತು.

### ಪಠ್ಯಕ್ರಮ

ಪಠ್ಯಕ್ರಮವು ಮಕ್ಕಳ ಜ್ಞಾನೇಂದ್ರಿಯಗಳ ಸರಿಯಾದ ಬೆಳವಣಿಗೆಗೆ ಅನುಕೂಲ ವಾಗುವಂತಿರಬೇಕು. ಕಾರಣ ಅವರು ಶಿಕ್ಷಣವನ್ನು ಮೂರು ಭಾಗಗಳಾಗಿ ವಿಂಗಡಿಸಿದ್ದಾರೆ. ಮೊದಲ ಭಾಗದಲ್ಲಿ, ಮಕ್ಕಳು, ನಿಸರ್ಗದ ಜೊತೆಗೆ ಬೆರೆಯಬೇಕು. ಎರಡನೆಯ ಭಾಗದಲ್ಲಿ, ಮಕ್ಕಳು ಸ್ವಾವಲಂಬಿಯಾಗಬೇಕು. ಮೂರನೆಯ ಭಾಗದಲ್ಲಿ ಅವರು ತಮ್ಮ ಬಗ್ಗೆಯೇ ತಿಳಿಯುವಂತಾಗಬೇಕು. ಈ ಮೂರು ಭಾಗಗಳ ಶಿಕ್ಷಣಕ್ಕೆ ಅನುಕೂಲವಾಗುವ ಪಠ್ಯಕ್ರಮ ನಿರ್ಧರಿತವಾಗಬೇಕೆಂಬುದು ವಿನೋಬಾರ ಅಭಿಪ್ರಾಯ.

ಶಿಕ್ಷಣದ ಮೂಲಕ ಮಕ್ಕಳ ಶಾರೀರಿಕ ಮತ್ತು ಮಾನಸಿಕ ಬೆಳವಣಿಗೆಯಾಗಬೇಕು. ಅದಕ್ಕಾಗಿ ಪಠ್ಯಕ್ರಮದಲ್ಲಿ ದೈಹಿಕ ಶಿಕ್ಷಣಕ್ಕೆ ಮಹತ್ವದ ಸ್ಥಾನ ದೊರೆಯಬೇಕು. ಮಾತನಾಡುವ ಶಕ್ತಿ ಮತ್ತು ಕಲೆ ಬೆಳೆಯಲು ಮಕ್ಕಳು ಕವನಗಳನ್ನು, ಭಜನೆಗಳನ್ನು ಮತ್ತು ಇತರ ಪದಗಳನ್ನು ಹಾಡಲು ಕಲಿಯುವುದವಶ್ಯ. ವ್ಯವಹಾರಕ್ಕೆ ಉಪಯುಕ್ತವಾದ ಗಣಿತವನ್ನು ಕಲಿಸಬೇಕು.

ವಿನೋಬಾರವರು ಒಂದು ನಿರ್ದಿಷ್ಟಪಡಿಸಿದ ಪಠ್ಯಕ್ರಮವಿರಬೇಕೆಂಬುದನ್ನು ಒಪ್ಪಲಿಲ್ಲ. ಪಠ್ಯಕ್ರಮವು ಸಮಾಜದ ಅವಶ್ಯಕತೆಗಳ ಬದಲಾವಣೆಗೆ ತಕ್ಕಂತೆ ಬದಲಾಗಬೇಕಾದುದು ಸಹಜ. ಆದ್ದರಿಂದ ದೇಶದ ಮತ್ತು ಸಮಾಜದ ಇಂದಿನ ಅವಶ್ಯಕತೆಗಳನ್ನು ಗಮನದಲ್ಲಿರಿಸಿಕೊಂಡು. ಪಠ್ಯಕ್ರಮವನ್ನು ಬದಲಾಯಿಸಬೇಕು ಎಂದು ವಿನೋಬಾ ಅಭಿಪ್ರಾಯಪಟ್ಟರು. ಮಹಾತ್ಮಾ ಗಾಂಧೀಜಿಯಂತೆ ವಿನೋಬಾ ಕೂಡ ಪ್ರಾಯೋಗಿಕ ಕಲೆ ಮತ್ತು ಕೈಕೆಲಸಕ್ಕೆ ಮಹತ್ವ ಕೊಟ್ಟಿದ್ದಾರೆ. ಒಟ್ಟಿನಲ್ಲಿ ವಿಷಯ ಆಯ್ಕೆ ಮಾಡುವಾಗ ಮಕ್ಕಳ ಆಸಕ್ತಿಯನ್ನು ಗಮನದಲ್ಲಿರಿಸಿಕೊಳ್ಳುವುದಕ್ಕೆ ಆದ್ಯತೆ ಕೊಡಬೇಕು. ಆಗ ಮಾತ್ರ ಪಠ್ಯಕ್ರಮವು ತನ್ನ ಗುರಿಯನ್ನು ಮುಟ್ಟಬಲ್ಲದು.

### ಗುರುಕುಲ ಪದ್ಧತಿ

ವಿನೋಬಾರವರು ಗುರುಕುಲ ಪದ್ಧತಿಯ ಶಿಕ್ಷಣವನ್ನು ಬಯಸಿದರು. ಈ ಪದ್ದತಿಯು ಮಕ್ಕಳ ಶಿಕ್ಷಣಕ್ಕೆ ಅನುಕೂಲಕರವಾಗಿದೆ. ಇಂಥ ಶಾಲೆಯು ಒಂದು ಕುಟುಂಬದಂತಾಗುತ್ತದೆ. ಈ ಕುಟುಂಬದಲ್ಲಿದ್ದು ಮಗು ಕಲಿಯುವುದರಿಂದ ಮಗುವಿನ ಸರ್ವಾಂಗೀಣ ಬೆಳವಣಿಗೆ ಸಾಧ್ಯವಾಗುವುದು. ಇದರಂತೆ ''ಕುಟುಂಬ ಶಾಲೆ''ಗಳನ್ನು ಪ್ರಾರಂಭಿಸುವುದು ಒಳ್ಳೆಯದೆಂದು ವಿನೋಬಾ ಹೇಳಿದರು.

ವಿನೋಬಾರವರು ಶಿಕ್ಷಕರ ಬಗ್ಗೆಯೂ ಮಹತ್ವದ ಮಾತುಗಳನ್ನು ಹೇಳಿದ್ದಾರೆ. ಆದರ್ಶ ಶಿಕ್ಷಕನಾದವನು ಉನ್ನತ ಗುಣಗಳನ್ನು ಹೊಂದಿರಬೇಕು. ಅವನು ಕರ್ತವ್ಯನಿಷ್ಠ, ಸದ್ಗುಣಿ, ಹಾಸ್ಯ ಸ್ವಭಾವದವ, ಸ್ವಾವಲಂಬಿ, ತಾಳ್ಮೆಯುಳ್ಳವ, ನಿಸರ್ಗ ಪ್ರೇಮಿ, ದೇಶಭಕ್ತಿ ಮಾನವೀಯತೆಯ ಪ್ರೇಮಿಯಾಗಿರಬೇಕು. ಇಂಥ ಎಲ್ಲ ಗುಣಗಳಿಂದ ಶಿಕ್ಷಕನಾದವನು ವಿದ್ಯಾರ್ಥಿಗಳಿಗೆ ಮಾದರಿಯಾಗಬಲ್ಲ.

ಒಟ್ಟಿನಲ್ಲಿ ವಿನೋಬಾ ಒಬ್ಬ ಆದರ್ಶವಾದಿ, ಗಾಂಧೀವಾದಿ. ಅದನ್ನೇ ಶಿಕ್ಷಣದಲ್ಲಿ ಪ್ರತಿಪಾದಿಸಿದರು.

■■